(Details regarding places, duration of time, amount spent, particulars of works and number of persons employed may be furnished.)

A.—Sri Kadidal MANJAPPA (Minister for Revenue).—

The following two scarcity relief works were undertaken in Chikodi Taluk during the year 1958-59:—

1. Improvements to Hattarwat approach Road.
2. Constructing Mamadapur-Jodatti Road.

Vide Statement below.—

Relief Works undertaken in Chikodi Taluka.

Serial Number	Name of the work	Estimated cost	Average daily attendance of labour	Date of commencement of work	Probable date of closure	Amount expended	Other explanatory note
1	2	3	4	5	6	7	8
		Rs.	Nos.				
1	Improvements to Hattarwat approach road.	30,307	50	16-4-1959	July, 1959 end	21854.64	...
2	Constructing Mamadapur Jodhatti road.	25,000	160	15-3-1959	Do	5095.68	...

MYSORE LEGISLATURE SALARIES (AMENDMENT) BILL 1959.

Introduction.

Sri T. SUBRAMANYA (Minister for Law, labour and Local-Self Government).—Sir, I beg to introduce the Mysore Legislature Salaries (Amendment) Bill, 1959.

Mr. SPEAKER.—The Mysore Legislature Salaries (Amendment) Bill, 1959 is introduced.

Member's Representation.

Sri C. J. MUCKANNAPPA (Gubbi).—Before proceeding with the next item of business, I want to remind the Chair, Sir, about a certain ruling that the Chair had promised to give relating to a matter of the Public Service Commission whether we can speak about and question the deeds of the Public Service Commission. The matter is still pending since 18 months.

Mr. SPEAKER.—I will give that ruling.

MYSORE LAND REFORMS BILL, 1958.

Motion to consider (contd.)

ಶ್ರೀ ಜಿ. ಎಸ್. ಬೊಮ್ಮೇಗೌಡ (ಮಂಡ್ಯ).—ಮಾನ್ಯ ಅಧ್ಯಕ್ಷರೇ, ಬೇರೆ ಬೇರೆ ಕ್ಷೇತ್ರಗಳಲ್ಲಿ ಬರುವ ವರಮಾನದಮೇಲೆ ಸುಧಾರಣೆಯನ್ನು ತರದೆ ರೈತನ ಮೇಲೆಯೇ ಸುಧಾರಣೆಯನ್ನು ತರಬೇಕಾದ ಅವಸರವಾದರೂ ಏನಿತ್ತು ಎಂದು ನಾನು ಕೇಳುತ್ತೇನೆ. ಹಾಗೆ ಕೇಳುವಾಗ ಸರಕಾರಕ್ಕೆ ಕೇಂದ್ರದಿಂದ ಸೂಚನೆ ಬಂದರೆ ಅದರಂತೆ ನಾವು ಜಾರಿಗೆ ತರಬೇಕಾಗಿದೆ ಎಂದು ಉತ್ತರ ಕೊಡುವಿರಿ. ನಿಮ್ಮ ಉತ್ತರವನ್ನು ನೋಡಿದರೆ ನೀವು ಕೇವಲ ಟೈಪ್ ರೈಟಿಂಗ್ ಮಿಷನ್ ಇದ್ದಂತೆ ಮಾತ್ರ ಅನ್ನಿಸುತ್ತದೆ. ದೇಶದಲ್ಲಿರುವ ಎಲ್ಲ ಹಳ್ಳಿಗಳಲ್ಲಿಯೂ ಇರುವ ನಾನಾ ಸಮಸ್ಯೆಗಳನ್ನು ಕ್ರೋಡೀಕರಿಸಿ ಯಾವ ರೀತಿ ಬಿಡಿಸಬೇಕು ಎನ್ನುವುದೆಲ್ಲ ಅಧಿಕಾರ ವಹಿಸಿರತಕ್ಕಂತಹ ಮಂತ್ರಿಗಳಿಗೆ ಸೇರಿದ್ದು. ಒಂದು ವಿಷಯವನ್ನು ಈ ಸಭೆಯ ಗಮನಕ್ಕೆ ತರಬೇಕಾಗಿದೆ. ಈ ಮಂತ್ರಿಮಂಡಲದಲ್ಲಿ ಮಂತ್ರಿಗಳಾಗಿರತಕ್ಕ ಶ್ರೀಮಾನ್

(ಶ್ರೀ ಜಿ. ಎಸ್. ಬೊಮ್ಮೇಗೌಡ)

ಚನ್ನಬಸಪ್ಪನವರು ಈ ಸಭೆಯ ಸಾಧಾರಣ ಸದಸ್ಯರಾಗಿದ್ದಾಗ ಒಂದು ಖಾಸಗೀ ನಿರ್ಣಯವನ್ನು ತಂದಿದ್ದರು. ಆ ನಿರ್ಣಯದಂತೆ ಎಲ್ಲ ಅಧಿಕಾರಿಗಳಿಗೂ ಕೂಡ ಒಂದು ಸಾವಿರ ರೂಪಾಯಿಗಿಂತ ಹೆಚ್ಚಿನ ಸಂಬಳ ಇರಕೂಡದು ಎನ್ನುವ ಖಾಸಗೀ ನಿರ್ಣಯದಮೇಲೆ ರಸವತ್ತಾದ ಭಾಷಣ ಮಾಡಿದರು. ಇಂತಹ ನಿರ್ಣಯವನ್ನು ತಂದಂತಹ ಶ್ರೀ ಚನ್ನಬಸಪ್ಪನವರೇ ಮಂತ್ರಿಮಂಡಲದಲ್ಲಿ ಮಂತ್ರಿಗಳಾಗಿರುವಾಗ ತಾವು ಏನು ಹೇಳಿದರೋ ಅದನ್ನು ಜಾರಿಗೆ ತರುವುದಕ್ಕೆ ಪ್ರಯತ್ನಮಾಡದೇ ಕೇಂದ್ರದಿಂದ ಸೂಚನೆ ಬಂದಿತೆಂದು ಮಾತನಾಡಲು ಶಕ್ತಿ ಇಲ್ಲದ ರೈತನ ಮೇಲೆ ಸುಧಾರಣೆಯನ್ನು ತರಲು ಪ್ರಯತ್ನಿಸುತ್ತಿದ್ದಾರೆ. ಮೊದಲು ನೀವು ಏನು ಹೇಳಿದಿರೋ ಅದರಂತೆ ನೀವು ಮಂತ್ರಿಗಳಾಗಿ ಮಂತ್ರಿಮಂಡಲದಲ್ಲಿ ಸೇರಿದಮೇಲೆ ಹೇಳಲು ಆಗಲಲ್ಲವೆಂದರೆ ಅದು ಎಷ್ಟು ಆಭಾಸವಾಗಿ ಕಾಣುತ್ತದೆ ಎನ್ನುವುದನ್ನು ಯೋಚನೆ ಮಾಡಬೇಕು. ಎಷ್ಟೋ ಅಧಿಕಾರಿಗಳಿಗೆ ತಾವು ಮೂರು ಸಾವಿರ ರೂಪಾಯಿಗಳಷ್ಟು ಸಂಬಳ ಕೊಡುತ್ತಿದ್ದೀರಿ ಮತ್ತು ಅದರ ಜೊತೆಗೆ ವಿಶೇಷ ರೀತಿಯ ಸ್ಪೆಷಲ್ಲು ಪೇ ಎಂದು ಬೇರೆ ಕೊಡಲಾಗುತ್ತಿದೆ. ಇದರ ಜೊತೆಗೆ ಮುಫತ್ತು ವೈದ್ಯಕೀಯ ಸಹಾಯ ಕೊಡಲಾಗುತ್ತಿದೆ. ಇಂತಹ ಅಧಿಕಾರಿಗಳು ಇಷ್ಟೆಲ್ಲ ಸೌಕರ್ಯಗಳನ್ನು ಮಾಡಿಕೊಂಡಿರುವಾಗ ಈ ಭೂಸುಧಾರಣೆಯ ಕಾಯಿದೆಯನ್ನು ಬರೆಯುವಾಗ ತಮ್ಮಷ್ಟೇ ಅನ್ನದಾತನಾದ ರೈತನಿಗೂ ಇರಬೇಕೆಂಬುದನ್ನು ಅವರುಗಳು ಗಮನದಲ್ಲಿಟ್ಟುಕೊಳ್ಳಲಲ್ಲ. ತಮ್ಮ ರೀತಿಯಲ್ಲೇ ಯೋಚನೆ ಮಾಡಬೇಕಾದುದು ಅವರ ಹೊಣೆಗಾರಿಕೆಯಾಗಿತ್ತು. ಈ ಕಾಯಿದೆ ವಿಷಯವನ್ನು ನೋಡಿದರೆ ಒಬ್ಬ ಈಜು ಕಲಿಯಲು ಯೋಚಿಸಿ ಪುಸ್ತಕ ಹಿಡಿದುಕೊಂಡು ಅದರಲ್ಲಿ ಈಜು ಕಲಿಯುವ ರೀತಿಯನ್ನು ಓದಿಕೊಂಡು ಪೂರ್ಣವಾಗಿ ಓದಿದಮೇಲೆ ನನಗೆ ಈಜು ಬಂದಂತಾಯಿತು ಎಂದು ನೀರಿಗೆ ಬಿದ್ದ. ಆಗ ಪುಸ್ತಕದಲ್ಲಿ ಓದಿದ ಈಜು ಪ್ರಯೋಜನವಾಗದೆ ಪ್ರಾಣಕ್ಕೆ ಅಪಾಯ ಸಂಭವಿಸಿತು. ಆಗ ಬೇರೆಯವರ ಆಶ್ರಯದಿಂದ ಉಳಿಯಬೇಕಾಗಿ ಬಂತು. ನಮ್ಮ ರೆವಿನ್ಯು ಸಚಿವರ ಪಾಡೂ ಅದೇ ರೀತಿಯಾಗಿದೆ.

ಸ್ವಾಮೀ, ಈ ಸುಧಾರಣೆಯನ್ನು ತಂದಿರತಕ್ಕ ಶ್ರೀ ಮಂಜಪ್ಪನವರು ಬೆಂಗಳೂರಿನಲ್ಲಿಯೇ ವಾಸಮಾಡುತ್ತಾರೆ ಮತ್ತು ಇಲ್ಲಿ ವಾಸಮಾಡುವ ಎಲ್ಲ ಜನಗಳ ಪರಿಚಯವೂ ಕೂಡ ಇದೆ. ಅವರು ಒಂದು ಸಾರಿ ಬೆಂಗಳೂರಿನಲ್ಲಿ ಒಂದು ಮನೆಗೆ ಹೋಗಿದ್ದರು. ಅದೇ ಮನೆಗೇ ನಾನೂ ಸಹ ಹೋಗಿದ್ದೆ. ಆ ಮನೆಯ ಒಳಕ್ಕೆ ಹೋಗುತ್ತಲೇ ನಾನು ಒಂದು ವಾದ್ಯ ನುಡಿಸುವ ಪಿಯಾನೋವನ್ನು ನೋಡಿದೆ ಮತ್ತು ಅದರ ಬೆಲೆ ಏನೆಂದು ಕೇಳಿದುದಕ್ಕೆ 17,000 ರೂಪಾಯಿಗಳೆಂದು ತಿಳಿಯಿತು. ಒಂದು ರೇಡಿಯೋ ಇತ್ತು ಅದಕ್ಕೆ 11,000 ರೂಪಾಯಿಗಳು ಬೆಲೆ ಎಂದು ತಿಳಿಯಿತು. ಹಾಗೆಯೇ ಒಂದು ಟೇಬಲ್ಲು ಇತ್ತು. ಅದೂಕೂಡ ಬೆಲೆಬಾಳುವಂತಹದು ಮತ್ತು ಅದರ ಸುತ್ತಲೂ ಕೆಲವು ಜನರೂ ಕುಳಿತಿದ್ದರು. ನನಗೆ ಅಲ್ಲಿಗೆ ಹೋದಾಗ ಇದು ಯಾವ ಲೋಕವೋ ಏನೋ ಎನ್ನುವುದೇ ಹೇಳುವುದು ಕಷ್ಟವಾಯಿತು. ನನಗೆ ತೋಚಿದರೀತಿ ಅಂದಾಜು ಮಾಡಿದರೆ ಈ ಸಂಸಾರಕ್ಕೆ ತಿಂಗಳು ಒಂದಕ್ಕೆ 5,000 ರೂಪಾಯಿ ಖರ್ಚಾಗಬೇಕಾಗುತ್ತದೆಂದು ಊಹಿಸಿವೆ. ನೀವು ರಚಿಸಿರುವ ಕಾಯಿದೆಯಲ್ಲಿ ಇದರ ನೂರರಲ್ಲೊಂದು ಭಾಗಕೂಡ ರೈತನಿಗಿಲ್ಲ. ಈ ರೀತಿಯಾದ ಅತುಳೈಶ್ವರ್ಯವಂತರನ್ನು ಬಿಟ್ಟು ಬರೀ ರೈತರ ಸಮಸ್ಯೆಯಿಂದ ದೇಶದಲ್ಲೆಲ್ಲ ಅಲ್ಲಕಲ್ಲೋಲವಾಗುತ್ತಿದೆ ಎಂದು ಈ ರೀತಿಯಾದ ಭೂಸುಧಾರಣೆಯನ್ನು ತರುವ ಅವಸರವೇನಿತ್ತು? ಈ ರೀತಿ ಹೇಳಿದಮಾತ್ರಕ್ಕೆ ಈ ಭೂಸುಧಾರಣೆಯನ್ನು ವಿರೋಧಿಸುತ್ತೇನೆಂದಲ್ಲ. ತಿರಿದು ತಂದ ಅನ್ನವನ್ನು ಸಹೋದರರೆಲ್ಲರೂ ಅರೆಹೊಟ್ಟೆಯಾದರೂ ಹಂಚಿತಿಂದ ಪಾಂಡವರು ಜನ್ಮವೆತ್ತಿದ ನಾಡಿನಲ್ಲಿ ಹುಟ್ಟಿದ ನಾನಕ ಸುಧಾರಣೆ ಬೇಡವೆನ್ನುವುದಿಲ್ಲ. ದೇಶದ ನಾಯಕರೆನಿಸುವ ನೀವು ತಂದಿರುವ ಸುಧಾರಣೆಯ ರೀತಿನೀತಿಯನ್ನು ನೋಡಿದರೆ ನಿಮ್ಮಂತಹವರ ಕೈಗೆ ರಾಜ್ಯ ಸಿಕ್ಕಿ ನರಳಬೇಕಾದ ಗತಿ ಬಂತಲ್ಲಾ ಎಂದು ವ್ಯಥೆಪಡಬೇಕಾಗಿದೆ. ಭೂಸುಧಾರಣೆ ಜಾಗ್ರತೆಯಾಗಿ ಬಂದರೆ ಆಹಾರದ ಅಭಾವ ನೀಗುತ್ತದೆ ಎನ್ನುವುದು ಕೇವಲ ಭ್ರಾಂತಿ. ರೈತನಾಗಿ ಅನುಭವಿಸಿರತಕ್ಕಂತಹ ಕೆಲವು ವಿಷಯಗಳನ್ನು ಈ ಸಂದರ್ಭದಲ್ಲಿ ಹೇಳಬೇಕಾಗಿದೆ. ರೈತನಿಗೆ ಯಾವ ಯಾವ ಕಾಲಕ್ಕೆ ಯಾವ ಯಾವ ಬಿತ್ತನೆಗಳು ಬೇಕು, ಯಾವ ಸಲಕರಣೆಗಳು ಬೇಕು, ಯಾವ ಗೊಬ್ಬರ ಬೇಕಾಗುತ್ತದೆ, ಯಾವ ಕಾಲದಲ್ಲಿ ರೈತ ಉಳುಮೆ ಮಾಡಬೇಕು ಎನ್ನುವುದೆಲ್ಲ ತಿಳಿದಿರಬೇಕು. ತನಗೆ ಬೇಕಾಗುವ ಗುಳಕ್ಕೆಂದು ಹೋಗಿ ಎಲ್ಲ ಸುತ್ತಿದರೂ ಸಿಕ್ಕದೆ ಕಡೆಗೆ ಒಂದಕ್ಕೆ ಮೂರರಷ್ಟು ಕೊಟ್ಟು ಲಬ್ಬೆ ವ್ಯಾಪಾರಿಗಳಲ್ಲಿ ಕೊಳ್ಳುವ ಗತಿ ರೈತನಿಗೆ ಬಂದಿದೆ. ಈ ಕಷ್ಟವನ್ನು ಅಧಿಕಾರಿಗಳಿಗೆ ತಿಳಿಸಿದರೆ, ನಾವೇನು ಮಾಡೋಣ ಕಬ್ಬಿಣದ ಹತೋಟಿ ನಮ್ಮ ಕೈಲಿಲ್ಲ ಕೇಂದ್ರಕ್ಕೆ ಸೇರಿದೆ ಎಂದು ಆಕಾಶವನ್ನು ತೋರುತ್ತಾರೆ. ಬ್ಲಾಕ್ ಮಾರ್ಕೆಟ್ಟಿನಲ್ಲಿ ಸಿಕ್ಕುವ ವಿಷಯವನ್ನು ಗಮನಕ್ಕೆ ತಂದರೆ, ಏನೂ ನಮಗೆ ಗೊತ್ತಾಗುವುದಿಲ್ಲವೆನ್ನುತ್ತಾರೆ. ಇಂತಹ ಒಂದು ಸಮಸ್ಯೆಯನ್ನು ಕೇಂದ್ರ ಸರಕಾರದ ಗಮನಕ್ಕೆ ತಂದು ನಮ್ಮ ದೇಶದಲ್ಲಿ ಬೇಸಾಯಗಾರರಿಗೆ ಯಾವ ಕಾಲಕ್ಕೆ ಗೊಬ್ಬರಬೇಕು, ಯಾವ ಕಾಲಕ್ಕೆ ಕಬ್ಬಿಣ ಮತ್ತಿತರ ಸಲಕರಣೆಗಳು ಬೇಕು ಎನ್ನುವುದಕ್ಕೆ ವ್ಯವಸ್ಥೆಮಾಡದೆ ಸುಮ್ಮನೆ ನಮ್ಮ ಹಿಡಿತದಲ್ಲಿಲ್ಲ ಎಂದು ಹೇಳಿ ಭೂಸುಧಾರಣೆಯನ್ನು ತಂದರೆ ಇದರಿಂದ ಹೆಚ್ಚಿನ ಆಹಾರ ಬೆಳೆಯಲು ಸಾಧ್ಯವೇ ಎನ್ನುವುದನ್ನು ಸರಕಾರದವರು ನೋಡಬೇಕಾಗಿದೆ.

ಮಾನ್ಯ ರೆವಿನ್ಯೂ ಸಚಿವರಿಗೆ ರೈತನ ಸಮಸ್ಯೆಯನ್ನು ಪರಿಹರಿಸಬೇಕೆಂಬ ಆಕಾಂಕ್ಷೆಯಿದೆ. ರೈತನಿಗಿರುವ ಸಮಸ್ಯೆಯನ್ನು ಯಾವರೀತಿ ಪರಿಹರಿಸಬೇಕೆಂಬ ಅರಿವು ಇದ್ದರೂ ಕೇಂದ್ರದ ತತ್ವಕ್ಕೆ ಕಟ್ಟುಬಿದ್ದು ಈ ಸುಧಾರಣೆಯನ್ನು ಜಾರಿಗೆ ತರಲು ಒತ್ತಾಯಪಡಿಸುತ್ತಿದ್ದಾರೆ. ಈ ಸಂದರ್ಭದಲ್ಲಿ ಒಂದು ವಿಷಯವನ್ನು ಸಚಿವರ ಗಮನಕ್ಕೆ ತರುತ್ತೇನೆ. ರೈತನ ಹೃದಯ ಧರ್ಮಕ್ಕಿಂತ ಮಿಗಿಲಾದ ಧರ್ಮ ಬೇರೆ ಯಾವುದೂ ಇಲ್ಲ. ಆತ ಸರ್ವ ಧರ್ಮವನ್ನು ತನ್ನ ನೇಗಿಲ ತುದಿಯಲ್ಲಿ ಕಾಣುತ್ತಿದ್ದಾನೆ. ಅವನ ನಿಜಧರ್ಮ ಜಗತ್ತಿನ ಜೀವಕೋಟಿಗೆ ಅನ್ನಕೊಟ್ಟು ಕಾಪಾಡುತ್ತಿದೆ. ಅಂಥ ಸೌಮ್ಯಮೂರ್ತಿಯ ಪ್ರಗತಿಗೆ ಧಕ್ಕೆ ತಂದೊಡ್ಡಿ, ಸ್ವಾರ್ಥ ಬೆಳಿಸಿಕೊಳ್ಳಲು ಹೊರಟರೆ, ಆತನ ತಪಸ್ಸಿನ ಜ್ವಾಲೆ ದೇಶದ ಜೀವಕೋಟಿಗೆ ಅನ್ನವಿಲ್ಲದೆ ಹಾಹಾಕಾರಪಡುವಂತೆ

ಮಾಡೀತು ! ನಮ್ಮ ಮುಂದಿರುವ ಭೂಸುಧಾರಣೆಯ ಜಾರಿಯಿಂದ ರೈತರ ಪ್ರಗತಿ ಕುಂದದಂತೆ ಎಚ್ಚರಿಕೆಯಿಂದಿರಬೇಕೆಂದು ತಮ್ಮ ಮೂಲಕ ಸರ್ಕಾರವನ್ನು ಪ್ರಾರ್ಥಿಸುತ್ತೇನೆ. ಈ ಸಭೆಯಲ್ಲಿ, ನನ್ನ ಅನೇಕ ಸ್ನೇಹಿತರು ತಮ್ಮ ತಮ್ಮ ಪ್ರಾಂತದಲ್ಲಿರುವ ಭೂಸಮಸ್ಯೆಯನ್ನು ವಿವರಿಸಿ, ನಿವಾರಣೆ ಮಾಡತಕ್ಕ ಒಂದು ಉದಾತ್ತವಾದ ಧ್ಯೇಯವನ್ನಿಟ್ಟುಕೊಂಡು ಮಾತನಾಡಿದ್ದಾರೆ. ನಮ್ಮ ದೇಶದಲ್ಲಿ ಒಂದು ಕಡೆ ಸಾವಿರಾರು ಎಕರೆಗಳನ್ನು ಹೊಂದಿರತಕ್ಕ ಜಮೀನ್ದಾರರು ಇದ್ದಾರೆ. ನಾನಾ ಕಸಬುಗಳನ್ನು ಇಟ್ಟುಕೊಂಡಿರುವ ಜಮೀನ್ದಾರರೂ ಇದ್ದಾರೆ. ಹತ್ತು-ಇಪ್ಪತ್ತು ಎಕರೆ ಇರುವವರೂ ಇದ್ದಾರೆ. ಈಗ ನಮ್ಮ ಮುಂದೆ ಇರತಕ್ಕ ಈ ಕಾಯಿದೆಯಲ್ಲಿ ಎಲ್ಲರಿಗೂ ಒಂದೇ ಮಾತ್ರೆಯನ್ನು ಉಪಯೋಗಿಸಿದ್ದೀರಿ.

ಶ್ರೀ ಕಡಿದಾಳ್ ಮಂಜಪ್ಪ (ರೆವಿನ್ಯೂ ಶಾಖೆಯ ಮಂತ್ರಿಗಳು).—ಗೇಣೀದಾರರೂ ಕೂಡ ರೈತರೇ.

ಶ್ರೀ ಜಿ. ಎಸ್. ಬೊಮ್ಮೇಗೌಡ.—ಗೇಣಿದಾರರ ಹಿತವನ್ನೂ ಸಹ ಗಮನದಲ್ಲಿಟ್ಟುಕೊಂಡೇ ನನ್ನ ಅಭಿಪ್ರಾಯ ತಿಳಿಸುತ್ತಿದ್ದೇನೆ. ಬಡತನದ ಪರಿಶ್ರಮವುಳ್ಳ ನನಗೆ, ಬಡವನಿಗೆ ಸಹಾಯವಾಗುವುದನ್ನು ಸ್ವಾಗತಿಸುವ ನನಗೆ, ತಾವು ಏನು ತತ್ತ್ವ ಬೋಧಿಸುವಿರೋ ಅರ್ಥವಾಗುವುದಿಲ್ಲ. ಈಗ ನಮ್ಮ ಮುಂದೆ ತಂದಿರುವ ಭೂಸುಧಾರಣಾ ಕಾಯಿದೆಯಲ್ಲಿ ಅಡಕವಾಗಿರುವ ಕೆಲವು ನ್ಯೂನತೆಗಳನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಸ್ವಂತ ಬೇಸಾಯ ಮಾಡುವ ರೈತ ಆಕಸ್ಮಿಕವಾಗಿ ಕಾಯಿಲೆಬಿದ್ದು ಬೇಸಾಯ ಕಾಲದಲ್ಲಿ ಬೇಸಾಯ ಮಾಡಲು ಅಶಕ್ತನಾಗಿ ಕಾಯಿಲೆಯ ಕಾರಣದಿಂದ ಗೇಣಿಗೆಕೊಟ್ಟರೆ ಕಾಯಿಲೆ ಗುಣವಾಗಿ ಮುಂದಿನ ವರ್ಷ ಬೇಸಾಯಮಾಡಲು ಶಕ್ತನಾಗಿದ್ದರೂ ಅಂತಹ ರೈತ ತನ್ನ ಜಮೀನನ್ನು ಸ್ವಂತ ಸಾಗುವಳಿಗೆ ಬಿಡಿಸಿಕೊಳ್ಳುವಂತಿಲ್ಲ. ಅಂತಹ ರೈತನೂ ಸಹ ಐದು ವರ್ಷ ಕಾದು ಕುಳಿತು ಎರಡು ವರ್ಷವಿದ್ದಂತೆಯೇ ನೋಟೀಸ್ ಕೊಟ್ಟು ತನಗೇ ಸಾಲದೆ ಇದ್ದರೂ ಗೇಣಿದಾರನಿಗೆ ಬಿಟ್ಟು ಛಿದ್ರ ಛಿದ್ರ ಮಾಡಿಕೊಳ್ಳುವ ರೀತಿ ನೀತಿ ನಿಮ್ಮ ಭೂಸುಧಾರಣಾ ಕಾಯಿದೆಯಲ್ಲಿದೆ. ಬೇಸಾಯದಲ್ಲಿ ತೊಡಗಿರುವ ಎಷ್ಟು ಜನ ರೈತರಿಗೆ ನಿಮ್ಮ ಕಾಯಿದೆಯ ಪೂರ್ಣ ಪರಿಚಯ ಮಾಡಿಕೊಳ್ಳುವ ಶಕ್ತಿ ಇದೆ ಎಂಬುದನ್ನು ಯೋಚಿಸಿ ನೋಡಿ ಹೆಚ್ಚು ಕಿರುಕುಳಕ್ಕೆ ರೈತ ಸಿಕ್ಕದಂತೆ ಮಾಡುವ ಭಾರ ಸರ್ಕಾರದ ಜವಾಬ್ದಾರಿಯಾಗಿದೆ. ಕಾಯಿಲೆ ಅನುಭವಕ್ಕೆ ನಮ್ಮ ಜಿಲ್ಲೆ ಹೇಗೆ ತುತ್ತಾಗಿದೆ ಎಂಬುದನ್ನು ತಿಳಿಸಬೇಕಾಗಿದೆ. ಒಂದು ವಿಷಯವನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಅದರಲ್ಲೂ ನಮ್ಮ ಜಿಲ್ಲೆಯಲ್ಲಿ ಕ್ಷಯರೋಗದ ಹಾವಳಿ ಬಹಳ ಜಾಸ್ತಿ. ಮೈಸೂರು ಕ್ಷಯರೋಗ ಆಸ್ಪತ್ರೆಯಲ್ಲಿರತಕ್ಕ ಅಂಕಿ ಅಂಶಗಳನ್ನು ನೋಡಿದರೆ ಶೇಕಡ 40 ರಷ್ಟು ಭಾಗ ಮಂಡ್ಯಾ ಜಿಲ್ಲೆಯ ರೋಗಿಗಳಿದ್ದಾರೆ. ಕ್ಷಯರೋಗ ತಗಲಿದ ರೋಗಿ ಸುಮಾರು ಐದು-ಆರು ತಿಂಗಳುಗಳವರೆಗೆ ಸುಧಾರಣೆ ಮಾಡಿಕೊಂಡು ಆಸ್ಪತ್ರೆಯಲ್ಲಿ ಚಿಕಿತ್ಸೆ ಹೊಂದಬೇಕಾಗಿದೆ. ಕರ್ಮಯೋಗಿಯಾದ ರೈತನಿಗೆ ಅಕಸ್ಮಿಕವಾಗಿ ಬಂದೊದಗುವ ಇಂತಹ ಖಾಯಿಲೆಗೆ ತಕ್ಕ ವ್ಯವಸ್ಥೆಯನ್ನು ಮಾಡಿ ರೋಗ ಹೆಚ್ಚದಂತೆ ತಡೆಗಟ್ಟುವ ಕಾರ್ಯ ಸರ್ಕಾರದ ಹೊಣೆಯಾಗಿದ್ದರೂ ಅದರಲ್ಲಿ ಯಶಸ್ವಿಯಾಗುವ ಶಕ್ತಿ ವಿವೇಚನೆ ಸರ್ಕಾರಕ್ಕಿಲ್ಲ; ಭೂಸುಧಾರಣೆ ತರುವುದು ಮಾತ್ರ ಗೊತ್ತಿದೆ, ನಾನು ಹೇಳಿದರೀತಿ, ಆಕಸ್ಮಿಕವಾಗಿ ರೋಗಕ್ಕೀಡಾಗುವ ಸ್ವಂತ ಬೇಸಾಯ ಮಾಡುತ್ತಿದ್ದ ರೈತನ ವಿಷಯದಲ್ಲಿ ನಿಮ್ಮ ಗೇಣಿ ಶಾಸನದ ಪಾತ್ರ ಚೆನ್ನಾಗಿದೆಯೇ ಎಂಬುದನ್ನು ಯೋಚಿಸಿ ನೋಡಿ. ಈ ಕಾರಣಗಳಿಂದ ಹತ್ತು ಎಕರೆ ಒಳಗಿರುವ ಸ್ವಂತ ಬೇಸಾಯಗಾರರಿಗೆ ಗೇಣಿ ಅನ್ವಯಿಸದಂತೆ ಮಾಡುವುದು ಸರ್ವ ಸಮ್ಮತವಾಗಿದೆ.

Mr. SPEAKER.—Before we rise for recess, I would like to bring one matter to the notice of the House and that is about the function tomorrow. Hon'ble Members might be in receipt of the invitation but if any Hon'ble Member has not received it, please take it from me that I invite all the Members of this House as well as of the Upper House for tomorrow's function. There will also be tea before I speak on the occasion.

So far as the meeting of the House is concerned, I think we can do so after the function.

Sri C. M. ARUMUGHAM (Kolar Gold Fields).—What is the urgency that makes it necessary for us to meet tomorrow ? Is anybody going to conquer this Government ? Why should we have two sittings tomorrow and cannot we sit on some other day ? If we are going to sit tomorrow, why not have a night sitting also ?

Sri Kadidal MANJAPPA.—Day before yesterday we discussed this matter. Some Hon'ble Members were agreeable to have two sittings yesterday. Yesterday, in the morning the Leader of the Opposition as well as some members said that they would like to have more time and therefore in consultation with the Leader of the House and other Hon'ble Members the Speaker has decided to convene a session tomorrow also. It will be a short session. Most likely it will be a session of only one hour and I will finish my reply within that time.

Mr. SPEAKER.—I can quite understand the feelings of the Hon'ble Member Sri Arumugham, but the Leader of the House, the Leader of the Opposition and the Minister concerned had a talk among themselves and decided to sit tomorrow also and refer the Bill to a Joint Select Committee. Unfortunately, there are a large number of Independents whom I would like to consult but I cannot do so.

(MR. SPEAKER)

can consult the members of a party but it would be very difficult for me to consult about 35 Independents.

SRI C. J. MUCKANNAPPA (Gubbi).—We agree with the statement made by the Hon'ble Speaker, but we are not coaches attached to a bogie. The P. S. P. is only 22 in number whereas we are 35 in number. The Government cannot come to a conclusion in consultation with the P. S. P. alone. If they do not care to consult us outside, let them make a statement here and let us also express our opinion. We are not their followers. We are not here to accept the decision of the P.S.P. party or any other recognised party in this House.

MR. SPEAKER.—I quite understand the sentiments of the Hon'ble Member Sri Muckannappa. I know that he is both a leader and a follower. That is exactly the difficulty. If the Independents are of the same opinion as Sri Muckannappa, I would rather consult them; but I am sure even they are not of one mind. I have consulted some of them and they have agreed to this.

SRI B. K. PUTTARAMIYA (Channapatna).—He cannot say 'we'.

SRI C. J. MUCKANNAPPA.—Who is he to say that?

MR. SPEAKER.—I am very sorry that sentiments like these should be expressed on the floor of the House. If any Hon'ble Member wants to raise an objection he can do so but not in this manner. I deplore the incidents that took place just now. If they go on like this we will simply scuttle democracy in this country. I have become rather a little touchy after my return from foreign tour. There I have seen so much of order, restraint and understanding in the Houses of Legislature. I want all the Members of this House to behave in the same way. I want the Members to feel that their first responsibility is to behave as responsible members of this House. They cannot throw dirt on the face of the Speaker and get away with it. That is not fair either to the Chair or to the House as a whole.

The House adjourned for Lunch at Ten of the Clock and re-assembled at Forty Minutes past Ten of the Clock.

[MR. DEPUTY SPEAKER in the Chair]

ಶ್ರೀ ಜಿ. ಎಸ್. ಬೊಮ್ಮೇಗೌಡ.—ಇನ್ನು ಗೇಣಿ ಕೊಡಬೇಕಾದರೆ ಪಹಣಿ ಬರದಿರತಕ್ಕ ಆಧಾರವನ್ನೇ ಇಟ್ಟುಕೊಂಡಿದ್ದಾರೆ. ಇದು ನಮ್ಮ ಅನುಭವ. ಈ ಗ್ರಾಮಾಧಿಕಾರಿಗಳು ನಡೆಸತಕ್ಕ ಅನೀತಿಯ ಎಷ್ಟೋ ಕೇಸುಗಳು ತಮಗೆ ಗೊತ್ತಿದೆ. ಉದ್ದೇಶಪೂರ್ವಕವಾಗಿ ಎರಡು ವರ್ಷ ಗೇಣಿ ಮಾಡುತ್ತಾರೆಂದು ಪಹಣಿ ಬರೆದು ಶ್ಯಾನುಭೋಗರ ಆಫೀಸಿನಿಂದ ಹೋದಕೂಡಲೇ ಬೇಸಾಯ ಮಾಡಿರಲಿ ಮಾಡದೆ ಇರಲಿ ಕೋರ್ಟಿಗೆ ಹೋಗಿ ಬೇಸಾಯ ಮಾಡುತ್ತಿದ್ದಾರೆಂದು ಹೇಳುವುದಕ್ಕೆ ಅವಕಾಶವಿದೆ. ಈ ವಿಷಯವನ್ನು ತಮ್ಮ ಗಮನಕ್ಕೆ ತರುತ್ತೇನೆ. ಗೇಣಿದಾರ ಒಳಗೇಣಿ ಕೊಡಕೂಡದು. ಆದರೆ ಪಟೇಲ ಶ್ಯಾನುಭೋಗರು ಒಳಗೇಣಿಗೆ ಕೊಟ್ಟಿದ್ದಾರೆ ಎಂದು ಬರೆಯುವುದಕ್ಕೆ ಅವಕಾಶವಿದೆ. ಅದಕ್ಕೋಸ್ಕರ ಗೇಣಿ ಕೊಡತಕ್ಕವನು ಕಾಗದಪತ್ರಗಳನ್ನು ಬರೆಸಿಕೊಂಡಿದ್ದರೆಮಾತ್ರ ಗೇಣಿ ಎಂದು ಭಾವಿಸಬೇಕು. ಗೇಣಿ ಪಡೆಯಬೇಕು. ಇಲ್ಲದೆಹೋದರೆ ಸಮಸ್ಯೆಗಳು ಬಹು ಮಟ್ಟಿಗೆ ಕೋರ್ಟಿಗೆ ಹೋಗುವುದಕ್ಕೆ ಅವಕಾಶವಾಗುತ್ತವೆ. ನಿಜವಾಗಿಯೂ, ರೈತರಿಗೆ ಅದರಿಂದ ಬಹಳ ತೊಂದರೆಯಾಗುತ್ತದೆ ಎಂದು ಹೇಳುತ್ತೇನೆ. ಸೀಲಿಂಗ್ ಇರಬೇಕೇ ಬೇಡವೇ ಎನ್ನುವ ವಿಷಯದಲ್ಲಿ. ನನ್ನ ಅಭಿಪ್ರಾಯ ಹೇಳುವುದಾದರೆ ಸ್ವಂತ ವ್ಯವಸಾಯ ಮಾಡುವ ರೈತನಿಗೆ ಅದು ಅಗತ್ಯವಿಲ್ಲ. ನಮ್ಮ ಪ್ರಾಂತ್ಯದಲ್ಲಿ ಇರುವ ಕೆಲವು ವಿಷಯಗಳನ್ನು ಹೇಳುತ್ತೇನೆ. ಕೆಲವುಕಡೆ ಮಕ್ಕಳು, ಮೊಮ್ಮಕ್ಕಳೂಕೂಡ ಒಟ್ಟಿಗೆ ಇದ್ದುಕೊಂಡು ನೂರಾರು ಎಕರೆ ಸ್ವಂತ ಬೇಸಾಯ ಮಾಡುತ್ತಿದ್ದಾರೆ. ಆದರೆ ಈ ಕಾಯಿದೆ ಬಂದಮೇಲೆ ತೊಂದರೆ ಆಗಬಹುದು ಎಂದು ಅಣ್ಣತಮ್ಮಂದಿರು ಕಡ್ಡಾಯವಾಗಿ ವಿಭಾಗ ಮಾಡಿಕೊಳ್ಳಬೇಕಾದ ಸಂದರ್ಭ ಬಂದಿದೆ. ಅವರು ನಾವು ಭಾಗ ಮಾಡಿಕೊಳ್ಳುವುದು ಬೇಡಾ ಇದುವರೆವಿಗೂ ನಮ್ಮ ವಂಶದಲ್ಲಿ ವಿಭಾಗ ಮಾಡಿಕೊಂಡಿಲ್ಲ ಎಂದು ಹೇಳುತ್ತಾರೆ. ಬಡ ರೈತರನ್ನು ನಿಮ್ಮ ಕಾಯಿದೆ ಭಾಗ ಆಗಿ ಎಂದು ಹೇಳಿದರೆ ಎಷ್ಟರಮಟ್ಟಿಗೆ ಇದು ಸಾಧುವಾದದ್ದು ಎನ್ನುವುದನ್ನು ಈ ಸಭೆ ಯೋಚನೆ ಮಾಡಬೇಕಾಗಿದೆ. ಸ್ವಂತ ಬೇಸಾಯ ಮಾಡದೆ ಬೇರೆ ವೃತ್ತಿಯಲ್ಲಿ ತೊಡಗಿರುವ ವ್ಯಾಪಾರಿಗಳಿಗೆ ಮಾತ್ರವಲ್ಲದೆ ಸ್ವಂತ ಬೇಸಾಯ ಮಾಡುತ್ತಿದ್ದು ಕಾರಣಾಂತರ ಕಾಯಿಲೆ ವಗೈರೆಯಿಂದ ಗೇಣಿಗೆ ಕೊಟ್ಟ ಶಾಸನ ಅನ್ವಯವಾಗುತ್ತದೆ. ಅಂತಹ ಸ್ವಂತ ಬೇಸಾಯಗಾರನಿಗೆ ಅನ್ವಯಿಸಬಾರದೆಂದು ಹೇಳಬಯಸುತ್ತೇನೆ. ಸ್ವಂತ ಬೇಸಾಯ ಮಾಡುವವನು ಹತ್ತು ಮೈಲಿ ಪಾಸಲೆಯಲ್ಲಿ ಇರಬೇಕು ಎಂದು ಹೇಳುವುದು ನನಗಂತೂ ಅರ್ಥವಾಗುವುದಿಲ್ಲ. ಜಮೀನ್ದಾರರ ಮನೆಯವರಾಗಲಿ ಕೂಲಿಕೊಟ್ಟು ಮಾಡಿಸುವವರಾಗಲಿ ಯಾರೇ ಇರಲಿ ಸ್ವಂತಬೇಸಾಯ ಮಾಡುತ್ತಾರೆಂದರೆ 10 ಮೈಲಿ ಫಾಸಲೆಯೊಳಗೆ ಇರಬೇಕು ಎಂದು ಹೇಳಿದ್ದಾರೆ. ಈ ರೀತಿ ಹತ್ತು ಮೈಲಿ ಪಾಸಲೆಯೊಳಗೇ ಇರಬೇಕು ಎಂದು ನಿಗದಿ ಏತಕ್ಕೆ ಮಾಡಬೇಕೋ ನನಗಂತೂ ಗೊತ್ತಾಗುವುದಿಲ್ಲ. ಯಾವಾಗ ಸ್ವಂತ ಬೇಸಾಯ ಮಾಡುವುದಕ್ಕೆ

ಶಕ್ತಿ ಇಲ್ಲವೋ ಆಗ ಇನ್ನೊಬ್ಬಾತನಿಗೆ ಗೇಣಿಗೆ ಹೋಗಲೇಬೇಕು. ಆಗ ಶಾಸನ ಜಾರಿಗೆ ಬಂದೇ ಬರುತ್ತದೆ. ಆದುದರಿಂದ ಹತ್ತು ವೈಲಿ ಎಂಬುದು ಬೇಕಾಗುವುದಿಲ್ಲ. ಜಮೀನ್ದಾರರ ಎರಡು ವರ್ಷಗಳೊಳಗಾಗಿ ಅರ್ಜಿ ಹಾಕಬೇಕು ಎನ್ನುವುದನ್ನು ಕಡ್ಡಾಯವಾಗಿ ತೆಗೆದುಹಾಕಬೇಕು. ಯಾವಾಗ ಅರ್ಜಿಹಾಕಬೇಕು ಎಂದು ಎಷ್ಟೋ ಜನರಿಗೆ ಗೊತ್ತಿರುವುದಿಲ್ಲ. ಕಾಯಿದೆಯಲ್ಲಿರುವ ಲೋಪದೋಷಗಳನ್ನು ಹುಡುಕಿ ರೈತರಿಗೆ ಕಿರುಕುಳ ಹೆಚ್ಚಿಸುವ ಅವಕಾಶ ಸ್ವಾರ್ಥಿಗಳಿಗೆ ಸಿಕ್ಕಬಾರದು. ಈ ಕಾಯಿದೆಯ ಅಂತರಾಳವೇನು ಎಂಬ ಬಗ್ಗೆ ಒಂದು ವಿಷಯ ಹೇಳುತ್ತೇನೆ. ದೊರೆ ಮಕ್ಕಳು ದೊರೆ ಆಗಬೇಕು. ದಿವಾನರ ಮಕ್ಕಳು ದಿವಾನರು ಆಗಬೇಕು. ರೈತರ ಮಕ್ಕಳು ರೈತರು ಆಗಬೇಕು. ಈ ತತ್ವ ಈ ಭೂಸುಧಾರಣಾ ಕಾಯಿದೆಯಲ್ಲಿದೆ. ರೈತರ ಮಕ್ಕಳಿಗೆ ವಿದ್ಯಾಭ್ಯಾಸ ಕಲಿಸುವ ಹಾಗಿಲ್ಲ. ಕಾಯಿಲೆ ಬಿದ್ದಲ್ಲಿ ಗೇಣಿಗೆ ಕೊಡುವ ಹಾಗಿಲ್ಲ. ಇದರಲ್ಲಿ ಆಳವಾದ ನೀತಿ ಏನಿದೆ ಎಂದರೆ ಓದುವುದು ಬೇಕಾಗಿಲ್ಲ. ಯಾರು ವಿದ್ಯಾಭ್ಯಾಸ ಮಾಡಿಕೊಂಡು ಅಧಿಕಾರ ಮಾಡುತ್ತಿದ್ದಾರೆಯೋ ಅವರೇ ಅಧಿಕಾರಮಾಡಿಕೊಂಡು ಹೋಗಲಿ, ರೈತ ಇದ್ದಲ್ಲಿಯೇ ಇರಲಿ ಎಂದು ಹೇಳಿದ ಹಾಗಾಗುತ್ತದೆ.

ಶ್ರೀ ಕಡಿದಾಳ್ ಮಂಜಪ್ಪ.—ರೈತರ ಪೈಕಿ ಶ್ರೀಮಂತರು ಮುಂದೆ ಬರಬೇಕು, ಬಾಕಿಯವರು ಹಾಗೆಯೇ ಇರಬೇಕು ಎಂತಲೋ ತಮ್ಮ ಅಭಿಪ್ರಾಯ.

ಶ್ರೀ ಜಿ. ಎಸ್. ಬೊಮ್ಮೇಗೌಡ.—ಅಂಥ ಅಭಿಮಾನ ಇರುವವರು ರೈತರ ಮಕ್ಕಳಿಗೆ ಒಂದು ಅವಕಾಶವನ್ನು ಮಾಡಿಕೊಡಿ. ಫೀಜು ಇಲ್ಲದೆ ಓದುವ ವ್ಯವಸ್ಥೆ ಮಾಡಿಕೊಡಿ. ಮೂರು ಸಾವಿರ ರೂಪಾಯಿ ಸಂಬಳ ತೆಗೆದುಕೊಳ್ಳತಕ್ಕ ಅಧಿಕಾರಿಗಳಿಗೆ ಮೆಡಿಕಲ್ ಟ್ರೀಟ್‌ಮೆಂಟ್ ಮುಫತ್ತಾಗಿ ಒದಗಿಸುತ್ತಿದ್ದೀರಿ. ಅದೇರೀತಿ ರೈತರ ಮಕ್ಕಳಿಗೂ ಮತ್ತು ರೈತರಿಗೂ ಮೆಡಿಕಲ್ ಟ್ರೀಟ್‌ಮೆಂಟ್ ಮುಫತ್ತಾಗಿ ಕೊಡುವಂತೆ ಮಾಡಿ. ಮೆರಿಟ್‌ಮೇಲೆ ಇಷ್ಟು ಪರ್ಸೆಂಟ್ ನಂಬರು ತೆಗೆದುಕೊಂಡವರಿಗೆ ಮಾತ್ರ ಟೆಕ್ನಿಕಲ್ ಸ್ಕೂಲು, ಮತ್ತು ಕಾಲೇಜುಗಳಲ್ಲಿ ಸ್ಥಳ ದೊರಕಿಸಿಕೊಡಬೇಕು ಎಂದು ಮಾಡಿದ್ದೀರಿ. ರೈತರ ಮಕ್ಕಳು ತಮ್ಮ ಜಮೀನಿನ ಹತ್ತಿರ ಎತ್ತು ಕರು ಹಿಡಿದುಕೊಂಡು ಹೋಗಬೇಕು, ಕಸ ಗುಡಿಸಬೇಕು ಹೀಗಿರುವಾಗ ಅವರು ಅಧಿಕಾರಿಗಳ ಮಕ್ಕಳಷ್ಟೇ ಪರ್ಸೆಂಟೇಜ್ ನಂಬರು ತೆಗೆಯಬೇಕು ಎಂದರೆ ಸಾಧ್ಯವಿಲ್ಲ. ಅಧಿಕಾರಿಗಳ ಮಕ್ಕಳಿಗೆ ಎಲ್ಲಾ ಸೌಲಭ್ಯಗಳೂ ಇರುತ್ತವೆ. ಆದ್ದರಿಂದ ಅವರು ಹೆಚ್ಚು ಪರ್ಸೆಂಟೇಜ್ ತೆಗೆಯಬಹುದು. ಆದರೆ ರೈತರ ಮಕ್ಕಳೂ ಅಷ್ಟೇ ಪರ್ಸೆಂಟೇಜ್ ತೆಗೆಯಬೇಕು ಅಷ್ಟು ಪರ್ಸೆಂಟ್ ಇದ್ದರೆ ಮಾತ್ರ ಅಡ್ಮಿಟ್ ಮಾಡುತ್ತೇವೆ ಎಂದರೆ ಹೇಗೆ ನ್ಯಾಯ ದೊರಕಿಸಿದಂತಾಗುತ್ತದೆ ಆದ್ದರಿಂದ ರೈತರ ಮಕ್ಕಳಿಗೆ ಆ ವಿಷಯದಲ್ಲಿ ಪೂರ್ಣ ರಿಯಾಯಿತಿ ತೋರಿಸಬೇಕು.

ಶ್ರೀ ಕಡಿದಾಳ್ ಮಂಜಪ್ಪ.—ನಾನು ಹೇಳಿದ್ದು, ನಾವೆಲ್ಲರೂ ಒಪ್ಪಿಕೊಂಡು ಬಿಟ್ಟರೆ ರೈತರು ಹಿಂದುಳಿದವರು ಎಂದು ಮಾಡೋಣ.

ಶ್ರೀ ಜಿ. ಎಸ್ ಬೊಮ್ಮೇಗೌಡ.—ಹಾಗೆ ಮಾಡಿ. ಸೀಲಿಂಗ್ ಲಿಮಿಟ್ ಇಷ್ಟೇ ಇರಬೇಕು, ಆದಾಯ ಇಷ್ಟೇ ಇರಬೇಕು, ಎಂದು ಒಪ್ಪಿಕೊಳ್ಳೋಣ. ರೈತರ ಮಕ್ಕಳು ಕಷ್ಟಪಟ್ಟು ವಿದ್ಯಾಭ್ಯಾಸ ಮಾಡಬೇಕು ಎಂದರೆ ನಾನಾ ತೊಂದರೆಗಳೂ ಇರುತ್ತವೆ. ಕಾಲೇಜಿನಲ್ಲಿ ಫೀಜು ಇಲ್ಲದೆ ಓದುವುದು ಮತ್ತು ಈ ರೀತಿ ನಾನಾರೀತಿಯ ಸೌಲಭ್ಯಬೇಕು. ಮೂರು ಸಾವಿರ ರೂಪಾಯಿ ದೊರೆಯುವ ಸಂಬಳದ ಹುದ್ದೆಗಳು ಬೇಡವೇ ಅವರ ಮಕ್ಕಳಿಗೆ? ಮಂಡ್ಯ ಸಕ್ಕರೆ ಕಾರ್ಖಾನೆಯಲ್ಲಿ ಸರ್ಕಾರದ ಷೇರು 51 ಭಾಗದಷ್ಟಿದೆ ಅಂದಮೇಲೆ ಆ ಕಾರ್ಖಾನೆಯ ಲಾಭ, ನಷ್ಟಕ್ಕೂ ಸಹ ಸರ್ಕಾರ ಭಾಗಿಯಾಗಬೇಕಾಗಿದೆ. ಆ ಸಕ್ಕರೆ ಕಾರ್ಖಾನೆಗೆ ಸೇರಿದ ವ್ಯವಸಾಯ ಮಾಡುವ ಕೆಲವು ಫಾರಂಗಳಿವೆ. ಆ ಫಾರಂಗಳಲ್ಲಿ ಪ್ರತಿವರ್ಷ ಐದು ಲಕ್ಷ ರೂಪಾಯಿಗಳಷ್ಟು ನಷ್ಟವಾಗುತ್ತಿರುವುದಾಗಿ ತಿಳಿದುಬಂದಿವೆ. ಹೀಗಿದ್ದಲ್ಲಿ ಆ ಜಮೀನು ಏತಕ್ಕೆ ಅವರಿಗೆ ಇರಬೇಕು? ಮತ್ತು, ಕಾಯಿದೆಯಲ್ಲಿ ರಿಯಾಯಿತಿ ಏತಕ್ಕೆ ತೋರಬೇಕು ಎಂಬುದು ಅರ್ಥವಾಗುವುದಿಲ್ಲ. ಕಾರ್ಖಾನೆಗೆ ಕಬ್ಬು ಬೆಳೆಯದೆ ರೈತರು ತೊಂದರೆ ಕೊಡುತ್ತಾರೆಂದು ಕಾರ್ಖಾನೆಯವರು ಹೇಳುವುದು ಹಿಂದಿನ ಚರಿತ್ರೆಯಿಂದ ನೋಡುವುದಾದರೆ ಸತ್ಯಕ್ಕೆ ದೂರವಾದುದು. ಕಾರ್ಖಾನೆಗೆ ಸೇರಿದ ಭೂಮಿಗೆ ರಿಯಾಯಿತಿ ತೋರುವುದು ಖಂಡಿತ ನ್ಯಾಯವಾದುದಲ್ಲ. ಗೇಣಿದಾರನಿಗೆ ಜಮೀನನ್ನು ಕ್ರಯಕ್ಕೆ ಕೊಟ್ಟಾಗ ಕ್ರಯದ ಮೊಬಲಗನ್ನು ಇಪ್ಪತ್ತು ವರ್ಷಗಳಲ್ಲಿ ತೀರಿಸಬೇಕೆಂಬುದನ್ನು ಬದಲಾಯಿಸಿ ಹತ್ತು ಸಾವಿರ ರೂಪಾಯಿಗಳ ಕೆಳಗಣ ಪರಿಹಾರವನ್ನು ನಗದಾಗಿ ಮೊದಲೇ ಕೊಡಬೇಕು. ಹತ್ತು ಸಾವಿರದ ಮೇಲೆ ಮತ್ತು ಇಪ್ಪತ್ತೈದು ಸಾವಿರ ರೂಪಾಯಿ ಒಳಗಡೆ ಪರಿಹಾರವನ್ನು ಹತ್ತು ಕಂತುಗಳಲ್ಲಿ ತೀರಿಸಬೇಕು. ಇಪ್ಪತ್ತೈದು ಸಾವಿರದಮೇಲೆ ಇರುವ ಹಣವನ್ನು ಇಪ್ಪತ್ತು ವರ್ಷದಲ್ಲಿ ಕೊಡುವಂತಾಗಬೇಕು.

11 A.M

ಸ್ವಾಮಿ, ಮಾತೆತ್ತಿದರೆ ನಮ್ಮ ರೆವಿನ್ಯೂ ಸಚಿವರು ನಾನು ರೈತನ ಮಗ ಎಂದು ಹೇಳುತ್ತಾರೆ ನಿಜ, ಅವರು ರೈತರ ಮಕ್ಕಳೇ. ನಮ್ಮ ದೇಶದಲ್ಲಿ ಬೇಸಾಯ ಯಾವಾಗಲೂ ಕೂಡ ಜಾನುವಾರುಗಳ ಸಹಾಯದಿಂದ ನಡೆಯುತ್ತದೆ. ಅಮೆರಿಕಾ ದೇಶದಲ್ಲಿಯಾದರೋ ಆಕಾಶದಿಂದ ಬಿತ್ತನ ಬೀಜವನ್ನು ಹಾಕುತ್ತಾರೆ, ದ್ರಾವಕ ಹೊಡೆಯುತ್ತಾರೆ, ಯಂತ್ರಗಳಿಂದ ಕಟಾವು ಮಾಡುತ್ತಾರೆ. ನಮ್ಮ ದೇಶದಲ್ಲಿ ಪ್ರತಿಯೊಂದಕ್ಕೂ ಜಾನುವಾರುಗಳ ಸಹಾಯ ಬೇಕು. ಅವುಗಳಿಗೆ ಮೇವಿನ ವಿಷಯದಲ್ಲಿ ಏನು ವ್ಯವಸ್ಥೆ ಮಾಡಿದ್ದೀರಿ ಎನ್ನುವುದೇ ಇಲ್ಲ. ಜಾನುವಾರುಗಳಿಗೆ ಮೇವು ಸರಿಯಾಗಿ ದೊರೆಯದೆ ಹೋದರೆ, ಅವು ಹೇಗೆ ತಾನೇ ಕೆಲಸ ಮಾಡಿಯಾವು? ಹೆಚ್ಚು ಆಹಾರ ಬೆಳೆಯಿರಿ ಎಂದು ಹೇಳುವಾಗ ರೈತನಿಗಾದರೂ ಯಾವ ರೀತಿಯಲ್ಲಿ ಬೆಳೆಯನ್ನು ತೆಗೆಯಲು ಅವಕಾಶವಾಗುತ್ತದೆ ಎನ್ನುವುದು ಅರ್ಥವಾಗುವುದಿಲ್ಲ. ಗೋಮಾಳಗಳು ಇ ಬಾರದೆಂದು ಹೇಳಿದ ಮೇಲೆ, ಎಷ್ಟು ದನಗಳಿಗೆ ಎಷ್ಟು ಜಮೀನು ಬೇಕಾಗುತ್ತದೆಂಬುದು ಲೆಕ್ಕದಿಂದ ತಿಳಿದುಕೊಂಡು ಅಷ್ಟು ಜಮೀನು ಕಾಯ್ದಿಟ್ಟುಕೊಳ್ಳುವ ಬಗ್ಗೆ ಗೊತ್ತುಪಡಿಸಬೇಕು. ಜಾನುವಾರುಗಳಿಗೆ ಮೇವು ದೊರೆಯುವಂತಾದರೆ ಆಗ ಬೇಸಾಯಕ್ಕೆ ಅನುಕೂಲವಾಗುತ್ತದೆ. ಜಾನುವಾರುಗಳೇ ಮುಖ್ಯ ಆಸ್ತಿ. ಆದುದರಿಂದ ಇವುಗಳಿಗೆ ಸ್ವಲ್ಪ ಜಮೀನನ್ನು ಬಿಡುವುದಕ್ಕೆ ಕಾಯಿದೆಯಲ್ಲಿ ಅವಕಾಶ ಮಾಡಿಕೊಡಬೇಕು.

ಕೋ-ಆಪರೇಟಿವ್ ಫಾರ್ಮಿಂಗ್ ಬಗ್ಗೆ ಮಾನ್ಯ ಸದಸ್ಯರಲ್ಲಿ ಅನೇಕರು ಅಭಿಪ್ರಾಯ ಹೇಳಿದ್ದಾರೆ. ನನ್ನ ಅನುಭವದಿಂದ ಒಂದೆರಡು ವಿಷಯಗಳನ್ನು ಹೇಳುತ್ತೇನೆ. ಇದರ ವಿಚಾರ ಹೇಳುವವರಿಗೂ

(ಶ್ರೀ ಜಿ. ಎಸ್. ಬೊಮ್ಮೇಗೌಡ)

ಪೂರ್ಣವಾಗಿ ಅದರ ಅರ್ಥವಾಗಿಲ್ಲ, ಕೇಳುವವರಿಗೂ ಅರ್ಥವಾಗುತ್ತಿಲ್ಲ. Service Co-operative Society ಪ್ರತಿಯೊಂದು ಕಡೆಗೂ ಬರುವಂತೆ ಮೊದಲು ವ್ಯವಸ್ಥೆ ಮಾಡಬೇಕು. ಅದರ ಧ್ಯೇಯವೇನು ಎನ್ನುವುದನ್ನು ತಿಳಿದುಕೊಂಡು, ಅದರ ಅನುಭವವನ್ನು ರೈತರು ಪಡೆಯಲು ಅವಕಾಶ ಕಲ್ಪಿಸಿ ಕೊಟ್ಟು ಅನಂತರ ಕೋ-ಅಪರೇಟಿವ್ ಫಾರ್ಮಿಂಗ್ ವಿಷಯ ಯೋಚಿಸಬೇಕು. ಅದರ ಧ್ಯೇಯ ಒಳ್ಳೆಯದು ಎಂದು ಹೇಳಿದರೂ ಕೂಡ ಅದರ ನಿರ್ದಿಷ್ಟ ಸ್ವರೂಪವೇನು ಎಂಬುದು ಸ್ಪಷ್ಟವಾಗಿಲ್ಲದೇ ಇರುವುದರಿಂದ, ಈಗ ಸದ್ಯಕ್ಕೆ ಅದನ್ನು ಜಾರಿಗೆ ತರಬಾರದು ಎಂದು ಹೇಳಿ, ಹೆಚ್ಚು ಮಾತನಾಡದೆ ಈ ಅವಕಾಶವನ್ನು ಕಲ್ಪಿಸಿ ಕೊಟ್ಟಿದ್ದಕ್ಕಾಗಿ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ರಾಮಕೃಷ್ಣ ಹೆಗ್ಗಡೆ (ಸಿರಸಿ).—ಮಾನ್ಯ ಅಧ್ಯಕ್ಷರೇ, ಈ ಸಭೆಯ ಮುಂದಿರುವ ಮಸೂದೆಯ ಮೇಲೆ ಕಳೆದ ನಾಲ್ಕಾರು ದಿನಗಳಿಂದಲೂ ನಡೆದ ಚರ್ಚೆಯನ್ನು ನಾನು ಬಹಳ ಗಮನವಿಟ್ಟು ಕೇಳಿದ್ದೇನೆ. ಅದರಲ್ಲಿ ಕೆಲವು ಮಾನ್ಯ ಸದಸ್ಯರು ವ್ಯಕ್ತಪಡಿಸಿದ ಅಭಿಪ್ರಾಯವನ್ನು ನೋಡಿ ನನಗೆ ಆಶ್ಚರ್ಯವೂ ಆಗಿದೆ, ವಿಷಾದವೂ ಆಗಿದೆ. ಕೆಲವರಂತೂ ಮಧ್ಯಯುಗದ (mediaeval age) ಪ್ರಜೆಗಳು ತಾವು ಎಂಬಂತೆ ತಮ್ಮ ಅಭಿಪ್ರಾಯವನ್ನು ಈ ಪ್ರಶ್ನೆಯ ಮೇಲೆ ವ್ಯಕ್ತಪಡಿಸಿದ್ದಾರೆ. ನಾವು ಇಂದು ಇರುವಂಥ ಯುಗ ಯಾವುದು, ಪರಿಸ್ಥಿತಿ ಏನು, ಜಗತ್ತಿನ ವಿಚಾರ ಯಾವ ಕಡೆಗೆ ಹರಿದಿದೆ ಇವುಗಳೊಂದನ್ನೂ ಲಕ್ಷ್ಯದಲ್ಲಿ ತೆಗೆದುಕೊಳ್ಳದೆ, ಜಮೀನು ಬಹಳ ದೊಡ್ಡ ಸಂಪತ್ತು, ಒಂದು ವೈಯಕ್ತಿಕವಾದ ಆಸ್ತಿ, ಅದನ್ನು ರಕ್ಷಿಸಬೇಕು ಎನ್ನುವ ಒಂದೇ ಒಂದು ಉತ್ಸಾಹದಿಂದ ತಮ್ಮ ಅಭಿಪ್ರಾಯವನ್ನು ವ್ಯಕ್ತ ಮಾಡಿದ ಹಾಗೆ ನನಗನ್ನಿಸುತ್ತದೆ. ಮಾನ್ಯ ಕಂದಾಯ ಮಂತ್ರಿಗಳ ಸಾಹಸದ ಬಗ್ಗೆ ಅನೇಕ ಜನರು ಅವರನ್ನು ಕೊಂಡಾಡಿ ಮಾತನಾಡಿದ್ದಾರೆ, ಅವರ ಬಗ್ಗೆ ನನಗೂ ಕೂಡ ಒಳ್ಳೆಯ ಅಭಿಪ್ರಾಯವಿದೆ. ನನ್ನ ಅಭಿಪ್ರಾಯದಲ್ಲಿ ಅವರು ತಮ್ಮ ಸಹೋದ್ಯೋಗಿಗಳಲ್ಲಿ ಈ ವಿಷಯದ ಮೇಲೆ comparatively ಹೆಚ್ಚು ಪ್ರಗತಿಪರವಾದ ದೃಷ್ಟಿಯನ್ನಿಟ್ಟುಕೊಂಡಿರುವವರು ಎಂದು ತಿಳಿದುಕೊಂಡಿದ್ದೇನೆ. ಆದರೂ ಈ ಮಸೂದೆಯನ್ನು ಕೂಲಂಕಷವಾಗಿ ಅಭ್ಯಾಸ ಮಾಡಿದ ಮೇಲೆ ನನಗೆ ಅವರ ವಿಷಯದಲ್ಲಿಯೂ ಕೂಡ ಸ್ವಲ್ಪ ಮಟ್ಟಿನ ನಿರಾಸೆಯಾಯಿತು ಎಂದರೆ ಅದು ಅತಿಶಯೋಕ್ತಿಯಲ್ಲ. ಅವರು ಈ ಸಭೆಯ ಮುಂದೆ ಒಂದು ಸೊಗಸಾದ ಚಿತ್ರವನ್ನಿಟ್ಟಿದ್ದಾರೆ. ಅದು ನೋಡಲಕ್ಕೆ ಬಹಳ ಆಕರ್ಷಕವಾಗಿದೆ. ಅದು ಅವರ ಜಾಣ್ಮೆ ಮತ್ತು ಚತುರತೆಯನ್ನು ವ್ಯಕ್ತ ಮಾಡುತ್ತದೆ.

ಶ್ರೀ ಕಡಿದಾಳ್ ಮಂಜಪ್ಪ.—ನನ್ನ ಜಾಣ್ಮೆ ಏನೂ ಇಲ್ಲ; ಜತ್ತಿ ಸಮಿತಿ ವರದಿಯಲ್ಲಿರುವುದನ್ನು ಅಳವಡಿಸಿದ್ದೇನೆ.

ಶ್ರೀ ರಾಮಕೃಷ್ಣ ಹೆಗ್ಗಡೆ.—ಆದರೆ ಯಾವುದನ್ನು ಒಂದು ಕೈಯಿಂದ ಕೊಡುವಂತೆ ಮಾಡಿದ್ದೀರೋ ಅದನ್ನು ಮತ್ತೊಂದು ಕೈಯಿಂದ ಕಸಿದುಕೊಳ್ಳುವಂಥ ಅನೇಕ ಪ್ರಯತ್ನಗಳು ಈ ಮಸೂದೆಯಲ್ಲಿ ಅಡಕವಾಗಿವೆ ಎಂಬುದರ ಕಡೆಗೆ ತಮ್ಮ ಗಮನವನ್ನು ಸೆಳೆಯ ಬಯಸುತ್ತೇನೆ ಮತ್ತು ಕ್ಷಿಪ್ರದಲ್ಲಿಯೇ ಅದನ್ನು ನಾನು ತೋರಿಸುತ್ತೇನೆ. ಆದುದರಿಂದ ಈ ಮಸೂದೆ ಪ್ರಗತಿಪರವಾಗಿ ಕಂಡುಬಂದರೂ ಅದರಲ್ಲಿ ಅನೇಕ ದೋಷಗಳು ಮತ್ತು ಲೋಪಗಳೂ ಇವೆ ಎಂಬುದು ನನ್ನ ನಮ್ರವಾದ ಅಭಿಪ್ರಾಯ. ಮತ್ತು ಆ ದೃಷ್ಟಿಯಿಂದ ನಾನು ನಾಲ್ಕು ವಿಚಾರಗಳನ್ನು ಹೇಳಲಿಕ್ಕೆ ಬಯಸುತ್ತೇನೆ.

ನಿಮಗೆಲ್ಲರಿಗೂ ತಿಳಿದಿರುವ ಹಾಗೆ ಈ ಮಸೂದೆ ಜತ್ತಿ ಸಮಿತಿ ವರದಿಯ ಆಧಾರದ ಮೇಲೆ ಅವರು ಮಾಡಿದಂಥ ಸೂಚನೆಗಳನ್ನು ಬಹುಮಟ್ಟಿಗೆ ಒಳಗೊಂಡು ನಿರ್ಮಿತವಾಗಿದೆ. ಅದರಲ್ಲಿ ಮುಖ್ಯವಾಗಿ ಟೆನೆನ್ಸಿ ಪದ್ಧತಿ ಮತ್ತು ರೈತವಾರಿ ಪದ್ಧತಿಯನ್ನಿಡುವುದರಲ್ಲಿ, ಸೀಲಿಂಗ್ ವಿಷಯದಲ್ಲಿ, ಗೇಣಿ ವಿಷಯದಲ್ಲಿ, resumption ಎಂದು ತನ್ನ ಸ್ವಂತ ಸಾಗುವಳಿಗೆ ಭೂಮಿಯನ್ನು ತೆಗೆದುಕೊಳ್ಳತಕ್ಕ ವಿಷಯದಲ್ಲಿ ಮತ್ತು personal cultivation ಈ ವಿಷಯಗಳಲ್ಲಿ ಯಾವ ರೀತಿಯಾಗಿ ಸೂಚನೆಯನ್ನು ಮಾಡಿದ್ದರೋ ಅವುಗಳನ್ನೇ ಇದರಲ್ಲಿ ಸಂಪೂರ್ಣವಾಗಿ ಗ್ರಾಹ್ಯ ಮಾಡಿ ತೆಗೆದುಕೊಂಡಿದ್ದಾರೆ. ಜತ್ತಿ ಸಮಿತಿಯ ವರದಿಯ ಮೇಲೆ ನಡೆದಂಥ ಚರ್ಚೆಯಲ್ಲಿ ನಾನು ಭಾಗವಹಿಸಲಿಕ್ಕೆ ಸಾಧ್ಯವಾಗಲಿಲ್ಲ. ಜತ್ತಿ ಸಮಿತಿಯವರು ತಮ್ಮ ವರದಿಯ ಪ್ರಾರಂಭ ಭಾಗದಲ್ಲಿ, ಈ ವರದಿಯನ್ನು ತಯಾರು ಮಾಡುವಾಗ ಯಾವ ಉದ್ದೇಶ ತಮ್ಮನ್ನು ಪ್ರೇರೇಪಿಸಿತು ಎಂದು ಹೇಳುವ ಬಗ್ಗೆ ಒಂದು ಮಾತನ್ನು ಹೇಳಿದ್ದಾರೆ :

> "Two objectives namely elimination of the landlord-tenant relationship and free distribution of land to satisfy the aspirations of the landless had mainly inspired our recommendations"

ಎನ್ನುವಂಥ ಮಾತನ್ನು ಹೇಳಿದ್ದಾರೆ.

ಆದರೆ ಜತ್ತಿ ಸಮಿತಿ ವರದಿಯನ್ನು ಈಗ ನಾವು ನೋಡಿದ ಮೇಲೆ ಮತ್ತು ಅದರ ಮೇಲೆ ಆಧಾರಯುತವಾಗಿ ನಿರ್ಮಿಸಲಾದ ಈ ಮಸೂದೆಯನ್ನು ನೋಡಿದ ಮೇಲೆ ಉದ್ದೇಶ ಎಷ್ಟರ ಮಟ್ಟಿಗೆ ಕೈಗೂಡುತ್ತದೆಂಬುದು ಅನುಮಾನಾಸ್ಪದವಾಗಿದೆ. ಈಗ ಗೇಣಿದಾರರು ಮತ್ತು ಹಿಡುವಳಿದಾರರಿಗೆ ಇರುವ ಸಂಬಂಧ ತಪ್ಪಿಸಬೇಕು ಮತ್ತು ಸೀಲಿಂಗನ್ನು ಹಾಕಿ ಹೆಚ್ಚಾಗಿರುವಂಥ ಜಮೀನನ್ನು ವ್ಯವಸಾಯದ ಕೂಲಿಗಳಿಗೆ ಹಂಚಬೇಕು ಎಂಬ ಎರಡು ಉದ್ದೇಶಗಳು ಮುಖ್ಯವಾಗಿದ್ದರೂ ಈ ಮಸೂದೆಯನ್ನು ಇರುವ ರೀತಿಯಲ್ಲಿ ಅಂಗೀಕಾರ ಮಾಡಿದರೆ ಅದರಿಂದ ಈ ಎರಡು ಉದ್ದೇಶಗಳೂ ಸಾಧಿಸಲ್ಪಡುವುದಿಲ್ಲವೆಂದು ನಾನು ಘಂಟಾಘೋಷವಾಗಿ ಹೇಳುತ್ತೇನೆ. ಅದೇಕೆಂದರೆ ಟೆನೆನ್ಸಿ ವ್ಯವಸ್ಥೆಯಿರಬೇಕೇ, ಬೇಡವೆ, ಒಂದು ಪ್ರಮಾಣದಲ್ಲಿರಬೇಕೆಂದರೆ ಯಾವ ರೀತಿ ಎಷ್ಟು ಮಟ್ಟಿಗೆ ಇರಬೇಕು ಎಂಬುದು ಒಂದು ಮಹತ್ವದ ಅಂಶ. ಅದರಂತೆಯೇ ಒಬ್ಬೊಬ್ಬ ಭೂ ಸಾಗುವಳಿ ಮಾಡುವ ವ್ಯಕ್ತಿಗೆ ಅಥವಾ ಒಂದು ಕುಟುಂಬಕ್ಕೆ ಹೆಚ್ಚು ಅಂದರೆ ಎಷ್ಟು ಭೂಮಿ ಇರಬೇಕು ಎಂದು ಹೇಳುವುದು ಮತ್ತೊಂದು ಬಹಳ ಮುಖ್ಯವಾದ ಅಂಶ. ಈ ಎರಡು ಅಂಶಗಳನ್ನು ನಾವು ಸಮರ್ಪಕವಾಗಿ ಬಿಡಿಸಿದರೆ ಭೂ ಸುಧಾರಣೆ ಮಾಡಿದ ಹಾಗಾಗುತ್ತದೆ ಎಂದು ತಿಳಿದುಕೊಂಡಿದ್ದೇನೆ. ಆದರೆ ಭೂ ಸುಧಾರಣೆಯ ಮುಖ್ಯ ಉದ್ದೇಶ ಇವೆರಡು ಮಾತ್ರವಲ್ಲ. ಅದಕ್ಕಿಂತ ದೊಡ್ಡ ಉದ್ದೇಶ, ಮೂಲಭೂತವಾದ ಉದ್ದೇಶ, ಮೊನ್ನೆ ಘೋರ್ಪಡೆಯವರು ಹೇಳಿದ ಹಾಗೆ ಸೋಷಿಯಲ್ ಜಸ್ಟಿಸ್ ಮತ್ತು ಇನ್‌ಕ್ರೀಸಿಂಗ್ ಫುಡ್ ಪ್ರೊಡಕ್ಷನ್, ಸಾಮಾಜಿಕ ನ್ಯಾಯ ದೊರೆಯಬೇಕು ಮತ್ತು

ದೇಶದ ಆಹಾರದ ಉತ್ಪತ್ತಿ ಹೆಚ್ಚಾಗಬೇಕು ಎಂದು ಇರಬೇಕು ಎಂದು ತಿಳಿದಿದ್ದೇನೆ. ಮೊದಲು ಹೇಳಿದ ಉದ್ದೇಶವೇ ಕೈಗೂಡದಿರುವಾಗ ಈ ಎರಡು ಉದ್ದೇಶಗಳು ಹೇಗೆ ಕೈಗೂಡುತ್ತವೆಂದು ಸ್ವಲ್ಪ ವಿಚಾರ ಮಾಡಿ ನೋಡಬೇಕು.

ಅನೇಕ ಮಾನ್ಯ ಸದಸ್ಯರು ತಾರ್ಕಿಕವಾಗಿ ವಾದ ಮಾಡಿ ಈ ಹೊತ್ತು ಎಲ್ಲಾ ಕಡೆ ಭೂಮಿಗೆ ಮಾತ್ರ ಪರಿಮಿತಿ ಅನ್ವಯಿಸುತ್ತೀರಿ, ಉಳಿದ ಕ್ಷೇತ್ರಗಳಿಗೇಕೆ ಅನ್ವಯಿಸುವುದಿಲ್ಲ ಎಂದು ಹೇಳಿದರು. ಅದರಂತೆಯೇ ನಿನ್ನೆ ನಾಗರತ್ನಮ್ಮನವರು ಭೂ ಮಾಲೀಕರು ಯಾರನ್ನು ತಲೆ ಕಡಿದು, ಕೊಲೆ ಮಾಡಿ, ಅಥವಾ ಅನ್ಯಾಯದಿಂದ ಜಮೀನನ್ನು ಕಸುಕೊಂಡಿಲ್ಲ, ತಮ್ಮ ಸಂಪತ್ತಿನಿಂದ, ತಮ್ಮ ಐಶ್ವರ್ಯದಿಂದ ಅದನ್ನು ತೆಗೆದುಕೊಂಡಿದ್ದಾರೆ ಮತ್ತು ಅದನ್ನು ಪಾಪ, ಮಕ್ಕಳ ಹಾಗೆ ಬಹಳ ಪ್ರೀತಿಯಿಂದ ಸಾಕಿ, ಸಲಹಿ ಬೆಳೆಸಿಕೊಂಡು ಬಂದಿದ್ದಾರೆ, ಈ ದಿವಸ ಅದನ್ನು ಕಿತ್ತುಕೊಳ್ಳುತ್ತೀರಿ ಎಂದು ಹೇಳಿದರು. ಮಹಿಳೆ ತಾನು ಸಾಕಿದ ಮಕ್ಕಳ ಬಗ್ಗೆ ಮಮತೆಯಿಂದಿರುವುದು ಸ್ವಾಭಾವಿಕವಾದುದು. ಆದರೆ ಇದನ್ನು ಇನ್ನೂ ಹೆಚ್ಚಿನ ವಿಶಾಲವಾದ ಸಾಮಾಜಿಕ ದೃಷ್ಟಿಯಿಂದ ನೋಡಬೇಕೆಂದು ಕೇಳುತ್ತೇನೆ. ಈ ಸುಧಾರಣೆ ಒಂದು ವಿಧದಲ್ಲಿ ನಿರಾಶಾಜನಕವಾದುದೂ ಆಗಿದೆ. ಸಹಸ್ರಾರು ವರ್ಷಗಳಿಂದ ರೈತನು ತನ್ನ ಅಜ್ಜ, ಮುತ್ತಜ್ಜನ ಕಾಲದಿಂದ ಎಷ್ಟೋ ತಲೆಮಾರುಗಳಿಂದ ಬೆವರು ಸುರಿಸಿ, ಬಿಸಿಲು ಗಾಳಿ, ಮಳೆ ಎಣಿಸದೆ ಕೆಲಸ ಮಾಡಿ ದುಡಿದು ಅಭಿವೃದ್ಧಿಗೆ ತಂದಿದ್ದ ಭೂಮಿಯಲ್ಲಿ ಫಸಲು ಬೆಳೆಸಬೇಕು. ಅದನ್ನು ಬೆಂಗಳೂರು, ಮೈಸೂರುಗಳಲ್ಲಿರುವ ಮಾಲೀಕನು ಉಣ್ಣಬೇಕು. ಅವರು ಕಾಯಿದೆ ಪ್ರಕಾರ ಅಧಿಕಾರವನ್ನು ಆ ಭೂಮಿ ಮೇಲೆ ಚಲಾಯಿಸಬೇಕು. ಇದು ಸರಿಯೆ ಎಂಬುದನ್ನು ಯೋಚಿಸಬೇಕು. ಜಮೀನು ಮಾಲೀಕನ ಮತ್ತು ಗೇಣಿದಾರನ ಸಂಬಂಧವಿರಬೇಕೆ, ಬೇಡವೆ, ಇರಬೇಕಾದರೆ ಹೇಗಿರಬೇಕು ಮತ್ತು ಹೆಚ್ಚಾಗಿ ಉಳಿದ ಭೂಮಿಯನ್ನು ಹೇಗೆ ಹಂಚಬೇಕು ಎಂಬುದಷ್ಟೇ ಅಲ್ಲದೆ ಇದರ ಜೊತೆಗೆ ಈ ವಿಚಾರದ ನಿಜವಾದ ತಿರುಳು, ಮರ್ಮವಾದ ಸಾಮಾಜಿಕ ನ್ಯಾಯವೇನಿದೆ ಅದನ್ನೂ ಗಮನಿಸಬೇಕು.

ನಾವು ಈ ದಿವಸ ಪ್ರಜಾಪ್ರಭುತ್ವವೆಂದು ಹೇಳುತ್ತೇವೆ. ನಾವು ಪ್ರತಿಯೊಬ್ಬರೂ ಒಂದು ಲಕ್ಷ ಮಂದಿಯನ್ನು ಪ್ರತಿನಿಧಿಸಿ ಇಲ್ಲಿ ಸದಸ್ಯರಾಗಿ ಬಂದಿದ್ದೇವೆ. ನಾವು ಮಾತನಾಡುವಾಗ 80 ಸಾವಿರ ಜನರಿಗೆ ಅನುಕೂಲವಾಗುತ್ತದೆಯೋ ಅಥವಾ ನೂರಕ್ಕೆ 5-10 ಜನ ಮಾಲೀಕರಿಗೆ ಮಾತ್ರ ಅನುಕೂಲವಾಗುತ್ತದೆಯೋ ಎಂಬುದನ್ನು ಯೋಚನೆ ಮಾಡಬೇಕು. ಈ ದಿವಸ ಬೇಕಾದದ್ದು ಸಾಮಾಜಿಕ ನ್ಯಾಯವೇ ಹೊರತು ಒಬ್ಬರಿಗೆ ಹತ್ತು ಎಕರೆ, ಇನ್ನೊಬ್ಬರಿಗೆ ಹದಿನೈದು ಎಕರೆ ಕೊಡುವುದಲ್ಲ. ಇದನ್ನು ನಾವು ಸ್ವಲ್ಪ ಶಾಂತ ಮನಸ್ಸಿನಿಂದ ಸ್ವಂತ ವಿಚಾರವನ್ನು ಸ್ವಲ್ಪ ಮಟ್ಟಿಗೆ ಬದಿಗೊತ್ತಿ, ಬಹುಜನರಿಗೆ ಅನುಕೂಲವಾಗುವಂತೆ ಪರಿಶೀಲಿಸಿ ಒಂದು ತೀರ್ಮಾನಕ್ಕೆ ಬರಬೇಕು. ಹಾಗೆ ಮಾಡಿದರೆ ನಾವು ಒಂದು ನಿರಪೇಕ್ಷಾ ಭಾವನೆಯಿಂದ ಇದರ ಬಗ್ಗೆ ಅಭಿಪ್ರಾಯವನ್ನು ವ್ಯಕ್ತಪಡಿಸುವುದಕ್ಕೆ ಸಾಧ್ಯವಾಗುತ್ತದೆ; ಇಲ್ಲದಿದ್ದರೆ ಇಲ್ಲ.

ಇನ್ನು ಮತ್ತೊಂದು ವಿಚಾರವೆಂದರೆ ಆಹಾರ ಪದಾರ್ಥಗಳ ಉತ್ಪನ್ನ. ಈ ದಿವಸ ಇದನ್ನು ಒತ್ತಿ ಹೇಳಬೇಕಾಗಿಲ್ಲ, ಹೆಚ್ಚಾಗಿ ಹೇಳಿದರೆ ಪುನರುಕ್ತಿಯಾಗುತ್ತದೆ, ಆದರೆ ಒಂದು ಮಾತು ಹೇಳಬೇಕಾಗಿದೆ. ನಮ್ಮ ದೇಶದಲ್ಲಿ ಮುಖ್ಯವಾದ ಮಹತ್ವವುಳ್ಳ ಇಂಡಸ್ಟ್ರಿಯು ಯಾವುದೆಂದರೆ ವ್ಯವಸಾಯ. ಈ ವ್ಯವಸಾಯದಲ್ಲಿ ಎಷ್ಟು ಮಟ್ಟಿಗೆ ಸುಧಾರಣೆ ಮಾಡಿದರೆ ಅಷ್ಟು ಜನರ ಜೀವನ ಮಟ್ಟವನ್ನೇರಿಸಲು ಸಾಧ್ಯ. ಈ ದಿವಸ ಕ್ಯಾಪಿಟಲ್ ಫ್ರೊಫೆರ್ಷ ಹೇಗೆ ಆಗಲು ಸಾಧ್ಯ ಎಂಬುದನ್ನು ಪರಿಶೀಲಿಸಬೇಕು. ಭೂಮಿಯಿಂದ ಬರುವ ಉತ್ಪತ್ತಿಯನ್ನು ಒಂದಕ್ಕೆ ಎರಡು, ನಾಲ್ಕು, ಎಂಟರಷ್ಟು ಹೆಚ್ಚಿಸಿದರೆ ಬಂಡವಾಳ ಉತ್ಪನ್ನವಾಗಿ ಅದರಿಂದ ದೇಶದಲ್ಲಿ ಔದ್ಯೋಗೀಕರಣ ಮಾಡಬಹುದು. ಇದನ್ನು ಕೂಡ ಮಹತ್ವದ ದೃಷ್ಟಿಯಿಂದ ಪರಿಶೀಲಿಸಬೇಕಾದದ್ದು ಅಗತ್ಯ.

ಈಗ ನಾನೊಬ್ಬ ರೈತ. ಬೇರೆಯವರ ಜಮೀನನ್ನು ಸಾಗು ಮಾಡುತ್ತೇನೆ. ನಾನು ಎಷ್ಟು ದಿವಸ ವ್ಯವಸಾಯ ಮಾಡುತ್ತೇನೆಂಬುದು ಗೊತ್ತಿಲ್ಲ. ನಮ್ಮ ಅಜ್ಜ, ತಂದೆ ಮತ್ತು ನಾನು ಅಥವಾ ನನ್ನ ಮಗ ಈ ಜಮೀನಿನಲ್ಲಿ ಬೆವರು ಸುರಿಸಿ ಬೇಸಾಯ ಮಾಡಬಹುದು; ಫಸಲು ಬಂದ ಕೂಡಲೆ ಜಮೀನಿನ ಯಜಮಾನ ಬಂದು, ಆತನ ಮಕ್ಕಳು ಬಂದು ಅರ್ಧ ಅಥವಾ ಅದಕ್ಕಿಂತ ಹೆಚ್ಚು ಫಸಲು ತೆಗೆದುಕೊಂಡು ಹೋಗುತ್ತಾನೆ. ಹಾಗಿರುವಾಗ ಏಕೆ ಹೆಚ್ಚಾಗಿ ಬೆಳೆಯಬೇಕು ಎಂಬ ಭಾವನೆ ಬರುತ್ತದೆ. ಯಾವ ಆಕರ್ಷಣೆಯಿದೆ, ಏಕೆ ಬೆವರು ಸುರಿಸಬೇಕು ಎಂದು ಬೇಜಾರು ಬರುತ್ತದೆ. ಈ ದೃಷ್ಟಿಯಿಂದ ಜಮೀನು ಸಮಸ್ಯೆಯನ್ನು ಬಿಡಿಸಬೇಕಾಗಿದೆ.

ಕಾಂಗ್ರೆಸ್ಸಿನವರು ಸಮಾಜವಾದ ತತ್ವವನ್ನು ಕೇವಲ ಭೂಮಿಗೇಕೆ ಅನ್ವಯಿಸುವುದು, ಬೇರೆ ಬೇರೆ ವಿಷಯಗಳಿಗೇಕೆ ಅನ್ವಯಿಸುವುದಿಲ್ಲ ಎಂದು ಬಹಳ ಸದಸ್ಯರು ಹೇಳಿದ್ದಾರೆ. ಆದರೆ ನಮ್ಮ ಉದ್ದೇಶ ಕೇವಲ ಭೂ ಉತ್ಪತ್ತಿಗೆ ಕೊಡಲಿ ಹಾಕಬೇಕೆಂಬುದಲ್ಲ, ವ್ಯವಸಾಯಗಾರರ ಸ್ವಾತಂತ್ರ್ಯವನ್ನು ಪರಿಮಿತಗೊಳಿಸಬೇಕೆಂಬುದಲ್ಲ. ಇದಕ್ಕೆ ಸಂಬಂಧಪಟ್ಟಂಥ ಒಂದು ಮಾತನ್ನು ಓದಿ ಹೇಳುತ್ತೇನೆ. ಎ.ಐ.ಸಿ.ಸಿ.ಯವರು ಅಗ್ರಿಕಲ್ಚರಲ್ ರಿಫಾರಮ್ಸ್ ಸಬ್ ಕಮಿಟಿಯನ್ನು ಮಾಡಿದ್ದರು. ಆ ಕಮಿಟಿಯವರು ಮಾಡಿದಂಥ ವರದಿಯ ಒಂದು ಅಂಶ ಈ ರೀತಿ ಇದೆ :—

> "The question of social justice was indivisible and must permeate the spheres of national life and economy without distinction of rural and urban areas. It was therefore essential to consider the question of social and economic justice in respect of urban areas as well. Every attempt should be made to create an atmosphere in the country about austerity and hard work and there should not be created an impression that the principle of social justice and economy would affect only the rural areas."

ಆದುದರಿಂದ ತಿಳಿವಳಿಕೆಯಿಲ್ಲದೆ ಕೇವಲ ಹಳ್ಳಿಗಳಲ್ಲಿರುವ ಜನರ ಆದಾಯದ ಮೇಲೆ ಪರಿಮಿತಿ ಹಾಕುತ್ತಾರೆ, ಬೇರೆ ಕಡೆಗೆ ಪರಿಮಿತಿ ಹಾಕುವುದಿಲ್ಲ ಎನ್ನುವುದು ಅಷ್ಟು ಸಮರ್ಪಕವಾದ ವಾದವಲ್ಲವೆಂದು ತೋರಿಸಲು ನಾನು ಇದನ್ನು ಹೇಳುತ್ತಿದ್ದೇನೆ. ಇನ್ನೂ

(ಶ್ರೀ ರಾಮಕೃಷ್ಣ ಹೆಗ್ಗಡೆ)

ಅನೇಕ ಕಾರಣಗಳನ್ನು ಹೇಳಬಹುದು. ಇದನ್ನು ಮಾನ್ಯ ಸದಸ್ಯರಾದ ಶ್ರೀ ಘೋರ್ಪಡೆಯವರು ಚೆನ್ನಾಗಿ ಹೇಳಿದ್ದಾರೆ. ಇನ್ನೊಂದು ವಿಷಯವನ್ನು ಹೇಳಬೇಕಾಗಿದೆ. ಜತ್ತಿ ಸಮಿತಿಯವರು ಮಾಡಿರುವ ಸೂಚನೆಗೂ ಮತ್ತು ಈ ಬಿಲ್ಲಿನಲ್ಲಿರುವ ಸೀಲಿಂಗಿಗೂ ವ್ಯತ್ಯಾಸವಿದ್ದು ಇದು ಸ್ವಲ್ಪ ತಪ್ಪು ತಿಳುವಳಿಕೆಗೆ ಎಡೆಕೊಡುವ ಹಾಗೆ ಇದೆ. ಭೂಮಿಯ ಕ್ಷೇತ್ರಕ್ಕೆ ಅನುಗುಣವಾಗಿ ಮಿತಿ ಇರಬೇಕು ಇಲ್ಲವೆ ಅದರಿಂದ ಬರುವ ಉತ್ಪತ್ತಿಗೆ ಅನುಗುಣವಾಗಿ ಪರಿಮಿತಿ ಹಾಕಬೇಕು ಎಂಬ ಎರಡು ಅಂಶಗಳಿವೆ. ನಿಜವಾಗಿಯೂ ಭೂಮಿಯ ಕ್ಷೇತ್ರಕ್ಕೆ ಪರಿಮಿತಿ ಇದೆಯೇ ಹೊರತು ಆದಾಯಕ್ಕೆ ಪರಿಮಿತಿ ಇಲ್ಲ, ಆದುದರಿಂದ ನನ್ನ ಅಭಿಪ್ರಾಯವೇನೆಂದರೆ ಯಾವ ಯಾವ ಬಗೆಯ ಕ್ಷೇತ್ರ ಜಮೀನು ಇದೆಯೋ ಅಷ್ಟನ್ನು ಮೂರು ನಾಲ್ಕು ಕ್ಲಾಸ್ ಮಾಡಿ ಕ್ಷೇತ್ರ ದೃಷ್ಟಿಯಿಂದ ಪರಿಮಿತಿಯನ್ನು ಹಾಕಬಹುದು, ಆದಾಯದ ದೃಷ್ಟಿಯಿಂದ ಅಲ್ಲವೆಂದು ಹೇಳುತ್ತೇನೆ. ಸೀಲಿಂಗ್ ಹಾಕಬೇಕಾದರೆ ಉತ್ಪನ್ನವನ್ನು ದೃಷ್ಟಿಯಲ್ಲಿಟ್ಟುಕೊಂಡಿದ್ದಾರೆ. ಆದುದರಿಂದ ಉದಾಹರಣೆಗೆ ಒಂದು ಹಿಡುವಳಿಗೆ 1,200 ರೂಪಾಯಿಗಳಷ್ಟು ಉತ್ಪತ್ತಿ ಇದ್ದರೆ ಅದೊಂದು basic holding ಎಂದು ಮಾಡಲಾಗಿದೆ. ಈ ಒಂದು ಹಿಡುವಳಿಯಲ್ಲಿ ನಮ್ಮ ವಿಶೇಷ ಪ್ರಯತ್ನದಿಂದ, ವ್ಯವಸಾಯದ ಪ್ರಗತಿಪರ ಪದ್ಧತಿಯನ್ನು ಅನುಸರಿಸಿ ಹತ್ತು ಸಾವಿರ ರೂಪಾಯಿ, ಬೆಲೆಯ ಉತ್ಪತ್ತಿಯಾದರೆ ಅದಕ್ಕೆ ಯಾವ ಬಾಧೆಯೂ ಇರಲಾರದು.

Sri S. D. KOTHAVALE (Chikodi).—As I understand the Bill, it does not contemplate a division of ceiling hereafter. The ceiling would be only for the first time and it is open to the land-owners to multiply the production to any extent they like and it would be a welcome. I understand the Revenue Minister to have made it clear already.

ಶ್ರೀ ರಾಮಕೃಷ್ಣ ಹೆಗ್ಗಡೆ.—ಶ್ರೀ ಮಂಜಪ್ಪನವರು ಈ ವಿಷಯ ಹೇಳಬೇಕು. ಅಂದರೆ ನಾವು ಅವರಿಗೆ ಕೃತಜ್ಞರಾಗುತ್ತೇವೆ.

ಶ್ರೀ ಕಡಿದಾಳ್ ಮಂಜಪ್ಪ.—ಇದನ್ನು ಮೊನ್ನೆ ತಾನೆ ನಾನು ಹೇಳಿದೆ. ಒಮ್ಮೆ ಸೀಲಿಂಗ್ ನಿರ್ಧರಿಸಿದ ಮೇಲೆ, ಅನಂತರ ಅಂಥ ಹಿಡಿವಳಿಯಲ್ಲಿ ಜಾಸ್ತಿ ಉತ್ಪತ್ತಿ ಬಂದರೆ, ಪುನಃ ಅದನ್ನು ಪುನರ್ವಿಮರ್ಶೆ ಮಾಡುವುದಿಲ್ಲ. ಆದರೆ ಹೆಚ್ಚಿನ ಆಸ್ತಿ ಕೊಂಡುಕೊಂಡಾಗ್ಗೆ ಮಾತ್ರ ಇದು ಬರುತ್ತದೆ. ಇಲ್ಲದಿದ್ದರೆ ಪುನಃ ವಿಂಗಡಿಸುವುದಕ್ಕೆ ಹೋಗುವುದಿಲ್ಲ.

Sri VEERENDRA PATIL (Chincholi).—Supposing there is a dry land and it is converted to wet land and the holding exceeds the ceiling?

Sri Kadidal MANJAPPA.—No doubt there is no provision in the Bill for that contingency. We must think of such a contingency and make provision for that.

Sri S. D. KOTHAVALE.—Some provision will be needed; otherwise, there will be no incentive on the part of the land holder to improve his land.

Sri Kadidal MANJAPPA.—There would not be revision of ceiling when once the ceiling is fixed.

ಶ್ರೀ ರಾಮಕೃಷ್ಣ ಹೆಗ್ಗಡೆ.—ಜತ್ತಿ ಸಮಿತಿಯ ವರದಿಯಲ್ಲಿ ಮತ್ತು ಈ ಮಸೂದೆಯಲ್ಲಿ ಹಿಡುವಳಿ ಪರಿಮಿತಿಯ ನಿರ್ಧಾರಕ್ಕೆ ಆದಾಯವನ್ನು ಆಧಾರವಾಗಿ ಸೂಚಿಸಿರುವುದರಿಂದ ತಪ್ಪು ಅಭಿಪ್ರಾಯಕ್ಕೆ ಆಸ್ಪದವಾಗಿದೆ. ಈಗ ಮಿತಿ ಹೊರಿಸುತ್ತಿರುವುದು ಜಮೀನು ಕ್ಷೇತ್ರದ ಮೇಲೆಯೇ ಹೊರತು ಆದಾಯದ ಮೇಲಲ್ಲ. ಉತ್ಪನ್ನದ ಮೇಲೆ ಯಾವುದೇ ರೀತಿಯ ಪರಿಮಿತಿ ಹಾಕಬೇಕು ಎಂದು ಯಾರದೂ ಅಭಿಪ್ರಾಯವಿರುವುದಿಲ್ಲ. ಈ ಪರಿಮಿತಿಯ ವಿಚಾರದಲ್ಲಿ ಅರ್ಬನ್ ಏರಿಯಾ, ರೂರಲ್ ಏರಿಯಾ ಎಂಬ ಎರಡು ವಿಭಾಗ ಎಂದು ವಾದ ಮಾಡುತ್ತಾರೆ. ಇದೊಂದು ಪೊಳ್ಳು ವಾದವೆಂದು ನಾನು ಹೇಳಬಯಸುತ್ತೇನೆ. ಯಾಕೆಂದರೆ ಅರ್ಬನ್ ಏರಿಯಾದಲ್ಲಿರತಕ್ಕ ಜನರ ಸಂಖ್ಯೆ ಎಷ್ಟು, ರೂರಲ್ ಏರಿಯಾದಲ್ಲಿರತಕ್ಕ ಜನರ ಸಂಖ್ಯೆ ಎಷ್ಟು ಎನ್ನುವುದನ್ನು ವಿಚಾರಮಾಡಬೇಕು. ಭೂಸುಧಾರಣೆಯ ಬಗ್ಗೆ ಇಷ್ಟೊಂದು ದೊಡ್ಡ ತಳಮಳ, ಇಷ್ಟೊಂದು ದೊಡ್ಡ ಚಳವಳಿ ನಮ್ಮ ಮೈಸೂರು ರಾಜ್ಯದಲ್ಲಿರುವುದನ್ನು ನೋಡಿ ನನಗೆ ಬಹಳ ಆಶ್ಚರ್ಯವಾಗಿದೆ. ಒಂದು ವರ್ಷದ ಹಿಂದೆಯೇ ಮೈಸೂರು ಪ್ರದೇಶ ಕಾಂಗ್ರೆಸ್ ಕಮಿಟಿಯಲ್ಲಿ ಈ ವಿಷಯವನ್ನು ಚರ್ಚೆ ಮಾಡಲಾಯಿತು. ಅದಕ್ಕೂ ಮೊದಲು ಜತ್ತಿ ಕಮಿಟಿಯ ವರದಿಯ ಮೇಲೆ ಚರ್ಚೆ ಮಾಡಬೇಕೆಂದು ನಿರ್ಧಾರ ಮಾಡಲಾಗಿತ್ತು. ಮುಂಬಯಿ ಗೇಣಿ ಶಾಸನದಲ್ಲಿರುವ ಅಂಶಗಳನ್ನು, ಜನರಿಂದ ಬಂದಂಥ ಆಕ್ಷೇಪಣೆಗಳನ್ನು, ಸೂಚನೆಗಳನ್ನು ಕ್ರೋಢೀಕರಿಸುವುದಕ್ಕಾಗಿ ಮೈಸೂರು ಪ್ರದೇಶ ಕಾಂಗ್ರೆಸ್ ಕಮಿಟಿಯು ಒಂದು ಉಪಸಮಿತಿಯನ್ನು ನೇಮಕ ಮಾಡಿತು. ಆ ಉಪಸಮಿತಿಯಲ್ಲಿ ನಾನೂ ಇದ್ದೆನು. ಈ ಮಾತನ್ನು ಏತಕ್ಕೆ ಹೇಳಬಯಸುತ್ತೇನೆಂದರೆ ಜನಸಾಮಾನ್ಯರ ಮೇಲೆ ಈ ಬಿಲ್ಲಿನ ಮೂಲಕ ನಿಜವಾಗಿ ಏನೇನು ಪರಿಣಾಮವಾಗುತ್ತದೆ, ಅಂಥವರ ಸಂಖ್ಯೆ ಎಷ್ಟಿದೆ, ಇದರ ಮೂಲಕ ಯಾರಿಗೆ ಸ್ವಲ್ಪ ಮಟ್ಟಿಗೆ re-adjustment ಮಾಡಿಕೊಳ್ಳಬೇಕಾಗುತ್ತದೆ ಮತ್ತು ಅಂಥವರ ಸಂಖ್ಯೆ ಎಷ್ಟಿದೆ, ಈ ಎರಡು ತರಹದ ಜನಸಂಖ್ಯೆಯ ನಡುವೆ ಇರುವ relative strength ಎಷ್ಟಿದೆ ಇದನ್ನೆಲ್ಲಾ ಹೇಳಬಯಸುತ್ತೇನೆ. ಈ ಉಪಸಮಿತಿಯ ಮುಂದೆ ಸುಮಾರು 77-78 ವ್ಯಕ್ತಿಕವಾಗಿ ಹಾಗೂ ಡೆಲಿಗೇಷನ್ಸ್ ಮುಖಾಂತರವಾಗಿ ರೆಪ್ರೆಸೆಂಟೇಷನ್ಸ್ ಬಂದಿದ್ದವು. ಅದರ ಹೊರತಾಗಿ ಲಿಖಿತ ಮೂಲಕ ಅನೇಕ ವಿಚಾರಗಳನ್ನು, ವಿರೋಧವನ್ನು ವ್ಯಕ್ತಪಡಿಸುವ ನೂರಾರು ಪತ್ರಗಳು ಬಂದಿದ್ದವು. ಅವುಗಳನ್ನೆಲ್ಲಾ ನೋಡಿ analyse ಮಾಡಿದ ನಂತರ ಕಂಡುಬಂದದ್ದೇನೆಂದರೆ ರೈತನ ಪರವಾಗಿ ಒಂದೇ ಒಂದು, ಅದೂ ಸಹ ನನ್ನ ಜಿಲ್ಲೆಯಿಂದ, ಈ ಸಮಸ್ಯೆಯನ್ನು ಎತ್ತಿ ಹಿಡಿದು, ಚೆನ್ನಾಗಿ ವಿವೇಚನೆ ಮಾಡಿದ ಪತ್ರವು ಬಂದಿತ್ತು. ಈ ಸಮಸ್ಯೆಯಲ್ಲಿರುವ ಲೋಪದೋಷಗಳೇನು, ತೊಂದರೆಗಳು ಏನು ಅವುಗಳನ್ನು ಯಾವ ರೀತಿ ಬಗೆಹರಿಸಬೇಕು ಎನ್ನುವುದನ್ನು ಅದರಲ್ಲಿ ವಿವೇಚನೆ ಮಾಡಲಾಗಿತ್ತು. ನೂರಾರು ಪತ್ರಗಳಲ್ಲಿ ಒಂದೇ ಒಂದು ರೆಪ್ರೆಸೆಂಟೇಷನ್ನು ರೈತನ ಪರವಾಗಿ ಇದ್ದಿತು. ಇದರ ಮೇಲಿಂದ ಏನು ಅರ್ಥವಾಗುತ್ತದೆ ಎಂದರೆ ಯಾರಿಗೆ ತಮ್ಮ ಹಕ್ಕುಗಳನ್ನ

ಸಮರ್ಥಿಸಿಕೊಂಡು ರಕ್ಷಿಸಿಕೊಳ್ಳುವ ಶಕ್ತಿ ಇಲ್ಲವೋ ಅವರ ಮಾತು ನಡೆಯುವಂಥಾ ಪರಿಸ್ಥಿತಿ ಈಗ ಇಲ್ಲ. ನಮ್ಮ ರಾಜ್ಯವನ್ನು ನಡೆಸುವ ಈ ಸಭೆಯಲ್ಲಿ ಸಾಮಾನ್ಯ ರೈತನ ಗೋಳನ್ನು ಮುಖ್ಯವಾಗಿ ಹೇಳ ತಕ್ಕಂಥ ಸದಸ್ಯರು ಎಷ್ಟು ಜನರಿದ್ದಾರೆ? ಸದಸ್ಯರು ತಮ್ಮ ಸ್ವಂತ ಚುನಾವಣಾ ಕ್ಷೇತ್ರಗಳಿಗೆ ಹೋದಾಗ್ಗೆ ಹಳ್ಳಿಗರ ಕಣ್ಣು ಒರೆಸುತ್ತಾರೆ. ಜಮೀನು ಇನ್ನು ಮುಂದೆ ನಿಮ್ಮದು ಆಗುತ್ತದೆಂದು ನಾವೇ ಹೇಳುತ್ತೇವೆ. ಈ ಬಗ್ಗೆ ನಮ್ಮ ಮಾನ್ಯ ಸ್ನೇಹಿತರಿಗೆ ಒಂದು ಮಾತನ್ನು ನಾನು ಇಲ್ಲಿ ಹೇಳುತ್ತೇನೆ. ಅದೇನೆಂದರೆ ಈ ಭೂ ಸುಧಾರಣೆಯ ವಿಷಯವು ನಿನ್ನೆ ಮೊನ್ನೆ ಬರಲಿಲ್ಲ. ಹಿಂದಿನ ಅಧಿವೇಶನದಲ್ಲಿ ಬರಲಿಲ್ಲ. ಈ ವಿಷಯವು 30-35 ವರ್ಷಗಳ ಹಿಂದಿನಿಂದ ನಮ್ಮ ಮುಂದೆ ಬಂದಿದೆ ಮುಂಬಯಿ ರಾಜ್ಯದಲ್ಲಿ 1937ನೆಯ ಇಸವಿಯಲ್ಲಿ ಈ ಸಂಬಂಧವಾದ ಕೆಲವು ಅಂಶವನ್ನೊಳಗೊಂಡ ಒಂದು ಬಿಲ್ಲನ್ನು ತಂದು ಪಾಸ್ ಮಾಡಿ, ಆಕ್ಟ್ ಮಾಡಿ, ಜಾರಿಗೆ ತಂದಿದ್ದಾರೆ.

11-30 A.M.

ಹೀಗೆ ನಮ್ಮ ದೇಶದಲ್ಲಿ ಭೂ ಸುಧಾರಣೆ ವಿಚಾರವು 20 ವರ್ಷದ ಹಿಂದೆ ಕಾಯಿದೆ ಸ್ವರೂಪದಲ್ಲಿ ಬಂತು. ಇಪ್ಪತ್ತು ವರ್ಷ ಗತಿಸಿಹೋಯಿತು. ಇನ್ನೂ ಕೂಡ ಸಾಮಾನ್ಯವಾದಂಥ ಕೆಲವೊಂದು ಅಂಶಗಳನ್ನು ಒಪ್ಪುವುದಿಲ್ಲ ಎಂದರೆ ನಾವು ಎಷ್ಟು ಹಿಂದುಳಿದವರಾಗಿದ್ದೇವೆ ಎನ್ನುವುದು ವ್ಯಕ್ತವಾಗುತ್ತದೆ. ಆದ್ದರಿಂದ ನಮ್ಮ ಕೆಲವು ಕಾಂಗ್ರೆಸ್ ಸ್ನೇಹಿತರಿಗೆ ಕೆಲವರಿಗೆ ಬೇರೆ ಕಡೆ ಹೇಳುವುದಕ್ಕೆ ಸಾಧ್ಯವಿಲ್ಲದೇ ಇಲ್ಲಿ ಹೇಳುವ ಒಂದು ಅವಕಾಶ ಸಿಕ್ಕಿದ್ದರಿಂದ ಈ ಸಂದರ್ಭದಲ್ಲಿ ಹೇಳಬೇಕಾಗಿದೆ. ಇದು ನಮಗೆ ಹೊಸದಲ್ಲ. ನಾವು ಈ ವಿಷಯದಲ್ಲಿ ಏನಾದರೂ ಹಿಂದೇಟು ಹಾಕಿದರೆ it will be clearly a breach of trust with our electorates. ಇದರಲ್ಲಿ ಯಾವ ತರಹ ಸಂದೇಹವೂ ಇಲ್ಲ. ಎಲೆಕ್ಷನ್ ಮ್ಯಾನಿಫೆಸ್ಟೋ ಏನಿದೆ ಅದನ್ನು ಮರೆತಿದ್ದೇವೆ :—

Progressively there will be elimination of this tenancy system. Progressively we shall introduce ceilings on land holdings.

ಇದನ್ನು ಎಲೆಕ್ಷನ್ ಮ್ಯಾನಿಫೆಸ್ಟೋನಲ್ಲಿ ಹೇಳಿದ್ದೇವೆ ಎಂಬುದನ್ನು ಇಲ್ಲಿ ಸದಸ್ಯರ ಗಮನಕ್ಕೆ ತರಬಯಸುತ್ತೇನೆ. ಆದ್ದರಿಂದ ಈ ಭಾಗದ ಮಾನ್ಯ ಸ್ನೇಹಿತರಿಂದ ಆಕ್ಷೇಪಣೆ ಬರುತ್ತದೆ ಎಂದು ತಿಳಿದ ಕೊಂಡಿರಲಿಲ್ಲ. ಆದರೆ ಆಕ್ಷೇಪಣೆ ಬಂದಿರುವುದು ಮತ್ತೊಂದು ಭಾಗದಿಂದ ವಿಶೇಷವಾಗಿ ಬಂದಿದೆ.

ಶ್ರೀ ವೈ. ವೀರಪ್ಪ (ಹೊಳೇನರಸೀಪುರ).—ನೀವು ಹೇಳಿದಿರಿ. ಕಾಂಗ್ರೆಸ್ ಸ್ನೇಹಿತರಿಗೆ ಬುದ್ಧಿವಾದ ಹೇಳುವುದಕ್ಕೆ ಬೇರೆ ಎಲ್ಲೂ ಅವಕಾಶವೇ ಇಲ್ಲ. ಅದಕ್ಕೇ ಈ ಒಂದು ಸಮಯ ತೆಗೆದುಕೊಂಡೆ ಎಂದು. ಹಾಗಾದರೆ ಬರೀ ಕಾಂಗ್ರೆಸ್ಸಿನವರಿಗೆ ಹೇಳುತ್ತಾ ಇದ್ದೀರಿ. ಬೇರೆಯವರಿಗೆ ಹೇಳುತ್ತಿಲ್ಲ ಎಂತಲೇ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಅದನ್ನು ಹೇಳುತ್ತಾ ಇದ್ದೆ. ಆಕ್ಷೇಪಣೆ ಆ ಕಡೆ ಸ್ನೇಹಿತರಿಂದಲೂ ಬಂದಿದೆ.

ಶ್ರೀ ಕಡಿದಾಳ್ ಮಂಜಪ್ಪ.—ಬುದ್ಧಿವಾದ ಎಂದು ಹೇಳಲಿಲ್ಲ. ನನ್ನ ಅಭಿಪ್ರಾಯ ಹೇಳುತ್ತೇನೆ ಎಂದು ಹೇಳಿದರು.

Sri F. X. DENIS PINTO (Kaup).—I want to know your views about self-cultivated farms.

ಶ್ರೀ ರಾಮಕೃಷ್ಣ ಹೆಗ್ಗಡೆ.—ನಾನು ಹೇಳುತ್ತಾ ಇದ್ದುದು, ಆಕ್ಷೇಪಣೆ ಅತ್ತಕಡೆ ಸ್ನೇಹಿತರಿಂದ ಕೂಡ ಬಂದಿದೆ. ಎಲ್ಲಕ್ಕೂ ದೊಡ್ಡ ಆಕ್ಷೇಪಣೆ ಇದರ ಬಗ್ಗೆ ಬಂದಿರುವುದು ಸ್ವತಂತ್ರ ಪಕ್ಷದಿಂದ (Independent Party) ಇಂದ. ಈ ಸಭೆಯೊಳಗೆ ಆ ಪಕ್ಷದವರು ಇಲ್ಲದೇ ಇರಬಹುದು. ಹೊರಗಡೆ ಈ ಸ್ವತಂತ್ರ ಪಾರ್ಟಿಅವರು ಸ್ವಾತಂತ್ರ್ಯಬೇಕಾಗಿರುವುದು ತಮಗಷ್ಟೇ ಹೊರತು ಕೋಟ್ಯಾನು ಕೋಟಿ ಜನರಿಗೆ......

Sri J. B. MALLARADHYA (Nanjangud).—If you kindly yield for a minute, is it fair for the Hon'ble Member to say something against the Swatantra Party, especially when they are not here to defend themselves? ಸ್ವತಂತ್ರ ಪಾರ್ಟಿಯವರು ಇಲ್ಲಿ ಇಲ್ಲ. ಅವರ ಮೇಲೆ ಏಕೆ ಸ್ವಾಮಿ ಮಾತನಾಡುವುದು?

Sri RAMAKRISHNA HEGDE.—I do not know why Sri Mallaradhya should try to protect the interests of the Swatantra Party. ನಾನು ಈ ವಿಷಯದಲ್ಲಿ ತಾತ್ವಿಕವಾಗಿ ಬಂದಂಥ ವಿರೋಧದ ಬಗ್ಗೆ ಹೇಳುತ್ತಿದ್ದೇನೆ. ಈ ಸನ್ಮಾನ್ಯ ಸಭೆಯೊಳಗೇ ಇರಲಿ, ಹೊರಗಡೆಯೇ ಇರಲಿ ಅದನ್ನು ಹೇಳುವ ಅಧಿಕಾರ ನನಗಿದೆ. ಅವರನ್ನು ನಾನು ದೂಷಣೆ ಮಾಡುತ್ತಿಲ್ಲ. ಇವತ್ತು ಮುಖ್ಯವಾಗಿ ಭೂ ಸುಧಾರಣೆಗೆ ನಮ್ಮ ದೇಶದಲ್ಲಿ ವಿರೋಧ ಮಾಡುವ ಒಂದು ದೊಡ್ಡ force ಯಾವುದು ಎಂದರೆ ಹೊಸದಾಗಿ ರಚಿತವಾದಂಥ ಸ್ವತಂತ್ರ ಪಾರ್ಟಿ. ಕಮ್ಯೂನಿಸ್ಟ್ ಪಾರ್ಟಿಯಿಂದ ಹಿಡಿದು ನಮ್ಮ ದೇಶದ ಎಲ್ಲ ಸಣ್ಣಪುಟ್ಟ ರಾಜಕೀಯ ಪಕ್ಷಗಳೂ, ಹಿಂದೂ ಮಹಾಸಭೆಯವರೂ ಭೂಸುಧಾರಣೆಯ ತತ್ವವನ್ನು ಒಪ್ಪಿದ್ದಾರೆ. ಈಗ ಹೊಸದಾಗಿ ಹುಟ್ಟಿರುವ ಸ್ವತಂತ್ರ ಪಾರ್ಟಿ ಮಾತ್ರ ಈ ಲ್ಯಾಂಡ್ ರಿಫಾರಂಸ್ ಆಗಬಾರದು ಎಂದು ಹೇಳುತ್ತಾರೆ.

Sri B. L. NARAYANASWAMY (Mulbagal).—Sir, I rise to a point of order. It is not left to the Hon'ble Member to criticise any one party or member who is not on the floor of the House. The Hon'ble Member may be called to order not to make reference like that.

Sri RAMAKRISHNA HEGDE.—Sir, this is a discussion on principles. I am not accusing anybody or any individual or making allegations against any individual. I am just discussing the theoretical or the ideological land reforms in relation aspects of various to political parties.

[MR. SPEAKER in the Chair.]

ಅಧ್ಯಕ್ಷರು.—ಈಗ ನಡೆದಿರುವ ವಿಷಯ ಏನು?

ಶ್ರೀ ಬಿ. ಎಲ್. ನಾರಾಯಣಸ್ವಾಮಿ.—ಈ ಸಭೆಯಲ್ಲಿ ಇಲ್ಲದೇ ಇರುವ ವ್ಯಕ್ತಿಗಳು ಅಥವಾ ಪಾರ್ಟಿ ಷಯದಲ್ಲಿ ಯಾವ ಸದಸ್ಯರೇ ಆಗಲೀ ಟೀಕೆ ಮಾಡುವುದು ಉಚಿತವಲ್ಲ, ಸಂಪ್ರದಾಯವಲ್ಲ ಎಂದು ಹೇಳಿದೆ. ಸ್ವತಂತ್ರ ಪಾರ್ಟಿಯ ನಡೆವಳಿಕೆಯ ವಿಚಾರದಲ್ಲಿ ಅವರು ಹೇಳುತ್ತಾ ಇದ್ದರು. ಆ ರೀತಿ ಹೇಳುವುದು

(ಶ್ರೀ ಬಿ. ಎಲ್. ನಾರಾಯಣಸ್ವಾಮಿ)

ಸಂಪ್ರದಾಯವಲ್ಲ, ದಯವಿಟ್ಟು ಆ ರೀತಿ ಹೇಳಬಾರದೆಂದು ಅಪ್ಪಣೆ ಮಾಡಬೇಕೆಂದು ಹೇಳಿದೆ.

ಅಧ್ಯಕ್ಷರು.—ಸ್ವತಂತ್ರ ಪಾರ್ಟಿ ಸದಸ್ಯರು ಯಾರೂ ಇಲ್ಲಿ ಇಲ್ಲ, ಆದ್ದರಿಂದ ಆ ವಿಷಯ ಸ್ವಲ್ಪ ಹೇಳದೆ ಬಿಟ್ಟರೇ ಒಳ್ಳೆಯದು......

Sri RAMAKRISHNA HEGDE.—Before giving a ruling I may kindly be heard.

Mr. SPEAKER.—I have not given any ruling.

Sri S. D. KOTHAVALE.—Sir, I beg to submit that there are two ideologies, progressive ideologies in the sphere of agriculture. There are other views which are opposed on certain grounds. Just to explain and meet the case of the other ideological views, can we not express ourselves? There are many views expressed which practically go to the Swatantra Party. I do not think there is anything wrong to express so.

ಶ್ರೀ ರಾಮಕೃಷ್ಣ ಹೆಗ್ಗಡೆ.—ಸ್ವಾಮಿ, ಇಲ್ಲಿ ಈಗ ಸಂದರ್ಭ ಭೂಸುಧಾರಣೆ ಮಸೂದೆಯನ್ನು ಚರ್ಚೆ ಮಾಡುತ್ತಿದ್ದೇವೆ. ಈ ಮಸೂದೆಯ ಮೇಲೆ ನಮ್ಮ ದೇಶದಲ್ಲಿ ಇರುವಂಥ ಅನೇಕ ರಾಜಕೀಯ ಪಕ್ಷ ಪಂಗಡಗಳು ತಮ್ಮ ತಮ್ಮದೇ ಆದಂಥ ಒಂದು ತಾತ್ವಿಕ ಅಭಿಪ್ರಾಯವನ್ನು ಇಟ್ಟುಕೊಂಡಿವೆ. ನಾನು ಬೇರೆ ಬೇರೆ ರಾಜಕೀಯ ಪಕ್ಷಗಳ ತಾತ್ವಿಕ ಅಭಿಪ್ರಾಯವನ್ನು ಚರ್ಚೆ ಮಾಡುತ್ತೇನೆಯೇ ಹೊರತು ಯಾವ ಒಬ್ಬ ವ್ಯಕ್ತಿಯನ್ನಾಗಲಿ ಅಥವಾ ಯಾವುದೇ ಗುಂಪನ್ನಾಗಲಿ ಕುರಿತು ಅದರ ಮೇಲೆ ದೋಷಾರೋಪಣೆ ಮಾಡುತ್ತಿಲ್ಲ. ಈ ತರಹದ ಚರ್ಚೆಗೆ ಯಾವ ರೀತಿಯಲ್ಲೂ ಬಾಧಕ ಇರಬಾರದು.

ಅಧ್ಯಕ್ಷರು.—ಅದಕ್ಕೇ ನಾನು ಹೇಳುವುದು, ಐಡಿಯಾಲಾಜಿಕಲ್ 'ಡಿಫರೆನ್ಸಸ್' ಏನಿದೆ ಎಂಬುದನ್ನು ಹೇಳಬಹುದು. ಇಂಥಿಂಥಾ principle ಇದೆ, ಇಂತಹ principle ಸರಿ, ಇಂತಹ principle ಸರಿಯಿಲ್ಲ ಎಂದು ಹೇಳಬಹುದು. ಇದು ಸರಿ, ಇದನ್ನು ಒಪ್ಪುತ್ತೇವೆ ಎಂದು ಹೇಳಿ, ಬೇಡ ಎಂದು ಹೇಳುವುದಿಲ್ಲ. ಆದರೆ ಸ್ವತಂತ್ರ ಪಾರ್ಟಿಅವರ principle ಹೀಗೆ ಇದೆ, ಅದು ತಪ್ಪು ಎಂದು ಹೇಳಬಾರದು. ತತ್ವಗಳ ವಿಷಯದಲ್ಲಿ ಇವತ್ತು ಏನು ದೇಶದಲ್ಲಿ ನಡೆಯುತ್ತಾ ಇದೆ ಆ ತತ್ವ ನನಗೆ ಮಾನ್ಯ ಇಲ್ಲ, ಸರಿಕಾಣುವುದಿಲ್ಲ ಎಂದು ಹೇಳಿ.

ಶ್ರೀ ಡಿ. ದೇವರಾಜ ಅರಸ್ (ಹುಣಸೂರು).—On a point of information. ಇಲ್ಲಿ ಸ್ವತಂತ್ರ ಪಾರ್ಟಿ ಇಲ್ಲದೇ ಇದ್ದರೂ ಪರವಾಗಿಲ್ಲ. ಸ್ವತಂತ್ರ ಜನ ಎಂದು ಹೇಳಬಹುದೇ ಸ್ವಾಮಿ ?

ಅಧ್ಯಕ್ಷರು.—ಇಲ್ಲಿ ಇಂಡಿಪೆಂಡೆಂಟ್ ಮೆಂಬರ್ಸ್ ಇದ್ದಾರೆ. ಆದ್ದರಿಂದ ಆ ತರಹ ಅಭಿಪ್ರಾಯ ಬರುವ ಹಾಗೆ ಹೇಳಿದರೆ ಹೇಳಬಹುದು. ಆದರೂ ನಾನು ಹೇಳುವ ಒಂದು ಮಾತನ್ನು ವಿಚಾರ ಮಾಡಬೇಕು. ಯಾವ ಪಾರ್ಟಿಯ ಜನ ಇಲ್ಲಿ ಪ್ರತಿನಿಧಿತವಾಗಿಲ್ಲ ಆ ಪಾರ್ಟಿಯ ideological principles criticise ಮಾಡುತ್ತಿದ್ದಾರೆ ಎಂದು ಆಗಬಾರದು. ಬೇಕಾದರೆ ಪಿ.ಎಸ್.ಪಿ. principles ತಪ್ಪು ಎಂದರೆ, ಅದರಲ್ಲಿ ತಪ್ಪಿಲ್ಲ.

Sri J. B. MALLARADHYA.—I rise to a point of order. On the point of order raised by my friend Sri Narayanaswamy, a ruling has been given ....

Sri S. D. KOTHAVALE.—It is only a question of information. As far as I see, in the Rules of Procedure and Conduct of Business, there is a rule which prohibits bringing in certain names which are not represented. But as far as I know, there is no rule in the Rules of Procedure which prohibits making a reference to any political party, having its office or activity either in this State or other States,—particularly in this State. As far as we know there are persons working in the State itself who work for a certain party. Therefore, there is no specific rule to prohibit making a reference to this party. It would be rather very proper not to prohibit such references.

Mr. SPEAKER.—If the Hon'ble Member means to say that our Rules of Procedure are exhaustive, he has to revise his opinion. After all now here in the world the Rules of Procedure are exhaustive at all. We have been following certain principles by which we have to be guided. On the question raised, I have to give a ruling and that in is that no party by name can be criticised which is not represented this House. I have said that so far as the principles and ideologies of a party are concerned, the members can criticise them. The members can attack the principles and ideologies without naming the party. On the other hand if the name of the party is mentioned and any discussion is allowed, the leader of that party may write saying that I have allowed discussion and he wants to defend it. How can we do that? I am not only right in this respect but I know that I am supported by a large number of precedents of the past.

Sri RAMAKRISHNA HEGDE.—They have opportunity to defend here.........

Sri J. B. MALLARADHYA.—This is the second time the Speaker has given a ruling. I wish to know whether it is open to any member to ask for any clarification after the Speaker has given a ruling. This sort

of discussion amounts to disputing the ruling given by the Chair. I raised the point initially to know whether any mention of Swatantra Party can be made but actually my friend Sri B. L. Narayanaswamy later raised a point of order. A categorical ruling has been given by the Chair. Is it open to any member to repeat or dispute the decision of the Chair?

Mr. SPEAKER.—I have observed the procedure followed in the House of Commons. On a certain occasion I was also present and at that time aruling was given by the Chair. It was of course to a certain extent discussed by the members bringing to the notice of the Hon'ble Speaker certain matters. It is not wrong to bring to the notice of the Speaker certain matters which he may not actually know so that he may judge again in view of the matters that are brought to his notice. If he judges that his ruling is not correct he has to revise it. In that way it is not necessary for the Hon'ble Members to say that my ruling is being challenged. I am sure that I am not going to allow it. If he says that the Swatantra Party is represented in this House I am quite ignorant of that position. I know there are Swatantra members but I do not know whether they belong to Swatantra Party. If the Hon'ble member says that there are Swatantra people in this House I am not going to take any decision on that. I hope that this will be the correct attitude of the members and they will not rake up the matter further.

Sri Y. VEERAPPA.—I want to know whether this party under reference has been politically recognised and has it been communicated to the Chair.

Mr. SPEAKER.—I have said it already. But, I may add that in the P.S.P. there are Swatantra people.

(*Laughter*)

ಶ್ರೀ ರಾಮಕೃಷ್ಣ ಹೆಗ್ಗಡೆ.—ಸ್ವಾಮೀ, ನಾನು ಅಧ್ಯಕ್ಷರ ರೂಲಿಂಗಿಗೆ ಬದ್ಧನಾಗಿ ನಡೆದುಕೊಳ್ಳುತ್ತೇನೆ. ನಾನು ಏನು ಹೇಳಲಿಕ್ಕೆ ಹೊರಟಿದ್ದು ಏನೆಂದರೆ ಯಾವುದೇ ಒಂದು ಪಕ್ಷದವರಿಂದ ಈ ಸಭೆಗೆ ಚುನಾಯಿಸಿಕೊಂಡು ಬರಬಹುದು. ಆದರೆ ಅಫೀಸರುಗಳು ಇಲ್ಲಿ ಬರುವುದಕ್ಕೆ ಅಧಿಕಾರವಿಲ್ಲ. ಆದ್ದರಿಂದ ಸ್ವತಂತ್ರ ಪಾರ್ಟಿ ಎಂದು ಹೇಳುವುದು........

ಅಧ್ಯಕ್ಷರು.—ಸ್ವತಂತ್ರಪಾರ್ಟಿ ವಿಷಯವನ್ನು ಬಿಟ್ಟು ಹೇಳಿ.

ಶ್ರೀ ರಾಮಕೃಷ್ಣ ಹೆಗ್ಗಡೆ.—ಸ್ವಾಮೀ ಯಾವುದೇ ಒಂದು ರಾಜಕೀಯ ಪಕ್ಷಕ್ಕೆ ದೇಶದಲ್ಲಿ ಯಾವುದೇ ಶಾಸನ ಸಭೆಗಾಗಲಿ, ಪಾರ್ಲಿಮೆಂಟಿಗಾಗಲಿ........

Sri V. S. PATIL (Belgaum).—I want to know from the Hon'ble Member Sri Ramakrishna Hegde one point. He was telling that so far as this Bill is concerned all other parties have accepted the principle that there should be land reforms except the Swatantra Party. Does that not mean that he is criticising the Swatantra Party?

Mr. SPEAKER.—It does amount to criticism of the Swatantra Party.

ಶ್ರೀ ರಾಮಕೃಷ್ಣ ಹೆಗ್ಗಡೆ.—ನನ್ನ ಅಭಿಪ್ರಾಯ ಯಾವುದೇ ಒಂದು ರಾಜಕೀಯ ಪಕ್ಷ, ತನ್ನ ತತ್ವಗಳನ್ನು ಜನತೆಯ ಮುಂದೆ ಇಟ್ಟು ಅದರ ಆಧಾರದಮೇಲೆ ಯಾವುದೇ ಶಾಸನ ಸಭೆಗೆ ಬರುವುದಕ್ಕೆ ಅಧಿಕಾರವಿದೆ. ಇಲ್ಲಿಯೂ ಕೂಡ ಅವರಿಗೆ ಆ ರೀತಿಯ ಬಲವಿದ್ದರೆ, ಮೆಂಬರುಗಳು ಇದ್ದರೆ ಅವರೂ ಬರಬಹುದು. ಅದಕ್ಕೆ ನನ್ನ ಒಪ್ಪಿಗೆ.........

Sri J.B.MALLARADHYA.—When the ex-ministers of his own party opposed the Bill he does notrefer to it. He has not got the courage to criticise them.

ಶ್ರೀ ರಾಮಕೃಷ್ಣ ಹೆಗ್ಗಡೆ.—ಶ್ರೀ ಮಲ್ಲಾರಾಧ್ಯರ ವಿಷಯದಲ್ಲಿ ನನಗೆ ತುಂಬಾ ಗೌರವವಾದ ಅಭಿಪ್ರಾಯ ವಿದೆ. ಅವರು ಏನು ಹೇಳಿದರೋ ಅದಕ್ಕೆ ತುಂಬ ಬೆಲೆ ಕೊಡುತ್ತೇನೆ ನಾನು ಹೇಳುತ್ತಿರುವುದನ್ನು ಸ್ವಲ್ಪ ಶಾಂತಮನಸ್ಕರಾಗಿ ಕೇಳಬೇಕೆಂದು ಕೋರುತ್ತೇನೆ ಆಮೇಲೆ ಅವರು ಉತ್ತರ ಕೊಡುವುದಾದರೆ ಕೊಡಲಿ. ನಾನು ಏನು ಹೇಳುತ್ತಿದ್ದೆ ಎಂದರೆ, ದೇಶದಲ್ಲಿ ಕೆಲವೊಂದು ರಾಜಕೀಯ ಪಕ್ಷವು ಈ ಭೂಸುಧಾರಣೆಯನ್ನು ವಿರೋಧಿಸುತ್ತದೆ. ಆ ಪಕ್ಷದ ಪರವಾಗಿ ಈ ಸಭೆಯಲ್ಲಿ ಇಷ್ಟೊಂದು ದೊಡ್ಡ ಸಂಖ್ಯೆಯಲ್ಲಿ ವಕೀಲರುಗಳು ಸಿಕ್ಕಿರುವುದು ನನಗೆ ಆಶ್ಚರ್ಯವಾಗಿದೆ. ಅದು ಹೇಗಾದರೂ ಇರಲಿ.

Sri J. B. MALLARADHYA.—My friend Sri Ramakrishna Hegde's remarks amounts to insinuation. If anybody has joined the Swatantra Party in large numbers today it is the Congress Party and not any other political party. He is trying to circumvent the ruling of the Chair and takes away the spirit of the ruling.

Mr. SPEAKER.—I do not feel that the spirit of the ruling has been taken away because my ruling is that they should not criticise the party which is not represented here. He may differ from the principles of the party. Without naming the party he may say that he differs. But the

(MR. SPEAKER)

real point is about the advocates of that party in this House. I only say that if the Hon'ble Member is not an advocate he need not be heard . . . . .

Sri J. B. MALLARADHYA.—It is an insinuation that there are members in this House who advocate that . . . .

ಶ್ರೀ ರಾಮಕೃಷ್ಣ ಹೆಗ್ಗಡೆ.—ಕುಂಬಳಕಾಯಿ ಕಳ್ಳ ಅಂದರೆ ಹೆಗಲು ಒರಸಿಕೊಂಡರಂತೆ.

ಶ್ರೀ ಜೆ. ಬಿ. ಮಲ್ಲಾರಾಧ್ಯ.—ಕಳ್ಳತನ ಆ ಕಡೆ ಇರುವಾಗ ಕುಂಬಳಕಾಯಿ ಎಲ್ಲಿದೆ? This makes matters worse. If the Hon'ble Speaker allows this kind of making insinuation and once again he persists, he cannot be discourteous to the Members of this House. He must be asked to be a little more polite. Even after having been a Deputy Minister for a long time and a Member of the Congress Party, if he has not learned good manners, it is a matter for regret.

Mr. SPEAKER.—I can only say one thing. I can say whether a particular thing is parliamentary or unparliamentary and I do not see anything unparliamentary. If there is anything which makes the other party feel touchy about it, I can only request the Hon'ble Member to avoid it as far as possible. That is the only thing I can do.

Sri M. RAMAPPA (Harihar).—I want to know whether under our Rules, it is permitted for a Member of this House to critise the other parties.

Mr. SPEAKER.—I have already given a ruling. There is no further question. In such matters, we ought to enjoy the joke and humour rather than feel touchy and get upset about it. It is said in a lighter vein. I make an appeal to both parties because I belong to the whole House—I make an appeal to both sides to enjoy the joke. One member on one side of the House may say to the other member of the House that he is lacking in manners. That is also a joke. But when a third Party is involved, I come in.

ಶ್ರೀ ರಾಮಕೃಷ್ಣ ಹೆಗ್ಗಡೆ.—ಕೆಲವು ಜನ ಸ್ನೇಹಿತರು ಇಷ್ಟೊಂದು ವಿರೋಧ ವ ಡಿದ ಅರ್ಥ ನನಗೆ ಗೊತ್ತಾಗಲಿಲ್ಲ. ಈ ಸಭೆಯಲ್ಲಿ ಅನೇಕ ಮಹತ್ವವಾದ ವಿಷಯಗಳು ಚರ್ಚೆಯಾಗುತ್ತವೆ. ಗಂಭೀರ ಪರಿಸ್ಥಿತಿ ಉತ್ಪನ್ನವಾಗಬಹುದು. ಆದರೆ ಅಲ್ಲಲ್ಲಿ ಕೆಲವು ಮಟ್ಟಿನ ಹ್ಯೂಮರ್ ಮತ್ತು ವಿಟ್ಸ್ ಬರಬೇಕಾದುದು ಅಗತ್ಯ. ಯಾವ ಹ್ಯೂಮರ್‌ನಲ್ಲಿ ವ್ಯಾಲ್ಯೂ ಇಲ್ಲವೋ, ಅದನ್ನು ಅದೇ ದೃಷ್ಟಿಯಿಂದ ಸ್ವೀಕಾರ ಮಾಡಬೇಕು. ಅದನ್ನು ಬಿಟ್ಟು ಶ್ರೀಮಾನ್ ಮಲ್ಲಾರಾಧ್ಯರು . . . . . .

Sri J. B. MALLARADHYA.—Once again, if he refers to other parties, I am afraid I will have to buttin. I cannot allow this to go on in this House.

Sri K. PUTTASWAMY (Mysore).—On a point of order, whether it is permitted for a Member to say that he will not allow the business of the House to go on,

Sri B. K. PUTTARAMIYA.—I rise to a point of order Sir. The party in power has piloted this Bill. The Hon'ble Member Sri Hegde is the General Secretary of the Party. Whether he is opposing the Bill or supporting the Bill, I do not know. Whether the General Secretary of the Party in power which has piloted the Bill will be given an opportunity to speak on such Bills in the House of Legislature and whether such a practice exists in foreign countries visited by you, I want to know.

ಅಧ್ಯಕ್ಷರು.—ಇಂಥ point of order ನನ್ನ ಗಮನಕ್ಕೆ ಬಂದಿರಲಿಲ್ಲ ಅವರು ಆರ್ಗನೈಸೇಷನ್ ಸೆಕ್ರೆಟರಿ. ಪಾರ್ಟಿ ಸೆಕ್ರೆಟರಿಗಳು ಕೂಡ ಮಾತನಾಡಬಹುದು. ಯಾರು ಬೇಕಾದರೂ ಮಾತನಾಡಬಹುದು. ವ್ಹಿಪ್ಸ್ ಆಫ್ ದಿ ಪಾರ್ಟೀಸ್ ಮಾತನಾಡಬಾರದೆಂದಿದೆ.

12 NOON

ಶ್ರೀ ರಾಮಕೃಷ್ಣ ಹೆಗ್ಗಡೆ.—ಸ್ವಾಮಿ, ಕೆಲವು ನಿಮಿಷಗಳ ಮೊದಲು ನಾನು ಒಂದು ವಿಷಯವನ್ನು ಹೇಳುತ್ತಿದ್ದೆ. ಈ ಮಸೂದೆಯ ಮೇಲೆ ದೇಶದ ಬೇರೆ ಬೇರೆ ರಾಜಕೀಯ ಪಕ್ಷಗಳು ತಂತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದರು. ಈ ಭೂಸುಧಾರಣೆ ವಿಷಯದಲ್ಲಿ ಅವರು ಬಹಳವಾಗಿ ವಿರೋಧವಾಗಿದ್ದಾರೆ. ರಾಜಕೀಯ ಪಕ್ಷವನ್ನು ಸ್ಥಾಪನೆ ಮಾಡಿದವರಾಗಲಿ, ಅದಕ್ಕೆ ಸೇರಿದವರೇ ಆಗಲಿ ಮಾತನಾಡಿದುದನ್ನು ನಾವು ನೋಡಿದರೆ ಅವರ ಉದ್ದೇಶ ಭೂಸುಧಾರಣೆಯನ್ನು ವಿರೋಧಿಸುವಂತಹ ಉದ್ದೇಶ. ಅದರ ಬಗೆ ವಿಶೇಷವಾಗಿ ಇಲ್ಲ ಪ್ರಸ್ತಾಪಿಸಿ ಕೆಲವು ಜನರ ಸೆಂಟಿಮೆಂಟುಗಳನ್ನು ಘಾಸಿಗೊಳಿಸುವುದಕ್ಕೆ ಬಯಸುವುದಿಲ್ಲ. ನಮ್ಮ ಕಾಂಗ್ರೆಸ್ ಸಂಸ್ಥೆ ಅಥವಾ ಕಾಂಗ್ರೆಸ್ ಪಾರ್ಟಿ ಈ ವಿಷಯದಲ್ಲಿ ತಾಳಿದಂಥ ಧೋರಣೆ ಏನು ಅದು ಹೇಗೆ ಬೆಳೆದು ಬಂತು ಎಂಬ ಬಗ್ಗೆ ಒಂದೆರಡು ಮಾತುಗಳನ್ನು ನಾನು ಇಲ್ಲಿ ಹೇಳಬೇಕಾಗಿದೆ. ಮೈಸೂರು ಪ್ರದೇಶದ ಕಾಂಗ್ರೆಸ್ ಕಮಿಟಿ ಸೆಕ್ರೆಟರಿಯಾಗಿ ನಾನು ಹೇಳುತ್ತಿಲ್ಲ. ನಾನೂ ಒಬ್ಬ ವಿಧಾನಸಭಾ ಸದಸ್ಯನಾಗಿ ಹೇಳುತ್ತಿದ್ದೇನೆ.

ಶ್ರೀ ಬಿ. ಕೆ. ಪುಟ್ಟರಾಮಯ್ಯ.—ಹಾಗಾದರೆ ಸರ್ಕಾರ ನಿಮ್ಮ ಪಾಲಿಸಿಗೆ ವಿರೋಧವಾಗಿದೆ ಎಂದು ತಾವು ಹೇಳುವುದು ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಈ ಭೂಸುಧಾರಣೆ ವಿಷಯದಲ್ಲಿ ನಮ್ಮದು ಒಂದು ವಿಶಿಷ್ಟವಾದ ನೀತಿ ಇದೆ. ಒಂದು ವಿಶಿಷ್ಟವಾದ ತತ್ವಕ್ಕೆ ಕಂಕಣಬದ್ಧರಾಗಿದ್ದೇವೆಂದು ಶ್ರೀಮಾನ್ ಕಡಿದಾಳ್ ಮಂಜಪ್ಪನವರು ತಮ್ಮ ಪೀಠಿಕಾ ಭಾಷಣದಲ್ಲಿ ಹೇಳಿದರು. ಸೀಲಿಂಗ್ ವಿಷಯದಲ್ಲಾಗಲಿ ಅಥವಾ ರೆಂಟ್ ಎಷ್ಟಿರಬೇಕೆಂಬ ವಿಷಯದಲ್ಲಾಗಲಿ ಮುಂದಿನ ಟೆನೆನ್ಸಿ ಪದ್ಧತಿ ಯಾವ ರೀತಿ ಇರಬೇಕೆಂಬ ವಿಷಯದಲ್ಲಾಗಲಿ ನಮ್ಮ ಮನಸ್ಸಿನಲ್ಲಿ ಯಾವ ರೀತಿ ಸಂದೇಹವೂ ಇಲ್ಲ. ಅದರ ಬಗ್ಗೆ ನಾವು ಒಂದು ನಿರ್ದಿಷ್ಟವಾದ ನಿಶ್ಚಯವನ್ನು ಒಂದು ಧೋರಣೆಯನ್ನು, ಒಂದು ಪಾಲಸಿಯನ್ನು ತಾಳಿದ್ದೇವೆ. ಈಗ ಈ ಸಭೆಯ ಮುಂದಿರುವ ಕರಡು ಮಸೂದೆಯ ವಿಷಯದಲ್ಲಿ ನಾನು ನಾಲ್ಕಾರು ಮಾತುಗಳನ್ನು ಹೇಳುವುದಕ್ಕೆ ಬಯಸುತ್ತೇನೆ. ಈ ಮಸೂದೆಯಿಂದ ರೈತರು ಗಾಬರಿಪಡಬೇಕಾದಂಥ, ಕಳವಳಪಡಬೇಕಾದಂಥ ಅಗತ್ಯವಿಲ್ಲ. ಸುಮ್ಮನೆ ಏನೋ ಒಂದು ಹೊಸ ಹೊಸ ಕಾಯಿದೆ ಬರುತ್ತದೆ, ಅದರಿಂದ ತಮ್ಮ ಜಮೀನು ಹೋಗುತ್ತವೆ ಎಂಬ ಭ್ರಮೆ ನಮ್ಮಲ್ಲಿ ಅನೇಕ ಜನರಿಗೆ ಆವರಿಸಿದೆ. ಅದು ಕೇವಲ ಭ್ರಮೆಯೇ ಹೊರತು ಈಗಿರುವ ನಿಜವಾದ ರೂಪದಲ್ಲಿ ಇದು ಕಾಯಿದೆಯಾದರೆ ಅವರಿಗೆ ಯಾವ ರೀತಿ ಪೆಟ್ಟು ಬರುವುದಿಲ್ಲ. ಅನೇಕ ಜನ ಸಣ್ಣ ಪುಟ್ಟ ಭೂಮಾಲೀಕರಿಗೆ ವಿಶೇಷವಾಗಿ ಲಾಭವಾಗುತ್ತದೆಂದು ನಾನು ತಿಳಿದಿದ್ದೇನೆ.

Sri Kadidal MANJAPPA.—May I know from the Hon'ble Member in what respects the Bill deviates from the principles enunciated by the Planning Commission and which have been accepted by the Ruling Party?

ಶ್ರೀ ರಾಮಕೃಷ್ಣ ಹೆಗ್ಗಡೆ.—ನಾನು ಅದರ ವಿಷಯವಾಗಿ ಮಾತನಾಡುತ್ತೇನೆ. ಮೊದಲನೆಯದಾಗಿ ಈ ಭೂಸುಧಾರಣೆ ವಿಚಾರದಲ್ಲಿ ಬಹಳ ದೋಷಗಳಿವೆ. ಬೇರೆ ಬೇರೆ ರಾಜ್ಯಗಳಲ್ಲಿ ಬೇರೆ ಬೇರೆ ಸ್ವರೂಪದಲ್ಲಿ ಈಗಾಗಲೇ ಇದು ಕಾಯಿದೆಯಾಗಿದೆ. ಅದೇ ಕಾಯಿದೆ ಬೊಂಬಾಯಿನಲ್ಲಿ 1939ನೆಯ ಇಸವಿಯಲ್ಲಿ ಬಂತು ಆದರೆ ಹಳೆಯ ಮೈಸೂರಿನಲ್ಲಿ 1952ನೆಯ ಇಸವಿಯೊಳಗೆ ಜಾರಿಗೆ ಬಂದು ಈಚೆಗೆ ಐದು ತರಹ ಭೂಸುಧಾರಣೆಗಳು ಆದುವು. 1954ನಲ್ಲಿ ತಕ್ಕಮಟ್ಟಿನ ಭೂಸುಧಾರಣೆ ಆಯಿತು. ಆದುದರಿಂದ ಈ ಕಳವಳ ಏನು ನಮ್ಮ ಮನಸ್ಸಿನಲ್ಲಿದೆ, ಅದು ಕೇವಲ ಮಾನಸಿಕ ಕಳವಳ. ನಿಜವಾದ ಪರಿಣಾಮ ಅವರ ಜಮೀನಿನ ಬಗ್ಗೆ ಆಗಿರುವುದಿಲ್ಲ. ಅದನ್ನು ಏಕೆ ಹೇಳುತ್ತೇನೆಂದರೆ, ನನಗೆ ತಿಳಿದ ಮಟ್ಟಿಗೆ 20-25 ವರ್ಷಗಳ ಅವಧಿಯಲ್ಲಿ ಈ ಭೂಸುಧಾರಣೆಯ ವಿಚಾರವಾಗಿ ನಮ್ಮ ದೇಶದಲ್ಲಿ ಪ್ರಚಾರವಾದಾಗ್ಗೆ ಇಂತಹ ಒಂದು ಪರಿಸ್ಥಿತಿ ಮುಂದೆ ಬರುತ್ತದೆ ಎಂಬುದನ್ನು ತಿಳಿದುಕೊಂಡು ಅನೇಕ ಜನ ಜಮೀನ್ದಾರರು ಅನೇಕ ವಿಧದಿಂದ ರೈತರಿಂದ ಜಮೀನನ್ನು ಕಸಿದುಕೊಂಡಿದ್ದಾರೆ. ಶಿವಮೊಗ್ಗಾ ಜಿಲ್ಲೆಯ ಸಾಗರ, ಸೊರಬ ತಾಲ್ಲೂಕುಗಳಲ್ಲಿ ಯಾವ ಜಮೀನಿನಿಂದ ರೈತರನ್ನು ಹಿಂದಟ್ಟಿದ್ದರೋ ಅದನ್ನು ಈ ಕಾಯಿದೆಯಿಂದ ಇವತ್ತಿನ ದಿವಸ ಸುಧಾರಣೆ ಮಾಡದೆ ಬರಬೇಕಾದ ಪ್ರಸಂಗ ಬಾರದೇ ಇರಬಹುದು. ಮುಂಬೈ ರಾಜ್ಯದಲ್ಲಿ 1955ನೆಯ ಇಸವಿಯಲ್ಲಿ ಈ ಭೂಸುಧಾರಣೆ ಒಂದು ರೀತಿಯ ಕಾಯಿದೆಯಾಗಿ 1956ನೆಯ ಇಸವಿಯಲ್ಲಿ, ಒಂದು ತಿದ್ದುಪಡಿ ಜಾರಿಯಾಗುತ್ತದೆಂದು ಹೇಳಿದ ಕೂಡಲೆ ಸಾವಿರಾರು ಜನ ಭೂಮಾಲೀಕರು ಜಮೀನುಗಳು ಮುಂದೆ ಏನಾಗುತ್ತವೋ ಬೇರೆಯವರಿಗೆ ಎಲ್ಲಿ ಹೋಗುತ್ತವೋ ಎಂಬ ಹೆದರಿಕೆಯಿಂದ ಅರ್ಜಿ ಹಾಕಿದ್ದಾರೆ. ಅನೇಕ ಜನ ರೈತರನ್ನು ಹೆದರಿಸಿ ಆಮಿಷ ತೋರಿಸಿ ಅವರ ಜಮೀನನ್ನು ಪಡೆದಿದ್ದಾರೆ ಎಂಬ ಮಾತನ್ನು ಶ್ರೀ ಎಂ. ಪಿ. ಪಾಟೀಲ್ ಅವರು ಹೇಳಿದರು. ಅನೇಕ ಜನ ಅದನ್ನು ಒಪ್ಪಲಿಲ್ಲ ನಮ್ಮ ಜಿಲ್ಲೆಯಲ್ಲಿ ಆಗಿರುವುದನ್ನು ನೋಡಿದರೆ ಅದನ್ನು ಈ ಕಾಯಿದೆಯಿಂದ ಸಾಧಿಸುವುದಕ್ಕೆ ಆಗುವುದಿಲ್ಲ. 20 ವರ್ಷಗಳಿಂದ ಏನು ಮಾಡುತ್ತಿದ್ದೀರಿ ಎಂದು ಅನೇಕರು ಹೇಳುತ್ತಿದ್ದಾರೆ. ಮದ್ರಾಸಿನಲ್ಲಿ ಸೆಕ್ಯೂರಿಟಿ ಆಫ್ ಟೆನ್ಯೂರ್, ಫಿಕ್ಸಿಟಿ ಆಫ್ ರೆಂಟ್ ಆಗಿದೆ. ಇನ್ನೊಂದು ವಿಷಯ. ಈ ಕಾಯಿದೆ ಇವತ್ತು ಪಾಸ್ ಮಾಡುತ್ತೇವೆಂದು ಇಟ್ಟುಕೊಳ್ಳೋಣ. ನಮ್ಮ ಕಾಂಗ್ರೆಸ್ ಸಂಸ್ಥೆಯ ಆದೇಶದ ಪ್ರಕಾರ ಈ ವರ್ಷದಲ್ಲಿ ಕೇಂದ್ರ ಸರ್ಕಾರದ ಮಂಜೂರಾತಿಯ ಮೇಲೆ ಈ ಕಾಯಿದೆ ಜಾರಿಗೆ ಬರಬೇಕು. ಈಗ ಒಂದು ಕಾಯಿದೆ ಆಗುತ್ತದೆಂದು ಇಟ್ಟುಕೊಂಡರೂ ಈ ಮಸೂದೆಯ ಪ್ರಕಾರ ಏನಾದರೂ ಒಂದು ಕಾಯಿದೆ ಸಂಪೂರ್ಣವಾಗಿ ಜಾರಿಗೆ ಬರಬೇಕಾದರೆ ಇನ್ನೂ ಐದು ವರ್ಷಗಳ ಕಾಲ ಹಿಡಿಯುವುದು. ಆ ಮೇಲೆ ಒಂದು ಲ್ಯಾಂಡ್ ಕಮಿಷನ್ ಆಗಬೇಕು. ಲ್ಯಾಂಡ್ ಕಮಿಷನ್ ಆದ ಮೇಲೆ ಅವರು ಜಮೀನನ್ನು ವರ್ಗೀಕರಣ ಮಾಡಬೇಕು. ವರ್ಗೀಕರಣ ಮಾಡಿದ ನಂತರ ವ್ಯವಸಾಯ ವರ್ಗದವರಿಗೆ ಒಂದು ಪರಿಮಿತಿಯನ್ನು ಕನಿಷ್ಠ ಪಕ್ಷ ಐದು ವರ್ಷಗಳವರೆಗೆ ಇದೇ ರೀತಿ ಕೊಡಬೇಕೆಂದಿದೆ. ವೈಯಕ್ತಿಕವಾಗಿ ಇನ್ನೂ ಕೆಲವು ಕಾರಣಗಳನ್ನು ಹೇಳುತ್ತೇನೆ. ಈ ಮಸೂದೆಯಿಂದ ಜಮೀನ್ದಾರ ಬಂಧುಗಳಿಗೆ ಯಾವ ರೀತಿಯಲ್ಲೂ ನಷ್ಟವಾಗುವುದಿಲ್ಲವೆಂದು ಅವರು ಮನಸ್ಸಿನಲ್ಲಿ ನಿರ್ಧಾರ ಮಾಡಿಕೊಳ್ಳಬಹುದು. ಇದರಲ್ಲಿ ತಿದ್ದುಪಡಿಯಾದರೆ ಮಾತ್ರ ಏನಾದರೂ ಲಾಭ ರೈತರಿಗೆ ದೊರೆಯಬಹುದು. ಇನ್ನು ಮತ್ತೊಂದು ಉದಾಹರಣೆಯನ್ನು ಕೊಡಲು ನಾನು ಬಯಸುತ್ತೇನೆ. ಈ ಕಾಯಿದೆ ಮಾಡಬೇಕಾದರೆ ನಾವು ಇದರಲ್ಲಿ ಅನೇಕ ವಿಧವಾದಂತಹ ರೀತಿಯಲ್ಲಿ ವ್ಯವಸಾಯದ ಬಗ್ಗೆ ಜಮೀನ್ದಾರರುಗಳಿಗೆ ವಿನಾಯಿತಿ ಕೊಟ್ಟಿದ್ದೇವೆ. ಇದು ಕಾಫಿ ತೋಟಕ್ಕೆ ಅನ್ವಯಿಸುವುದಿಲ್ಲ, ತೆಂಗಿನ ತೋಟಕ್ಕೆ ಅನ್ವಯಿಸುವುದಿಲ್ಲ, ಅಡಿಕೆ ತೋಟಕ್ಕೆ ಅನ್ವಯಿಸುವುದಿಲ್ಲ, ರಬ್ಬರ್, ಏಲಕ್ಕಿ, ಪೆಪ್ಪರ್ ತೋಟಗಳಿಗೆ ಅನ್ವಯಿಸುವುದಿಲ್ಲ ಮತ್ತು ಇನ್ನು ಯಾವುದೇ ರೀತಿಯಲ್ಲಿ ಎಲ್ಲಾದರೂ ಎಫಿಷಿಯೆಂಟ್ ಮ್ಯಾನೇಜ್ಡ್ ಫಾರಂ ಇದ್ದರೆ ಅಂಥಾದ್ದಕ್ಕೂ ಅನ್ವಯಿಸುವುದಿಲ್ಲವೆಂದು ಹೇಳಿದೆ. ಇದರಿಂದ ಅರ್ಧ ಭಾಗದವರಿಗೇ ಈ ಕಾಯಿದೆ ಅನ್ವಯಿಸುವುದಿಲ್ಲವೆಂದಾಯಿತು. ಇನ್ನೂ ಇದರೊಳಗೆ ಮತ್ತೊಂದು ಕಲಂ ಇದೆ. ಕಳೆದ 12 ವರ್ಷಗಳಿಂದ ಇತ್ತೀಚೆಗೆ ಯಾರನ್ನಾದರೂ ಬಲವಂತವಾಗಿ ಮೋಸಮಾಡಿ ಅಥವಾ ಅವರಿಗೆ ದುರಾಸೆಯನ್ನು ತೋರಿಸಿ ಜಮೀನನ್ನು ಕಬ್ಜ ಬಿಟ್ಟುಕೊಂಡಿದ್ದರೂ ಅದನ್ನು ವಾಪಸ್ಸು ಕೊಡುವ ಬಗ್ಗೆ ಪ್ರಯತ್ನ ಮಾಡಬೇಕೆಂದು ಇದೆ. ಈಗ ಆರು ವರ್ಷಗಳಿಂದ ಈಚೆಗೆ ಜಮೀನನ್ನು ಕಳೆದುಕೊಂಡ ರೈತರು ಪುನಃ ಅರ್ಜಿ ಮಾಡಬಹುದು ಎಂದು ಇದೆ. ನಿಜವಾಗಿ ನಮ್ಮ ಉದ್ದೇಶ ಪ್ರಾಮಾಣಿಕವಾಗಿದ್ದರೆ ಈ ಕೆಳಗಿನ ಕಂಡೀಷನ್ ಏನು ಹಾಕಿದ್ದೀರಿ ಅದು ನಿಮ್ಮ ಉದ್ದೇಶಕ್ಕೆ ವಿರೋಧವಾಗಿದೆ. ಐದು ಆರು ವರ್ಷಗಳ ಹಿಂದೆ ಯಾವುದೇ ಒಂದು ತಪ್ಪು ಇಲ್ಲದೆ ಜಮೀನು ಯಾರು ಕಳೆದುಕೊಂಡಿ

(ಶ್ರೀ ರಾಮಕೃಷ್ಣ ಹೆಗ್ಗಡೆ)

ದ್ದಾರೋ ಅವರು ಇವೊತ್ತು ಅರ್ಜಿಹಾಕಿ, ಈ ರೀತಿ ಮೋಸಮಾಡಿದ್ದಾರೆಂದು ಕಾಯಿದೆ ಪ್ರಕಾರ ಪ್ರೂವ್ ಮಾಡಿ ಎಂದು ಹೇಳಿದರೆ ಎಷ್ಟು ಜನ ರೈತರಿಗೆ ಈ ಜಮೀನು ಸಿಕ್ಕಬಹುದು ಎಂಬುದನ್ನು ಯೋಚನೆ ಮಾಡಬೇಕು. ಆದ್ದರಿಂದ ನಾನು ಕಂದಾಯ ಮಂತ್ರಿಗಳನ್ನು ಕೇಳಿಕೊಳ್ಳುವುದು ಏನೆಂದರೆ ನಿಜವಾಗಿ ಪ್ರಾಮಾಣಿಕವಾಗಿ......

Sri Kadidal MANJAPPA.—If the Hon'ble Member yields I want to say one thing. There is a suggestion by the Land Reforms Committee that even in case of lands cultivated by landholders a exemption should be given.

ಶ್ರೀ ರಾಮಕೃಷ್ಣ ಹೆಗ್ಗಡೆ. ಮಾನ್ಯ ಕಂದಾಯ ಮಂತ್ರಿಗಳಿಗೆ ಮನಸ್ಸು ಇದ್ದರೆ ಒಪ್ಪಿಕೊಳ್ಳುತ್ತಾರೆ. ಇನ್ನು ಎರಡನೆಯದಾಗಿ ಸೀಲಿಂಗ್ ವಿಷಯ. ನಮ್ಮ ರಾಜ್ಯದಲ್ಲಿ 100 ಎಕರೆಗಳಿಗಿಂತ ಕಡಮೆ ಇರುವ ಹೋಲ್ಡಿಂಗ್ಸ್ 100ರಲ್ಲಿ 99 ಭಾಗ. ತಾವು ಹಾಕಿರುವ ಸೀಲಿಂಗ್ ಆಧಾರದ ಮೇಲೆ ಹೋಗುವುದಾದರೆ, ಕಂದಾಯ ಮಂತ್ರಿಗಳು ಕೊಟ್ಟ ಉದಾಹರಣೆಯನ್ನು ತೆಗೆದುಕೊಳ್ಳುವುದಾದರೆ, ಜಿರಾಯಿತಿ ಭೂಮಿ 180 ಎಕರೆಯಷ್ಟು ಇಟ್ಟುಕೊಳ್ಳುವ ಅವಕಾಶವಿದೆ. ಇದರಲ್ಲಿ 10 ಎಕರೆ ಸ್ವಲ್ಪ ಹೆಚ್ಚು ಕಡಮೆ ಇರಬಹುದು. ಸಾಮಾನ್ಯವಾಗಿ ನಮ್ಮ ರಾಜ್ಯದಲ್ಲಿ ಒಂದು ಕುಟುಂಬದಲ್ಲಿ ಐದು ಜನಗಳಿಗಿಂತ ಹೆಚ್ಚು ಇರುತ್ತಾರೆ.

Sri Kadidal MANJAPPA.—That income limit is proposed by the Cougress High Command itself.

ಶ್ರೀ ರಾಮಕೃಷ್ಣ ಹೆಗ್ಗಡೆ.—ಸ್ವಾಮಿ ನಾನು ವೈಯಕ್ತಿಕವಾಗಿ ರಾಮಕೃಷ್ಣ ಹೆಗ್ಗಡೆ ಶಾಸನ ಸಭಾ ಸದಸ್ಯನಾಗಿ ಮಾತನಾಡುತ್ತಿದ್ದೇನೆ. ಕಾಂಗ್ರೆಸ್ ಹೈ ಕಮ್ಯಾಂಡ್ ಮಾಡುವುದಕ್ಕಿಂತ ಹಿಂದೆ ಹೋಗಬಾರದು. ಮುಂದೆ ಹೋಗುವುದಕ್ಕೆ ಯಾವ ಅಡ್ಡಿಯೂ ಇಲ್ಲ. ಡ್ರೈಲ್ಯಾಂಡ್ಸ್ 180 ಎಕರೆಗಳಷ್ಟು ಇದ್ದರೂ ಕೂಡ ಅಷ್ಟು ಹಿಡುವಳಿ ಪರಮಾವಧಿ ಲಾಗೂ ಆಗುತ್ತದೆ. ವೆಟ್‌ಲ್ಯಾಂಡ್ಸ್ ನೋಡಿದರೂ ಕೂಡ ಒಂದು ದೊಡ್ಡ ಕುಟುಂಬಕ್ಕೆ 48 ಎಕರೆ ಸಿಕ್ಕುತ್ತದೆ. ಇಂತಹ Agriculture pattern ನೋಡಿದರೆ, ಈ ಮಸೂದೆಯಿಂದ ಸಾಮಾನ್ಯವಾಗಿ 100ಕ್ಕೆ 10ರಷ್ಟು ರೈತರಿಗೂ ಲಾಭ ಆಗುವುದಿಲ್ಲ. ಮುಖ್ಯ ಮಂತ್ರಿಗಳು ಹೇಳಿದ್ದಾರೆ, ಲ್ಯಾಂಡ್ ರಿಫಾರಮ್ಸ್ ಮಸೂದೆಯಿಂದ ನಿಜವಾಗಿಯೂ ತೊಂದರೆಗೊಳಗಾಗುವಂಥ ಜಮೀನು ಮಾಲೀಕರು 100ಕ್ಕೆ ಮೂರರಷ್ಟುಮಾತ್ರ ಇದ್ದಾರೆ ಎಂದು. ಈ ಲ್ಯಾಂಡ್ ರಿಫಾರಮ್ಸನ್ನು ಪ್ರಾಮಾಣಿಕ ದೃಷ್ಟಿಯಿಂದ ಇಂಪ್ಲಿಮೆಂಟ್‌ಮಾಡಬೇಕು ಎಂದರೆ, ನಿಜವಾಗಿಯೂ ರೈತರಿಗೆ ಸವಲತ್ತು ಆಗುವುದನ್ನು ಇದರಲ್ಲಿ ಸೇರಿಸಲೇ ಬೇಕು. ಅನೇಕ ಕಲಂಗಳು ಈ ಮಸೂದೆಯಲ್ಲಿವೆ. ಒಂದೆರಡುಮಾತ್ರ ಹೇಳಿ ಉಳಿದುವುಗಳನ್ನು ಈ ಸಭೆಗೇ ಬಿಡುತ್ತೇನೆ. ಪರ್ಸನಲ್ ಕಲ್ಟಿವೇಷನ್ ಬಗ್ಗೆ ಜಮೀನು ತೆಗೆದುಕೊಳ್ಳಬಹುದು ಎಂದು ಹೇಳಿದ್ದಾರೆ. ಅದರಂತೆ ಸೆಕ್ಷನ್ 29ರ ಪ್ರಕಾರ ಪುನಃ ಸರೆಂಡರ್‌ಮಾಡಿಕೊಳ್ಳುವುದಕ್ಕೆ ಅವಕಾಶವಿದೆ. ಸರೆಂಡರ್‌ಮಾಡಿಕೊಳ್ಳುವಂತೆ ಅವಕಾಶ ಕೊಟ್ಟರೆ, ಇನ್ನೊಂದು ವರ್ಷದೊಳಗೆ ಏನಾದರೂ ಅಲ್ಪ ಸ್ವಲ್ಪ ಜಮೀನು ರೈತರ ಹತ್ತಿರ ಇದ್ದರೆ ಅದನ್ನು ಜಮೀನ್ದಾರರು ತೆಗೆದುಕೊಳ್ಳುತ್ತಾರೆ ಎಂಬುದರಲ್ಲಿ ಯಾವ ತರಹ ಸಂದೇಹವೂ ಇಲ್ಲ. ಒಂದಲ್ಲ ಒಂದು ರೀತಿಯಿಂದ ತೆಗೆದುಕೊಳ್ಳುತ್ತಾರೆ. ಆದ್ದರಿಂದ ಒಂದು ಕೈಯಿಂದಕೊಟ್ಟು ಮತ್ತೊಂದು ಕೈಯಲ್ಲಿ ಕಿತ್ತುಕೊಳ್ಳುವ ಯಾವ ಕಲಂಗೂ ಕೂಡ ಆಸ್ಪದ ಕೊಡಬಾರದು. ನಿಜವಾಗಿ ಯಾರು ಶ್ರಮಪಡುತ್ತಾರೋ ಅವರಿಗೆ ಏನಾದರೂ ಲಾಭ ಆಗಬೇಕು, ಪ್ರಯೋಜನ ಆಗಬೇಕು ಎನ್ನುವ ಉದ್ದೇಶ ಇದ್ದರೆ ಅವರಿಗೆ ಆ ರೀತಿ ಜಮೀನ್ದಾರರು ಜಮೀನನ್ನು ತೆಗೆದುಕೊಳ್ಳದಂತೆ ಮಾಡುವುದು ಅತ್ಯಗತ್ಯ. ಆ ರೀತಿ ಮಾಡುತ್ತಾರೆ ಎಂದು ನಾನು ಆಶೆಪಡುತ್ತೇನೆ. ಈಗಾಗಲೇ ಅನೇಕ ಗಂಟೆಗಳ ಕಾಲ ಈ ವಿಚಾರದಲ್ಲಿ ವಾದ ವಿವಾದಗಳು ಆಗಿವೆ. ಆದರೂ ಈ ವಿಚಾರವಾಗಿ ಮಾತನಾಡುವುದು ಬಹಳ ಇದೆ. ಆದರೆ ತಮ್ಮ ಆಜ್ಞೆಯನ್ನು ಶಿರಸಾವಹಿಸಿ ಒಂದೇ ಒಂದು ಮಾತನ್ನು ಹೇಳಿ ಮುಗಿಸುತ್ತೇನೆ. ಅದು ಏನೆಂದರೆ ಈ ಮಸೂದೆಯ ಪ್ರಕಾರ ನಾವು ಹೋದರೆ ಲಿಟಿಗೇಷನ್ನಿಗೆ ಅವಕಾಶವಾಗುತ್ತದೆ ಎಂದು ಬಹಳ ಜನ ಅಭಿಪ್ರಾಯಪಡುತ್ತಾರೆ. ಆದ್ದರಿಂದ ಆದಷ್ಟುಮಟ್ಟಿಗೆ ಲಿಟಿಗೇಷನ್ ಕಡಮೆಮಾಡಬೇಕು. ಆದರೆ ಸಂಪೂರ್ಣವಾಗಿ ನಿಲ್ಲಿಸುವುದಕ್ಕೆ ಸಾಧ್ಯವಿಲ್ಲ. ರೈತ ಬೇಕಾದರೆ ವಕೀಲನನ್ನು ಇಟ್ಟು ಕೊಳ್ಳಬಹುದು, ಜಮೀನ್ದಾರರು ವಕೀಲನನ್ನು ಇಟ್ಟುಕೊಳ್ಳಬಹುದು ಎಂದು ಹೇಳುವುದು ಸಮರ್ಪಕವಾದ ಸೂಚನೆಯಲ್ಲ. ನನ್ನ ಸೂಚನೆ, ರೈತ ವಕೀಲನನ್ನು ಇಟ್ಟುಕೊಳ್ಳಬಹುದು ಎಂದು ಇದ್ದರೆ, ಸರ್ಕಾರದ ವಕೀಲರು ಅವರ ಪರವಾಗಿ ವಾದಿಸಬೇಕು. ಸರ್ಕಾರೀ ವಕೀಲರನ್ನೇ ಎಲ್ಲಾ ಕಡೆಗೂ ರೈತರಿಗೆ ಕೊಡಬಹುದು. ಎಂದರೆ ಮಾತ್ರ, ರೈತನಿಗೆ ತಕ್ಕಮಟ್ಟಿಗೆ ಸಹಾಯಮಾಡಿದ ಹಾಗಾಗುತ್ತದೆ. ಎರಡನೆಯದಾಗಿ ಇಂಪ್ಲಿಮೆಂಟ್ ಯಾವ ರೀತಿ ಮಾಡಬೇಕು ಎಂದು ಹೇಳುವ ಬಗ್ಗೆ ಎರಡು ತರಹ ಅಭಿಪ್ರಾಯ ಬಂತು. ರೆವೆನ್ಯೂ ಆಫೀಸರ ಮುಖಾಂತರ ಡೆಪ್ಯುಟಿ ಕಮೀಷನರಿಗೆ ಅಧಿಕಾರ ಕೊಟ್ಟುಮಾಡಬೇಕೇ ಅಥವಾ ಜುಡಿಷಿಯಲ್ ಡಿಪಾರ್ಟ್‌ಮೆಂಟಿಗೆ ಕೊಡಬೇಕೇ ಎಂಬುದು. ಜುಡಿಷಿಯರಿಗೆ ಬಿಟ್ಟರೆ ಒಂದು ತೊಂದರೆ ರೆವೆನ್ಯೂಗೆ ಬಿಟ್ಟರೆ ಮತ್ತೊಂದು ತೊಂದರೆ ಇದ್ದೇ ಇದೆ. ಜುಡಿಷಿಯಲ್ ಡಿಪಾರ್ಟ್‌ಮೆಂಟಿಗೆ ಕೊಟ್ಟರೆ ಕಾಯಿದೆ ಕಲಮು ನೋಡುತ್ತಾರೆ, ಬಾಕಿ ರೀತಿ ನ್ಯಾಚುರಲ್ ಜಸ್ಟೀಸ್‌ಗೆ ಅವಕಾಶ ಕಡಮೆ ಇರುತ್ತದೆ. ಈ ವಿಷಯವನ್ನೆಲ್ಲಾ ಪರಿಶೀಲನೆಮಾಡಿ ನೋಡಿ ಈ ವಿಷಯದಲ್ಲಿ ನಿರ್ಣಯ ತೆಗೆದುಕೊಳ್ಳಬೇಕು ಎಂದು ಹೇಳುತ್ತೇನೆ. ನಮ್ಮ ಪ್ರಾಂತದೊಳಗೆ ಐದು ಎಕರೆ ಭೂಮಿಗಿಂತ ಯಾವುದೂ ಸಣ್ಣ ಹಿಡುವಳಿ ಇರಬಾರದು. ಟೆನೆಂಟ್ ಹತ್ತಿರ ಎಷ್ಟೇ ಹೋಲ್ಡಿಂಗ್ಸ್ ಇರಲಿ ಡಿವೈಡ್‌ಮಾಡುವ ಅವಕಾಶವಿದೆ. ಐದು ಎಕರೆ ತರೀ ಜಮೀನು 25 ಎಕರೆ ಒಣ ಜಮೀನು ಕಡಿಮೆ ಆಗುವಂತೆ ಹೋಲ್ಡಿಂಗ್ ನಾವು ಮಾಡಬಾರದು. ಅದಕ್ಕೆ ಒಂದೇ ತಾರಕ ಮಂತ್ರ, ಕೋ-ಆಪರೇಟೀವ್ ಫಾರ್ಮಿಂಗ್. ನಮ್ಮ ಎದುರಿಗೆ ಇರುವುದು ಕಲೆಕ್ಟೀವ್ ಫಾರ್ಮಿಂಗ್ ಅಥವಾ ಕೋ-ಆಪರೇಟಿವ್ ಫಾರ್ಮಿಂಗ್. There is no other alternative. ನಾವು ಸಹಕಾರೀ ವ್ಯವಸಾಯವನ್ನು ಒಪ್ಪಿಕೊಳ್ಳದೆ ಇದ್ದರೆ ಕಲೆಕ್ಟೀವ್ ಫಾರಂ ಬಂದೇ ಬರುತ್ತದೆ. ಬೇಕು ಎಂದರೂ ಬರುತ್ತದೆ ಬೇಡ ಎಂದರೂ ಬರುತ್ತದೆ. ಕಾಂಗ್ರೆಸ್ ಮುಖಂಡರು ಹೇಳಿದ್ದಾರೆ, ಕೋ-ಆಪರೇಟಿವ್ ಫಾರ್ಮಿಂಗ್ ನಮ್ಮ ಉದ್ದೇಶವಾಗಿದ್ದರೂ ಕೂಡ ಅದನ್ನು ಜಬರದಸ್ತಿನಿಂದ, ಒತ್ತಾಯದಿಂದ ಎಲ್ಲರ

ಮೇಲೂ ಹೊರಿಸುವುದಿಲ್ಲ; ಅದನ್ನು ಇವೊತ್ತು ಮಾಡಬೇಕು, ನಾಳೆ ಮಾಡಬೇಕು ಅಥವಾ ಒಂದು ವರ್ಷದಲ್ಲಿ ಮಾಡಬೇಕು ಎಂಬ ಹಟ ಇಲ್ಲ. ದೇಶದ ಪರಿಸ್ಥಿತಿ ನೋಡಬೇಕು. ದೇಶದ ಜನಸಮುದಾಯ ನೋಡಬೇಕು. ದೇಶದ ಪರಿಸ್ಥಿತಿ ನೋಡಬೇಕು. ಸಣ್ಣ ಪುಟ್ಟ ಹೋಲ್ಡಿಂಗ್ ಯಾವ ರೀತಿ ಕೆಲಸಮಾಡುತ್ತವೆ. ಮಾಡಿದ ಕೆಲಸಕ್ಕೆ ಸಾಕಷ್ಟು ಪ್ರತಿಫಲ ಸಿಕ್ಕುತ್ತದೆಯೇ ಇಡೀ ವರ್ಷಕ್ಕೆ ಸಾಕಾದಷ್ಟು ಕೆಲಸ ಇದೆಯೇ, ಬೇರೆ ಬೇರೆ ಕೆಲಸಮಾಡುವುದಕ್ಕೆ ಅವಕಾಶವಿದೆಯೇ ಎಂಬುದನ್ನು ನೋಡಿಕೊಳ್ಳಬೇಕು. ಅದಷ್ಟು ಮಟ್ಟಿಗೆ ದೊಡ್ಡ ದೊಡ್ಡ ಹಿಡುವಳಿಮಾಡಬೇಕು, ಮತ್ತು ಅದನ್ನು Co-operative basis ಮೇಲೆ ಮಾಡಬೇಕು. ಇದು ನಮ್ಮ ನಿವ್ಯ ಉದ್ದೇಶವಾಗಿರಬೇಕೆಂಬ ತತ್ವವನ್ನು ಒಪ್ಪಿಕೊಳ್ಳೋಣ. ಇಲ್ಲದೆ ಹೋದರೆ ಮುಂದೆ collective farming ಮಾಡಿಸುವವರು ಬಂದರೆ ಚಾವಟಿಯಿಂದ ಹೊಡೆದು ಕೆಲಸಮಾಡಿಸುತ್ತಾರೆ. ಈಗ ಮೂರು ವರ್ಷದ ಕಾರ್ಯಕ್ರಮ ಹಾಕಿಕೊಂಡಿದ್ದಾರೆ. ಇದರಲ್ಲಿ ನಮ್ಮ ದೇಶಾದ್ಯಂತ ಸರ್ವಿಸ್ ಕೋ-ಆಪರೇಟಿವ್ಸ್ ಮಾಡಲು ಒಳ್ಳೆಯ ವಾತಾವರಣವುಂಟಾಗಬೇಕು. ಇದರ ಮುಖಾಂತರವಾಗಿ ಸಹಕಾರಿಪದ್ಧತಿಯಲ್ಲಿ ಯಾವ ಪ್ರಯೋಜನವಿದೆ ಎಂದು ತಿಳಿದು ಜನರೇ ಮುಂದೆ ಬರುತ್ತಾರೆ. ಒಂದು ಸಂಸಾರದ ಅಣ್ಣ ತಮ್ಮಂದಿರು ಕೂಡಿ ಇರುವುದಿಲ್ಲ. ಹೀಗಿರುವಾಗ ಜನರೆಲ್ಲ ಕೂಡುವುದು ಹೇಗೆ? ಎಂದು ಅನೇಕರು ಕೇಳುತ್ತಾರೆ. ಜನರೆಲ್ಲ ಕೂಡಿ ಕೆಲಸಮಾಡಬೇಕಾದರೆ ಅದು ಸಹಕಾರ ಪದ್ಧತಿ ಎನ್ನುವುದನ್ನು ನಾವು ಚೆನ್ನಾಗಿ ತಿಳಿಯಬೇಕು. ಯಾವುದಾದರೂ ಒಂದು ವ್ಯಾಪಾರ ಅಥವಾ ಉದ್ಯೋಗಮಾಡಬೇಕಾದರೆ partnership ಎಂದರೆ ಪಾಲುಗಾರರಾಗಿ ಮಾಡುತ್ತಾರೆ. ದೊಡ್ಡ ದೊಡ್ಡ ಕೆಲಸಗಳನ್ನು ಮಾಡಲು ಸೊಸೈಟಿಗಳನ್ನು ಮಾಡಿಕೊಳ್ಳುತ್ತಾರೆ. ಇದಕ್ಕೆ ಯಾರದು ಆಕ್ಷೇಪಣೆ ಇರುವುದಿಲ್ಲ. ಕೋ-ಆಪರೇಟಿವ್ ಫಾರ್ಮಿಂಗ್ ವಿಷಯ ಬಂದ ಕೂಡಲೆ ಇದರಿಂದ ದೇಶ ಹಾಳಾಗುತ್ತದೆಂದು ಹೇಳುವ ಜನರೂ ಇದ್ದಾರೆ. ಇದರಲ್ಲಿ ಯಾವುದೇ ತಥ್ಯವಿಲ್ಲ, ಹುರುಳಿಲ್ಲ. ನಮ್ಮ ದೇಶ ವ್ಯವಸಾಯದ ದೇಶ. ನಮ್ಮ ದೇಶವು ಅಭಿವೃದ್ಧಿಯಾಗಬೇಕಾದರೆ, ಅದಕ್ಕೆ ಇವೊತ್ತು ಇರುವುದು ಒಂದೇ ಒಂದು ಮಾರ್ಗ. ಅದೇ ಕೋ-ಆಪರೇಟಿವ್ ಫಾರ್ಮಿಂಗ್. ಬೇರೆ ಯಾವ ಮಾರ್ಗವೂ ಇಲ್ಲ. ಇಷ್ಟುಮಾತ್ರ ಹೇಳಿ ಈ ಮಸೂದೆಯ ಬಗ್ಗೆ ನನ್ನ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದೇನೆ.

†ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ (ತಿಪಟೂರು).—ಸ್ವಾಮಿ, ಈಗ ಅಧಿಕಾರದಲ್ಲಿರುವ ಪಕ್ಷದವರು ಕೆಲವು ವರ್ಷಗಳಿಂದ ಅಧಿಕಾರವನ್ನನುಭವಿಸಿ ಈಗ ಏಕೆ ಹೊಡೆದಾಡುತ್ತಾರೆ ಎಂದು ನನಗೆ ಸಂಕಟವಾಗಿದೆ. ಯಾವಾಗಲೂ ಅಧಿಕಾರದಲ್ಲಿರುವವರ ಮೇಲೆ ಅಪಾದನೆಯನ್ನು ಹೊರಿಸುವುದು ಪದ್ಧತಿ. ತಾವು ಇದ್ದಾಗ ಏನೂಮಾಡದೇ ಇದ್ದರೂ ಆಮೇಲೆ ತುರುಬು ನೆನೆಸಿಕೊಳ್ಳುವುದು ಎಂಬಂತೆ ಮಾಡುವುದು ಅಷ್ಟು ಚೆನ್ನಾಗಿ ಕಾಣುವುದಿಲ್ಲ. ತೊಟ್ಟಿಲು ತೂಗುವವರೂ ಇವರೇ ಮಗುವನ್ನು ಜಿಗುಟುವವರೂ ಇವರೇ ಆಗಿದ್ದಾರೆ. ಇದೆಲ್ಲ ಸರಿಯಲ್ಲ.

ಚುನಾವಣೆ ಘೋಷಣೆಯಲ್ಲಿ ಎಲ್ಲ ರಾಜಕೀಯ ಪಕ್ಷಗಳೂ ಅವರವರ ಉದ್ದೇಶಗಳನ್ನು ಹೇಳಿಕೊಂಡು ಬಂದಿದ್ದಾರೆ. ಆದರೆ ಅಧಿಕಾರದಲ್ಲಿರುವ ಪಕ್ಷ ಅವರು ಹೇಳಿದಂತೆ ಮಾಡಿಲ್ಲ. ಈ ಮಸೂದೆ ಇವೊತ್ತು ಇರುವಂಥ ಸ್ಥಿತಿಯನ್ನು ನೋಡಿದರೆ ರೈತರಿಗೆ ಸಹಾಯಮಾಡುವ ಸ್ಥಿತಿಯಲಲ್ಲವೆಂದು ಹೇಳಬೇಕಾಗಿದೆ. ಉದಾಹರಣೆಗೆ ಹೇಳುವುದಾದರೆ ಕಬ್ಬು ಹಾಕಿದವರಿಗೆ ವಿನಾಯಿತಿ, ಅಡಿಕೆ ತೋಟಗಳಿರುವವರಿಗೆ ವಿನಾಯಿತಿ, ಹಣ್ಣು ಹಂಪಲು ತೋಟಗಳನ್ನು ಹಾಕಿರುವವರಿಗೆ ವಿನಾಯಿತಿ, ಈ ರೀತಿ ಎಲ್ಲರಿಗೂ ವಿನಾಯಿತಿಯನ್ನು ಕೊಡುತ್ತಾ ಬಂದರೆ ರಾಜಕೀಯ ಪಕ್ಷದವರು ರಾಜಕೀಯದಲ್ಲಿಯೇ ನಿಂತಂತಾಗುತ್ತದೆ. ಈ ವಿನಾಯಿತಿಗಳನ್ನು ಕೊಡುವಾಗ ತಮಗೆ ಬಹಳ ಬೇಕಾದವರಿಗೆ ಕೊಡುತ್ತಾರೆ ಅಷ್ಟೆ. ಪ್ರತಿಯೊಬ್ಬರಿಗೂ ಭೂತ ದಯ ಪಶ್ಚಾತ್ತಾಪವಿರಬೇಕು. ಯಾರು ಜಮೀನನ್ನು ಉಳುತ್ತಾರೋ ಅವರ ಪಕ್ಷವನ್ನು ವಹಿಸಿ ಯಾವ ಸದಸ್ಯರೂ ಹೇಳಿಲ್ಲ. ಆದರೆ ಜಮೀನ್ದಾರರಿಗೆ ಏನು ತೊಂದರೆಯಾಗಿದೆ, ಎಂಬುದನ್ನು ಚೆನ್ನಾಗಿ ಹೇಳಿದ್ದಾರೆ. ಜಮೀನು ಮಾಡುವವನು ಆಶಾದಾಯಕವಾಗಿ ಬಾಳಬೇಕಾಗಿದೆ, ಅವನೂ ಇತರರಂತೆ ಸುಖವಾಗಿರಬೇಕು ಎನ್ನುವ ದೃಷ್ಟಿ ಇರಬೇಕು ಇವೊತ್ತು ಜಮೀನುಮಾಡುವ ಮನುಷ್ಯ ಒಂದು ಮೂಕ ಪ್ರಾಣಿಯಂತೆ ಇದ್ದಾನೆ. ಅವನು ಎರಡು ಕಾಲಿನ ಪ್ರಾಣಿಯೆಂದು ಭಾವಿಸಿರುವಂತಿದೆ. ಭೂಮಿಯನ್ನು ಉಳುವಂಥ ಜನರನ್ನು ಸರ್ಕಾರದವರು ದನಗಳ ಪಾಲಿಗೆ ಸೇರಿಸಿದ್ದಾರೆ.

Sri Kadidal MANJAPPA.—I refute that statement. The ryot is more honest and dignified than some other sections of the people.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—Dignified person, ಒಳ್ಳೆಯ ಮನುಷ್ಯ ಎಂದರೆ 'ಸಾದೆತ್ತಿಗೆ ಎರಡು ಹೇರು ಜಾಸ್ತಿ' ಎಂಬಂತಾಗಿದೆ. ಈ ಜನರಿಗೆ ಕಷ್ಟ ಹೆಚ್ಚಾಗಿದೆ. ಅವರು ಯಾರಲ್ಲಿಯೂ ಹೇಳಿಕೊಳ್ಳುವಂತಿಲ್ಲ. ಫ್ಯಾಕ್ಟರಿಗಳಲ್ಲಿ ಮತ್ತು ದೊಡ್ಡ ದೊಡ್ಡ ಕಾರ್ಖಾನೆಗಳಲ್ಲಿ ಆದರೆ ಕಮ್ಯುನಿಸ್ಟರು ಹೋಗಿ ಅಲ್ಲಿಯ ಕೆಲಸಗಾರರೊಂದಿಗೆ ಸೇರಿ ನಮಗೆ ಕೂಲಿ ಜಾಸ್ತಿ ಕೊಡುವುದಿಲ್ಲವೇ ಎಂದು ಧಾಳಿಮಾಡಿಸುತ್ತಾರೆ. ಆದರೆ ಮೂಕ ಪ್ರಾಣಿಗಳಂತೆ ಹಗಲಿರುಳೂ ದುಡಿದರೂ ಹೊಟ್ಟೆಗಿದ್ದರೆ ಬಟ್ಟೆಗಿಲ್ಲ, ಬಟ್ಟೆಗಿದ್ದರೆ ಹೊಟ್ಟೆಗಿಲ್ಲ ಎನ್ನುವ ಸ್ಥಿತಿಯಲ್ಲಿ ರೈತರಿದ್ದಾರೆ. ಇವರುಗಳೇನಾದರೂ ಒಂದು ಅರ್ಜಿಯನ್ನು ಬರಿಸಬೇಕಾದರೆ ಲಾಯರ ಹತ್ತಿರ ಹೋಗಿ ಗಂಭೀರವಾಗಿ ಅವರಿಗೆ ಏನಾದರೂ ಕೊಟ್ಟು ಅರ್ಜಿ ಬರೆಸಬೇಕು. ಇಂಥವರನ್ನು ವಿದ್ಯಾವಂತರನ್ನಾಗಿಮಾಡಿ ಅವರಿಗೆ ವಿವೇಕವುಂಟಾಗುವಂತೆಮಾಡಬೇಕು. ನಮ್ಮ ಮುಂದೆ ಇರುವ ಮಸೂದೆಯ ಪ್ರಕಾರ ಯಾರಿಗೂ ಮೂರು ಕಾಸಿನ ಜಮೀನು ಬರುವುದಿಲ್ಲ. ಅನೇಕ ಸದಸ್ಯರು ಇದು ಪ್ರಗತಿದಾಯಕವಾಗಿಲ್ಲವೆಂದು ಹೇಳಿದ್ದಾರೆ.

ಕೇಂದ್ರಸರ್ಕಾರದಿಂದ ನಾಲ್ಕಾರು ಹತ್ತಾರು ಬಾಬುಗಳಿಗೆ ಸಹಾಯಾರ್ಥ ಹಣ ಬರುತ್ತಿದೆ. ಇದರಲ್ಲಿ ಸಣ್ಣ ಪುಟ್ಟ ಕೈಗಾರಿಕೆಗಳಿಗೆ ಏನಾದರೂ ಸಹಾಯ ಮಾಡಿದ್ದೀರಾ? ಭೂಸಮಸ್ಯೆಯ ವಿಚಾರದಲ್ಲಿ ಪರಿಹಾರವನ್ನು ಸೂಚಿಸಿರುವಂತೆ ಪಟ್ಟಣವಾಸಿಗಳ ಆದಾಯದ ಮೇಲೆ ಮಿತಿಯನ್ನು ಹಾಕಿದರೆ ಅವರು ನಿಮ್ಮ ಮೇಲೆ ಬಿದ್ದು ಮಂತ್ರಿಮಂಡಲವನ್ನು ಉರುಳಿಸಿ ಇನ್ನೊಂದು ಮಂತ್ರಿಮಂಡಲ ಬರುವಂತೆ ಏನು ಪ್ರಭಾವ ಬೀರುತ್ತಾರೋ ಎನ್ನುವ ಸ್ಥಿತಿಯಲ್ಲಿದ್ದು ಹೆದರಿಕೊಂಡಿದ್ದೀರಿ. ಎಲ್ಲ ಕ್ಷೇತ್ರಗಳಲ್ಲೂ ಒಂದೇ ಸಲ ಆದಾಯದ ಮೇಲೆ ಮಿತಿಯನ್ನು ಹಾಕಿ, ಧೈರ್ಯವಾಗಿ ತಾವು ಜಾರಿಗೆ ತನ್ನಿ. ಈಗಿನ ಕಾಲದಲ್ಲಿ ಮಂತ್ರಿಮಂಡಲ ಹೋಗುವುದೂ ಬರುವುದೂ ಸರ್ವಸಾಮಾನ್ಯವಾಗಿದೆ. ಆದುದರಿಂದ ನೀವು ಇದನ್ನು ಇತರ ಕ್ಷೇತ್ರಗಳಿಗೂ ಅನ್ವಯಿ

(ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ)

ಸುವಂತೆ ತಂದರೆ ನಿಜವಾಗಿಯೂ ನಮ್ಮ ಇಂಡಿಯಾ ದೇಶದಲ್ಲ ಮಾತ್ರವಲ್ಲ ಪ್ರಪಂಚದಲ್ಲಿಯೇ ಮೈಸೂರು ಮಾದರಿ ಸಂಸ್ಥಾನವೆಂಬ ಹೆಸರನ್ನು ಪಡೆದು ಇಂಥವರ ಕಾಲದಲ್ಲಿ ಇಂಥ ಕಾರ್ಯವಾಯಿತು ಎಂಬ ಹೆಸರು ನಿಮಗೂ ಬರುತ್ತದೆ. ಇಂಥ ಒಂದು ಕಾನೂನನ್ನು ನೀವು ಧೈರ್ಯವಾಗಿ ಜಾರಿಗೆ ತನ್ನಿ ಎಂದು ಹೇಳುತ್ತೇನೆ.

ಎರಡನೆಯದಾಗಿ ಈ ಮಸೂದೆಯ ಮೂಲಕ ಇಷ್ಟೇ ಜಮೀನನ್ನು ಬೇರೆಯವರಿಗೆ ಕೊಡುತ್ತೇವೆಂದು ಎಲ್ಲಿಯೂ ಕಾಣಿಸಿಲ್ಲ. ಇದರಿಂದ ಇಷ್ಟು ಪಲ್ಲ ಧಾನ್ಯ, ಇಷ್ಟು ಟನ್ ಧಾನ್ಯ ಹೆಚ್ಚಿಗೆ ಉತ್ಪತ್ತಿಯಾಗುತ್ತದೆನ್ನುವ ಭರವಸೆಯನ್ನು ಕೊಟ್ಟಿಲ್ಲ. ಇದರ ಜೊತೆಗೆ ಯಾರಿಗೆ ಸೀಲಿಂಗ್ ಅನ್ವಯವಾಗುವ ಹಾಗೆ ಮಾಡಿದ್ದೀರೆಂದರೆ ಖುಷ್ಕಿ ಜಮೀನು ಇರುವವರ ಮೇಲೆ, ಇದರಲ್ಲಿ ಪ್ರತಿ ವರ್ಷವೂ ಸರಿಯಾಗಿ ಬೆಳೆ ಬರುವುದಿಲ್ಲ. ಐದು ವರ್ಷಕ್ಕೆ ಒಮ್ಮೆ, ಹತ್ತು ವರ್ಷಕ್ಕೆ ಒಮ್ಮೆ ಪೂರ್ತಿ ಬೆಳೆ ಬರುವ ಸಂಭವವಿದೆ. ಉಳಿದಂತೆ ಆರಾಣಿ ಬೆಳೆ, ಮೂರಾಣಿ ಬೆಳೆ, ಎರಡಾಣಿ ಬೆಳೆ ಈ ರೀತಿ ಬರುತ್ತದೆ. ಆರಾಣಿ ಬೆಳೆಗಿಂತ ಕಡಮೆ ಬೆಳೆ ಆದರೆ ಕಂದಾಯದಲ್ಲಿ ರಿಮಿಷನ್ ಕೊಡಬೇಕಾಗುತ್ತದೆ. ಆದ್ದರಿಂದ ಆರಾಣಿ ಬೆಳೆಯಾಯಿತು ಎಂದು ರಿಕಾರ್ಡಿನಲ್ಲಿ ಬರೆಯುವಂತೆ ಮಾಡುತ್ತೀರಿ. ಹಿಂದಿನ ಸರ್ಕಾರ ಈ ವಿಷಯದಲ್ಲಿ ಏನು ಪದ್ಧತಿಯನ್ನು ಹಾಕಿತ್ತೋ ಅದನ್ನೇ ತಾವೂ ಉಳಿಸಿಕೊಂಡು ಬಂದಿದ್ದೀರಿ. ಇದು ಬಹಳ ತಪ್ಪಾಗುತ್ತದೆ.

ಈಗ ಮಣ್ಣು ಹಿಡುವಳಿ, ಕುಟುಂಬ ಹಿಡುವಳಿ ಎಂದು ಆದಾಯದ ಮೇಲೆ ಮಿತಿಯನ್ನು ನಿರ್ಧಾರ ಮಾಡಬೇಕೆಂದು ಹೇಳುತ್ತೀರಿ. ಆದಾಯದ ಮೇಲೆ ಹಾಕುವುದಕ್ಕಿಂತಲೂ ವಿಸ್ತೀರ್ಣದ ಮೇಲೆ ಮಿತಿಯನ್ನು ಹಾಕಿದರೆ ಉತ್ತಮ. ಇದರಿಂದ ರೈತರಿಗೆ ಅನುಕೂಲವಾಗುತ್ತದೆ.

12-30 P.M.

ಮೊನ್ನೆಯ ದಿನ ಒಂದು ಪ್ರಶ್ನೆಗೆ ಉತ್ತರ ಹೇಳುವಾಗ ಇನ್ನು ಮುಂದೆ ಹೊಸದಾಗಿ ಗೋಮಾಳ ನಿರ್ಮಿಸುವುದಕ್ಕಾಗುವುದಿಲ್ಲವೆಂದು ಹೇಳಿದರು. ರೈತನು ದನಕರುಗಳಿಲ್ಲದೆ ವ್ಯವಸಾಯ ಮಾಡಲು ಸಾಧ್ಯವೇ ಇಲ್ಲ. ದನಕರುಗಳು ಮೇಯುವುದಕ್ಕೆ ಸ್ಥಳಬೇಕು. ಪ್ರತಿಯೊಂದು ಸ್ವಪರಿಪೂರ್ಣವಾಗಿರಬೇಕು. ಅದಕ್ಕೆ ಗೋಮಾಳವನ್ನು ಎಲ್ಲ ಕಡೆಯೂ ನಿರ್ಮಿಸಬೇಕು. ಇದನ್ನು ಬಿಟ್ಟು ಬರೀ ತತ್ವ ಹೇಳುತ್ತಾ ಹೋದರೆ ಏನೂ ಪ್ರಯೋಜನವಾಗುವುದಿಲ್ಲ. Land to the tiller ಎಂದು ಏನೇನೋ ಬಾಯಲ್ಲಿ ಹೇಳುತ್ತಿದ್ದಾರೆಯೇ ಹೊರತು ಯಾವುದನ್ನು ಕಾರ್ಯಗತ ಮಾಡುವುದಕ್ಕಾಗುತ್ತದೆಯೋ ಏನೋ ಒಂದೂ ಗೊತ್ತಿಲ್ಲ. ಸೀಲಿಂಗ್ ಎಲ್ಲಾ ಕ್ಷೇತ್ರಗಳಿಗೂ ಎಲ್ಲಾ ಸಂದರ್ಭದಲ್ಲೂ ತರಬೇಕು. ನಾವು 20 ವರ್ಷಗಳಿಂದ ಹೇಳಿ ಹೇಳಿ ಸಾಕಾಯಿತು. ಇರುವ ಜಮೀನನ್ನೆಲ್ಲಾ ಗುಟ್ಟಾಗಿ ಮಾರಿಕೊಂಡು ಬಿಟ್ಟರು. ಈ ದಿವಸ ನೀವು ಹೊರಟಿದ್ದೀರಿ ಗೇಣಿದಾರರಿಗಾಗಲಿ ಇತರರಿಗಾಗಲಿ, ಈ ಮಸೂದೆಯ ಪ್ರಕಾರ ಎರಡಾಣೆಯ ಭಾಗ ಜಮೀನು ಸಹ ದೊರೆಯುವುದಿಲ್ಲ. ಇದನ್ನೆಲ್ಲಾ ನೋಡದೆ ವಿಧಾನ ಸೌಧದ ಮುಂದೆ ಪಾಂಫ್ಲೆಟ್ ಹಂಚುವವರನ್ನು ಪೋಲೀಸಿನವರು ಹಿಡಿದರೆ ಪ್ರಯೋಜನವೇನು? ನೇರವಾಗಿ ಮಂತ್ರಿಗಳೇಕೆ ಬಂದು ನೋಡುವುದಿಲ್ಲವೆಂದರೆ ಅನೇಕ ಕೆಲಸಗಳಿರುತ್ತವೆ, ಅವಕಾಶವಿಲ್ಲ ಎಂದು ಹೇಳುತ್ತಾರೆ. ಧಾರಾಳವಾಗಿ ರೈತರು ಬಂದು ಮಂತ್ರಿಗಳನ್ನು ಭೇಟಿಮಾಡುವುದಕ್ಕಾಗುವುದಿಲ್ಲ. ನಮ್ಮಂಥವರಿಗೆ ಇಬ್ಬರು ಮೂವರು ಮಂತ್ರಿಗಳನ್ನು ನೋಡಲು ಒಂದು ಅವಕಾಶ ಸಿಕ್ಕುವುದು ಕಷ್ಟ. ಕೆಲವು ಜಾತ್ರೆಗಳಲ್ಲಿ ಕಳ್ಳತನ ಮಾಡಿದವರು ತಾವೇ 'ಕಳ್ಳನನ್ನು ಹಿಡಿಯಿರಿ' ಎಂದು ಕೂಗಿಕೊಂಡು ಓಡುತ್ತಿರುತ್ತಾರೆ; ಈಗ ಹಾಗಾಗಿದೆ. ಹೇಳುವವರೂ ನೀವೆ, ಮಾರಿಕೊಂಡಿರುವವರೂ ನೀವೆ!

ಶ್ರೀ ಕಡಿದಾಳ್ ಮಂಜಪ್ಪ.—ಕಾಂಗ್ರೆಸ್ಸಿನವರಿಗೇ ಜಮೀನಿರುವುದು, ಬಾಕಿಯವರಿಗಿಲ್ಲವೇ ?

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ನೀವು 150 ಜನರಿದ್ದರೆ ನಾವು 22 ಜನ ಮಾತ್ರ ಇರುವುದರಿಂದ ನಿಮಗೆ ಹೋಲಿಸುವುದು. ಊರಿನ ಜನ ಹೋದ ಮೇಲೆ ಹೆಬ್ಬಾಗಿಲು ಹಾಕಿದಂತೆ ನಾಮ್ಕಾವಾಸ್ತೆ ಪಟೇಲ್ ಎಂದು ಮಸೂದೆ ತಂದಿರುವುದು ಅಷ್ಟು ಚೆನ್ನಾಗಿ ಕಾಣುವುದಿಲ್ಲ. ಈ ದಿವಸವಾದರೂ ತಕ್ಷಣ ಈ ಮಸೂದೆಯನ್ನು ಜಾರಿಗೆ ತಂದು ಮೂಕ ಪ್ರಾಣಿಗಳಿಗೆ ಉಪಕಾರಮಾಡಿ ಎಂದು ಹೇಳಿ ನನ್ನ ಮಾತನ್ನು ಮುಕ್ತಾಯಮಾಡುತ್ತೇನೆ.

The House adjourned at Thirty three Minutes past Twelve of the Clock and reassembled at Three of the Clock.

[MR. SPEAKER in the Chair.]

†ಶ್ರೀ ಎ. ಎಸ್. ಪಾಟೀಲ್ (ನರಗುಂದ).—ಮಾನ್ಯ ಅಧ್ಯಕ್ಷರೇ, ಈ ದಿವಸ ಮಾನ್ಯ ಕಂದಾಯ ಮಂತ್ರಿಗಳು ಈ ರೀತಿಯಾದ ಭೂಮಿಯ ಸುಧಾರಣೆಯ ಮಸೂದೆಯನ್ನು ತಂದಿರುತ್ತಾರೆ; ನಾನು ಇದನ್ನು ಸ್ವಾಗತಿಸುತ್ತೇನೆ. ಈ ಶಾಸನವು ಸಮತಾವಾದ ಸಮಾಜದ ಧೋರಣೆಯಂತೆ ಜನರಿಗೆ ಅನುಕೂಲವಾಗಬಹುದು ಎನ್ನುವ ದೆಸೆಯಿಂದ ಮತ್ತು ಮನಃಪೂರ್ವಕವಾಗಿ ಈ ರೀತಿಯ ಪ್ರಯತ್ನ ನಡೆಸುವ ಸಲುವಾಗಿ ಈ ಸಭೆಯಲ್ಲಿ ಇಂದು ಈ ಮಸೂದೆಯನ್ನು ಮಂಡಿಸಲಾಗಿದೆ. ಈಗ ನಮ್ಮ ರಾಜ್ಯಕ್ಕೆ ಮುಂಬಯಿಯ ಭಾಗಕ್ಕೆ ಸೇರಿದ್ದ ನಾಲ್ಕು ಜಿಲ್ಲೆಗಳಲ್ಲಿ ಈಗಾಗಲೇ ಒಂದು ಆಕ್ಟು ಅಲ್ಲಿ ಜಾರಿಯಲ್ಲಿದೆ. ಅದರಲ್ಲಿರುವ ಕೆಲವು ಅಂಶಗಳಿಗೂ ಇಲ್ಲಿ ಬಂದಿರುವ ಮಸೂದೆಗೂ ಒಂದಕ್ಕೊಂದು ಹೊಂದಾಣಿಕೆ ಇದ್ದಂತೆ ಭಾಸವಾಗುತ್ತದೆ. ಇದಕ್ಕೆ ಕಾರಣವೇನು ಎಂದರೆ ಜತ್ತಿ ಸಮಿತಿಯವರು ಈಗ ಐದು ಭಾಗಗಳಿಗೂ ಒಂದೇ ಸ್ವರೂಪದ ಕಾಯಿದೆಯನ್ನು ಮಾಡಬೇಕೆಂದು ಅಭಿಪ್ರಾಯಪಟ್ಟಂತೆ ಇಲ್ಲಿ ಈ ರೀತಿಯಾದ ಕಾಯಿದೆಯನ್ನು ತರಲಾಗಿದೆ. ಕೆಲವು ಕಡೆ ಈ ರೀತಿಯಾದ ಕಾಯಿದೆ ಪ್ರಗತಿಪರವಾದ ರೀತಿಯಲ್ಲಿದೆ. ಸುಮಾರು ಇಪ್ಪತ್ತು ವರ್ಷಗಳಿಂದಲೂ ದೇಶದಲ್ಲಿರುವ ಗೇಣಿದಾರರಿಗೆ ಎಷ್ಟೋ ಸವಲತ್ತುಗಳು ಬಂದಿವೆ. ಆದರೆ ಈ ಮೈಸೂರು ರಾಜ್ಯಕ್ಕೆ ಈ ರೀತಿಯಾದ ಕಾಯಿದೆ ಬಂದಿಲ್ಲ ಮತ್ತು ಗೇಣಿದಾರರಿಗೆ ಸಾಕಷ್ಟು ಸವಲತ್ತುಗಳನ್ನು ಒದಗಿಸಿಕೊಟ್ಟಿಲ್ಲ. ಇದು ಒಂದು ಕಷ್ಟಕರವಾದ ಚಳವಳಿ ಎಂದೇ ಹೇಳಬೇಕಾಗಿದೆ. ನಮ್ಮ ಕಡೆಯ ಭಾಗಗಳು ಉಳಿದ ಭಾಗಗಳಿಗಿಂತ ಬಹಳ

ಹೊಂದುಳಿವೆ. ಜತ್ತಿ ಸಮಿತಿಯವರು ಕಳುಹಿಸಿದಂತಹ ರಿಪೋರ್ಟನ್ನು ನಮ್ಮ ಮಂತ್ರಿಮಂಡಲದಲ್ಲಿ ವಿಚಾರ ಮಾಡಿ ಈಗ ಬಂದಿರುವ ಐದು ಭಾಗಗಳಿಗೆಲ್ಲ ಅನ್ವಯಿಸುವಂತೆ ಒಂದೇ ಭೂಮಾಲೀಕರ ಕಾಯಿದೆಯನ್ನು ಮಾಡಿ ಮಾನ್ಯ ಮಂತ್ರಿಗಳಾದ ಮಂಜಪ್ಪನವರು ಇಲ್ಲಿ ಮಂಡಿಸಿದ್ದಾರೆ.

ಮುಂಬೈ ಪ್ರಾಂತ್ಯದ ಜಿಲ್ಲೆಗಳಲ್ಲಿ ಈ ಒಂದು ಪರಮಾವಧಿ ಪರಿಮಿತಿಯನ್ನು ಇನ್ನೂ ಅನ್ವಯಿಸಿಲ್ಲ. ಕಾರಣವೇನೆಂದರೆ ಪರಮಾವಧಿ ಪರಿಮಿತಿಯನ್ನು ಅನ್ವಯಿಸಲಿಕ್ಕೆ ಎಷ್ಟೋ ವಿರೋಧ ಉಂಟಾದುದರಿಂದ, ಮುಂಬೈ ಸರ್ಕಾರದವರು ಈ ಕಾಯಿದೆಯನ್ನು ಜಾರಿಗೆ ಕೊಡಲಿಲ್ಲ. ನಮ್ಮ ಪಂಚವಾರ್ಷಿಕಯೋಜನೆಗಳ ಕಾಲದಲ್ಲಿ, ಈ ಪರಮಾವಧಿ ಪರಿಮಿತಿ ಇರಬೇಕು. ಇಲ್ಲದಿದ್ದರೆ ಸಾಮಾಜಿಕ ನ್ಯಾಯ ದೊರಕಲಾರದು. ಎಷ್ಟೋ ಜನರುಕೈಯಲ್ಲಿ ಬಹಳ ವಿಪುಲಭೂಮಿ ಇದೆ. ಕೆಲವರಲ್ಲಿ ಎರಡು ಎಕರೆ ಇದೆ, ಕೆಲವರಲ್ಲಿ ಎರಡು ಸಾವಿರ ಎಕರೆಗಳಿವೆ. ಹೀಗೆ ಎರಡರಿಂದ ಎರಡು ಸಾವಿರ ಎಕರೆಗಳವರೆಗೆ ವ್ಯತ್ಯಾಸವಿದೆ. ಈ ವ್ಯತ್ಯಾಸವನ್ನು ಹೋಗಲಾಡಿಸುವವರೆಗೂ ಸಾಮಾಜಿಕ ನ್ಯಾಯ ದೊರಕುವಂತಿಲ್ಲ. ಈ ಎರಡು ಸಾವಿರ ಎಕರೆ ಭೂಮಿ ಏನು ಕಾರಣದಿಂದ ಕೆಲವರಲ್ಲಿ ಉಳಿದಿದೆ ಎಂದು ನಮ್ಮ ಹಿಂದಿನ ಐತಿಹಾಸಿಕ ಹಿನ್ನೆಲೆಯನ್ನು ವಿಚಾರಮಾಡಿದರೆ, ಜಮೀನುದಾರರು 400-500 ವರ್ಷಗಳ ಹಿಂದೆ ಹಳ್ಳಿ ಜನಗಳ ತಲೆಯನ್ನು ಹೊಡೆದು, ಭೂಮಿಯನ್ನು ಕಸಿದುಕೊಂಡು ಈ ಪ್ರಮಾಣದ ಭೂಮಿಗಳಿಸಿದರೆಂದು ಗೊತ್ತಾಗುತ್ತದೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಭೂಮಿಯ ವಿಷಯದಲ್ಲಿ ಮಾತ್ರ ಸಮಾನತೆ ಇರಬೇಕು, ಬೇರೆ ಕ್ಷೇತ್ರಗಳಲ್ಲಿ ಏರು ಪೇರುಗಳು ಇರಬಹುದೇ?

ಶ್ರೀ ಎ. ಎಸ್. ಪಾಟೀಲ್.—ಬೇರೆಕ್ಷೇತ್ರಗಳಲ್ಲಿ ಸಹಿತ ರಾಷ್ಟ್ರೀಕರಣ ನಡೆದು ಸಮಾನಾವಕಾಶ ಉಂಟಾಗಬೇಕು. ಅವುಗಳಲ್ಲಿ ರಾಷ್ಟ್ರೀಕರಣದ ಮೂಲಕ ನ್ಯಾಯದೊರೆದೀತು. ಈ ಒಂದು ಸಾಮಾಜಿಕ ನ್ಯಾಯವನ್ನು ದೊರಕಿಸಲಿಕ್ಕೆ, ನಮ್ಮ ಜನರಲ್ಲಿ ಸಮಾನತೆಯನ್ನುಂಟುಮಾಡುವುದಕ್ಕೆ ಎಲ್ಲರೂ ಒಪ್ಪಲೇಬೇಕು. ಒಮ್ಮಿಂದೊಮ್ಮಿಗೆ ಕಮ್ಯೂನಿಸಂ ಚಳವಳಿ ಎದ್ದು, ಆಸ್ತಿಯನ್ನು ಗೇಣಿದಾರರು ಕಸಿದುಕೊಳ್ಳುವ ಪರಿಸ್ಥಿತಿ ಬರಲಾರದು. ಎಲ್ಲಾಕಡೆಯೂ ಆದಷ್ಟು ಸಮಾನ ಪರಿಸ್ಥಿತಿ ಉಂಟಾಗಬೇಕು. ಎಲ್ಲರೂ ಎರಡು ಹೊತ್ತುಊಟ ಮಾಡಬೇಕು. ಈ ತರಹ ಎಲ್ಲರಿಗೂ ಒಗ್ಗುವಂಥ ಮಸೂದೆ ನಮ್ಮೆದುರಿಗೆ ಬಂದಿದೆ. 3,600 ರೂಪಾಯಿ ನಿವ್ವಳ ಆದಾಯ ಬರುವ ಮೂರು ಫ್ಯಾಮಿಲಿ ಹೋಲ್ಡಿಂಗುಗಳನ್ನು ಸ್ವತಃ ವ್ಯವಸಾಯ ಮಾಡತಕ್ಕವನು ಇಟ್ಟುಕೊಳ್ಳಬಹುದೆಂದು ಈ ಬಿಲ್ಲಿನಲ್ಲಿ ಇದೆ. ನಿವ್ವಳ ಉತ್ಪನ್ನವೆಂದರೆ, ನೀರಾವರಿ ಸೌಕರ್ಯವಿರುವ ಜಮೀನುಗಳಿಗೆ ಒಟ್ಟು ಉತ್ಪನ್ನದ ಅರ್ಧದಷ್ಟು, ಉಳಿದ ಭೂಮಿ ಎಂದರೆ ಖುಷ್ಕಿ ಭೂಮಿಗೆ 33 1/3ರಷ್ಟು ಎಂದೂ ನಿಗದಿಮಾಡಿದೆ. ಇದನ್ನು ನೋಡಿದರೆ ಯೋಗ್ಯವಾಗಿದೆ. ಕೆಲವು ಮಾನ್ಯ ಸದಸ್ಯರು ಹೇಳಿದರು, ಒಟ್ಟು ವರಮಾನದ ಅರ್ಧದಷ್ಟು ಖರ್ಚಿಗೆ ಸಾಲುವುದಿಲ್ಲವೆಂದು. ಶ್ರೀ ರಾಜ್ ಸಿದ್ಧಾಂತಿಯವರು ಇಷ್ಟುಖರ್ಚು ಬರುವುದಿಲ್ಲವೆಂದು ಹೇಳಿದರು. ನನಗೆ ಗೊತ್ತಿದೆ. ನಾನು ಸ್ವಂತ ಒಕ್ಕಲುತನ ಮಾಡತಕ್ಕವನು. ಕೆಲವು ಭಾಗಗಳಲ್ಲಿ ಮಳೆ ಅಭಾವವಿದ್ದರೆ, ಎಕರೆಗೆ ಖರ್ಚು ಹೆಚ್ಚು ಬಂದು, ಉತ್ಪನ್ನ ಕಡಮೆಯಾಗತಕ್ಕಂಥ ಉದಾಹರಣೆಯೂ ಇದೆ. ಹೆಚ್ಚು ಬೆಳೆಯುವುದಕ್ಕೆ ಪ್ರಯತ್ನಮಾಡಿದಾಗ, ಹೆಚ್ಚು ಹುಟ್ಟುವಳಿ ಮಾಡಬೇಕೆಂದು ಪ್ರಯತ್ನ ಮಾಡಿದಾಗ, ಕೂಲಿಗೆ ಗೊಬ್ಬರಕ್ಕೆ ಮುಂತಾದುದಕ್ಕೆ ಕೊಡುವುದರಲ್ಲಿ, ಎರಡು ಮೂರರಷ್ಟು ಹೆಚ್ಚು ಖರ್ಚು ಬಂದಿದ್ದು ನನಗೆ ಗೊತ್ತಿದೆ. ನೀರಾವರಿ ನಮ್ಮ ಕಡೆ ಹೆಚ್ಚಾಗಿ ಆಗಿಲ್ಲ. ಅಲ್ಲಿಯೂ ಹೆಚ್ಚು ಖರ್ಚ ಬರುತ್ತದೆ. ನಿಜವಾದ ಒಕ್ಕಲುತನದೊಳಗೆ, ಬೀಜ, ಕೂಲಿ ಮತ್ತು ಗೊಬ್ಬರ, ಇವೆಲ್ಲಾ ಪ್ರತಿಯೊಂದು ಸಲಕರಣೆಗಳನ್ನೂ ಗಣನೆಗೆ ತೆಗೆದುಕೊಂಡರೆ, ಖರ್ಚ ಹೆಚ್ಚಾಗುತ್ತದೆ. ಆದರೆ ಯಾರಿಗೂ ಸಹಿತ ಲುಕ್ಸಾನು ಆಗುವುದಿಲ್ಲ. ಒಂದು ಕುಟುಂಬ ಹಿಡುವಳಿಯು ವಿಸ್ತೀರ್ಣ 1,200 ರೂಪಾಯಿ ನಿವ್ವಳ ಉತ್ಪನ್ನ ಬರುವಷ್ಟಿರಬೇಕು ಮತ್ತು ಒಬ್ಬ ಸ್ವಂತ ಸಾಗುವಳಿಮಾಡುವವನು 3,600 ರೂಪಾಯಿ ನಿವ್ವಳ ಉತ್ಪನ್ನ ಬರುವಷ್ಟು ಜಮೀನನ್ನು ಹೊಂದಿರಬಹುದೆಂದು ಮಾಡಿರುವುದು ಯೋಗ್ಯವಾಗಿದೆ. ಈ ಪರಿಮಿತಿಯನ್ನು 5,400 ರೂಪಾಯಿಯೆಂದು ಒಪ್ಪಿಕೊಂಡು, ಮೂರು ಕುಟುಂಬ ಹಿಡುವಳಿಗಳಿಂದ 4½ ಕುಟುಂಬ ಹಿಡುವಳಿಗಳಿಗೆ ಹೆಚ್ಚು ಮಾಡುವುದು ಯೋಗ್ಯವಿದೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—5,400 ರೂಪಾಯಿ ಫ್ಯಾಮಿಲಿ ಹೋಲ್ಡಿಂಗಿಗೆ ಒಪ್ಪುವುದಾದರೆ, ಅದನ್ನು ಸಾಗುವಳಿ ಮಾಡುವ ರೈತನಿಗೆ ಒಪ್ಪಿಸುತ್ತೀರ, ಅಥವ ಮಾಲಿಕರಿಗೆ ಮಾತ್ರ ಒಪ್ಪಿಸುತ್ತೀರ?

ಶ್ರೀ ಎ. ಎಸ್. ಪಾಟೀಲ್. ಅವರೂ ಸಣ್ಣ ಮಾಲೀಕರೇ, ದೊಡ್ಡ ಜಮೀನುದಾರರಿಗೂ ಇದನ್ನು ಅನ್ವಯಿಸಲಿಕ್ಕೆ ಅಡ್ಡಿ ಇಲ್ಲ. ಕೆಲವು ಸಂದರ್ಭದಲ್ಲಿ ಮಾಡುವುದಕ್ಕೆ ಅಡ್ಡಿ ಇಲ್ಲ. ಉತ್ಪನ್ನಬರತಕ್ಕಂಥಾದ್ದರಲ್ಲಿ ತೊಂದರೆಯಾಗಬಾರದೆಂಬ ಮೂಲ ಉದ್ದೇಶವಿದೆ. ಮೂಲ ಹಿಡುವಳಿಯಷ್ಟು ಜಮೀನನ್ನು ಲಾವಣಿ ಮಾಡುವುದಕ್ಕೆ ಅವಕಾಶಮಾಡಿಕೊಟ್ಟಿರುವುದು ಯೋಗ್ಯವಾಗಿದೆ. ಮಾಸ್ತರರು, ಸಣ್ಣ ನೌಕರರು ಏನು ಇದ್ದಾರೋ, ಅವರಿಗೆ ಹೆಚ್ಚಿಗೆ ದುಡಿಮೆ ಇರುವುದಿಲ್ಲ; ಅವರು ಒಂದು ಮೂಲ ಹಿಡುವಳಿಯಷ್ಟು ಜಮೀನನ್ನು ಲಾವಣಿಗೆ ಕೊಟ್ಟರೆ, ಬಂದ ಉತ್ಪನ್ನದಿಂದ ಜೀವನೋಪಾಯವಾಗುತ್ತದೆ. ಅಷ್ಟು ಮಟ್ಟಿಗೆ ಕೊಡುವುದು ಯೋಗ್ಯವೆಂದು ನನಗನ್ನಿಸುತ್ತದೆ.

ಇನ್ನು ಕೆಲವು ವಿಧವೆಯರು, ಅಪ್ರಾಪ್ತವಯಸ್ಕರು, ಮಿಲಿಟರಿ ಫೋರ್ಸಿನಲ್ಲಿರುವವರು ಇಂತಹ ಜನಗಳಿಗೆ ಏನು ಮಾಡಿದ್ದೀರೋ ಅದು ಯೋಗ್ಯವಿದೆ. ಅವರು ವಯಸ್ಸಿಗೆ ಬರುವವರೆಗೆ ಅವರ ಹತ್ತಿರವೇ ಇರತಕ್ಕದ್ದು ಯೋಗ್ಯವೆಂದು ನನಗನ್ನಿಸುತ್ತದೆ. ಅವರಿಗೆ ಯಾವ ರೀತಿಯಲ್ಲೂ ಲುಕ್ಸಾನು ಆಗಬಾರದು. ನಿನ್ನೆ ನಮ್ಮ ಹಿಂದಿನ ಮಂತ್ರಿಗಳಾಗಿದ್ದ ಮಾನ್ಯ ಶ್ರೀ ಎಂ. ಪಿ. ಪಾಟೀಲ್ ಅವರು "ಫ್ಯಾಮಿಲಿ" ಎಂಬ ಪದವನ್ನು ಸರಿಯಾಗಿ ವ್ಯಾಖ್ಯಾನ ಮಾಡಿಲ್ಲವೆಂದು ಹೇಳಿದರು. ಈ ಮಸೂದೆಯಲ್ಲಿ ಫ್ಯಾಮಿಲಿ ವಿಷಯವಾಗಿ ಅಣ್ಣನ ಮಕ್ಕಳು, ತಮ್ಮನ ಮಕ್ಕಳು ಇವರುಗಳೇನಾದರೂ ಕುಟುಂಬದಲ್ಲಿದ್ದ ಪಕ್ಷದಲ್ಲಿ ಅದರ ವಿವರ ಸರಿಯಾಗಿ ಕೊಡದೇ ಇರುವುದು ಸರಿಯಲ್ಲ ಎಂದು ಹೇಳುತ್ತೇನೆ. ಹಿಂದೂ ಸಂಪ್ರದಾಯದ ಪ್ರಕಾರ ಅವರು ಬೇರೆ ಹೋಗಬೇಕು. ಐದು ಮಂದಿ ಅಂದರೆ, ಅಣ್ಣ, ತಮ್ಮ ಹೆಂಡತಿ, ಮಕ್ಕಳು ಅಂದರೆ ಸರಿ. ಅದರ ಬಗ್ಗೆ ತಪ್ಪುಕಲ್ಪನೆ ಮಾಡಬಾರದು ಎಂದು ನನ್ನ ವಿನಂತಿ.

SRI A. R. KARISIDDAPPA (Arasikere).—If there are three brothers in a family, it becomes a joint family.

Sri A. S. PATIL.—Joint family is different from family. It means and it becomes a family.

Sri C. J. MUCKANNAPPA.—Sir, one is a doctor, and the other is a lawyer.

Mr. SPEAKER.—One is a doctor, the other is a lawyer and the third is a layman.

ಶ್ರೀ ಎ. ಎಸ್. ಪಾಟೀಲ್.—ಸ್ವಂತ ಸಾಗುವಳಿ ಎಂಬುದಕ್ಕೆ ವ್ಯಾಖ್ಯಾನ ಸರಿಯಾಗಿಲ್ಲ. ಸ್ವಂತ ಸಾಗುವಳಿ ಎಂದು ತಪ್ಪುಕಲ್ಪನೆಮಾಡಿ, ಸ್ವಂತ ಸಾಗುವಳಿ ಎಂದು ತಮ್ಮ ಜಮೀನುಗಳನ್ನು ತಮ್ಮ ಸ್ವಾಧೀನಕ್ಕೇ ಇಟ್ಟುಕೊಂಡು ಉಪಯೋಗ ಮಾಡುವ ಅವಕಾಶ ಕಲ್ಪಿಸದೆ ಇರುವ ಹಾಗೆ ತಾವು ಇಟ್ಟಿದ್ದೀರಿ. ಇದನ್ನು ನೋಡಿದರೆ ಯಾರಾದರೂ ಕೇಳುತ್ತಾರೆ, ಉಳುವವನೇ ಮಾಲೀಕನಾಗಬೇಕು, Tiller must become the owner, ಎಂಬ ತತ್ವ ಇದ್ದರೆ, ಅದನ್ನು ಜಾರಿಗೆ ಬರಬೇಕಾದರೆ ಬಹಳ ಕಷ್ಟ. ಏಕೆಂದರೆ ಯಾವನು ಸಾಗುವಳಿ ಮಾಡುತ್ತಾನೋ ಅವನಿಗೆ ಅದರ ಪ್ರತಿಫಲಸಿಕ್ಕಬೇಕೆಂಬುದು ಇರಬೇಕು. ಒಂದು ಮಾನಿನಲ್ಲಿಎಷ್ಟೋಜನ ಕೂಲಿಗಾರರು ಇರುತ್ತಾರೆ. ಅವರ ಮಾಲೀಕರ ಪರವಾಗಿ ಯಾವನು ದುಡಿಯುತ್ತಾನೋ ಅವನಿಗೆ ಪ್ರತಿಫಲಸಿಕ್ಕಬೇಕು ಎಂದು ಇದೆ. ಅದು ಸತ್ಯ. ಬರೀ ಕೂಲಿಗಾರರು ಇರುವುದಕ್ಕಾಗುತ್ತದೆಯೇ ಹೊರತು ದುಡ್ಡು ಹಾಕಿದವರು ಇದ್ದರೆ ಅಂತಹ ಜನರು ಇರುವುದಕ್ಕೆ ಇದರಲ್ಲಿ ಅವಕಾಶವಿಲ್ಲ. ಸ್ವಂತ ಸಾಗುವಳಿ ಅಂದರೆ ಇದರಲ್ಲಿ ಮಾಡಿರುವುದು ಶ್ರೇಷ್ಠವಾಗಿದೆ. ಅದರಲ್ಲಿ ಹೆಚ್ಚು ಕಡಮೆ ಮಾಡುವುದಕ್ಕೆ ಅವಕಾಶವಿಲ್ಲ. ಸ್ವಂತವಾಗಿ ಜಮೀನಿನ ಮೇಲ್ವಿಚಾರಣೆಯನ್ನು ನೋಡತಕ್ಕ ಮನುಷ್ಯನು ಹತ್ತುಮೈಲಿಯಲ್ಲಿಯೇ ವಾಸವಾಗಿರಬೇಕು ಎಂದು ಇದೆ. ಹತ್ತುಮೈಲಿಯೊಳಗೇ ಒಂದು ಮನೆ ಕಟ್ಟಿಕೊಳ್ಳಬೇಕು ಎಂದು ಹೇಳುವುದು ಸರಿಯಲ್ಲ. ಒಕ್ಕಲುತನ ಉತ್ತಮರಿಗೆ ಆಗಬೇಕಾದರೆ, ಹೆಚ್ಚಿನ ಹುಟ್ಟುವಳಿ ತೆಗೆದುಕೊಳ್ಳಬೇಕಾದರೆ ತಾನು ನೂರಾರುಮೈಲಿ ಬಂದು ಸಾಗ ಮಾಡಲಿಕ್ಕೆ ಸಾಧ್ಯವಿಲ್ಲ. ಅಲ್ಲಿ ಒಂದು ಮನೆ ಇರುವುದಕ್ಕೆ ಅವಕಾಶ ಮಾಡಿಕೊಡಬೇಕು. ಅದರಿಂದ ತಪ್ಪು ಏನೂ ಇಲ್ಲವೆಂದು ನನ್ನ ಅನುಭವದಿಂದ ಹೇಳುತ್ತಿದ್ದೇನೆ. ಒಕ್ಕಲುತನದ ವ್ಯವಸಾಯ ವ್ಯಾಪ್ತಿಯ ರೀತಿಯನ್ನು ನೋಡಿದರೆ, ನಮ್ಮ ಕಡೆಯ ಸಾಗುವಳಿ ಅದೇ ಪ್ರಕಾರವಿದೆ.

ಇನ್ನು ಆಬ್‌ಸೆಂಟಿಲ್ಯಾಂಡ್‌ಲಾರ್ಡ್ಸ್ ವಿಷಯ. ಇವರು ನಮ್ಮ ಕಡೆಗೆ ಉಳಿದಿಲ್ಲ. ಈ ಬಿಲ್ಲಿನಲ್ಲಿ ಹೇಳಿದಂತೆ ಅಲ್ಲಿ ಮಾಯವಾಗಿದ್ದಾರೆ. 20ವರ್ಷಗಳವರೆಗೆ ಎಷ್ಟೋಜನ ತಮ್ಮ ಜಮೀನುಗಳನ್ನು ರೈತರಿಗೆ ಕೊಟ್ಟರೂ ಅವರೇಮಾಲೀಕರಾಗಿದ್ದಾರೆ. ಇನ್ನು ಕೆಲವು ರೈತರು ಗಂಟುಮಾಡಿಕೊಂಡು ಕೊಟ್ಟಿದ್ದಾರೆ. ಇಪ್ಪತ್ತುವರ್ಷಗಳಲ್ಲಿ ನಡೆದ ಅನುಭವ ಹೇಳಬೇಕಾದರೆ, ಆ ಒಂದು ಚಿತ್ರಕೊಡಬೇಕಾದರೆ ಅಲ್ಲಿ ರೈತರು ಮಾಲೀಕರು ಎಂಬ ವಾದ ಬಹಳ ಮಟ್ಟಿಗೆ ಉಳಿದಿಲ್ಲ. ಕೆಲಮಟ್ಟಿಗೆ ಮಾತ್ರ ಅದು ಉಳಿದಿದೆ ಜಮೀನ್ದಾರರೆಲ್ಲಾ ಜಮೀನು ಮಾರಿಕೊಂಡಿದ್ದಾರೆ. ಎಷ್ಟೋ ಶೇಕಡ ಹತ್ತು ಭಾಗ ಅಥವಾ ಇನ್ನೂ ಅದಕ್ಕಿಂತ ಕಡಮೆ ಆಬ್‌ಸೆಂಟಿಲ್ಯಾಂಡ್ ಲಾರ್ಡ್ಸ್ ಕಡೆ ಜಮೀನು ಉಳಿದಿದೆ ಎಂದು ಹೇಳಬಹುದು.

ಶ್ರೀ ಕಡಿದಾಳ್ ಮಂಜಪ್ಪ.—ಅಲ್ಲಿ ರೈತರ ಉಚ್ಚಾಟನೆ ಬಹಳ ಮಟ್ಟಿಗೆ ನಡೆದಿದೆ ಎಂದು ಕೆಲವರು ಹೇಳಿದರು.

ಶ್ರೀ ಎ. ಎಸ್. ಪಾಟೀಲ್.—ಆ ಉಚ್ಚಾಟನೆ ನಡೆದಿರುವುದು ಸತ್ಯಾಂಶವಿದೆ. ಸಾಧಾರಣವಾಗಿ ಶೇಕಡ ಹತ್ತು ಭಾಗದಷ್ಟು ಜನರು ಈ ರೀತಿ ಉಚ್ಚಾಟನೆ ಮಾಡಿ ಜಮೀನು ತೆಗೆದುಕೊಂಡದ್ದರಿಂದ ಅವರು ಕೂಲಿಗಾರರಾಗಿದ್ದಾರೆ. ಕೆಲವು ಮಂದಿ ಜಮೀನ್ದಾರರಿಗೆ ಅವರು ರೈತರು ಎಂಬ ಆಲೋಚನೆ ಇರುವುದಿಲ್ಲ. ಕೋರ್ಟುಕಚೇರಿಗಳನ್ನು ಹತ್ತುತ್ತಾರೆ. ಅವರಲ್ಲಿ ನ್ಯಾಯವಿರುವುದಿಲ್ಲ. ಇಂತಹ ಸ್ಥಿತಿಯಲ್ಲಿ ಜಮೀನನ್ನು ಸರೆಂಡರ್‌ಮಾಡಿಸಿಕೊಂಡಿರುವ ಉದಾಹರಣೆಗಳು ಕೆಲಮಟ್ಟಿಗಿವೆ. ಕೆಲವು ಮಂದಿ ಲಕ್ಷಾಂತರ ದುಡ್ಡು ಮಾಡಿಕೊಂಡು ಇದ್ದಾರೆ.

ಇನ್ನು ಕಂಪೆನ್ಸೇಷನ್ ವಿಚಾರವಾಗಿ ಕುರಿತು ಕೆಲವು ಮಾನ್ಯ ಸದಸ್ಯರು ಇದು ಬಹಳ ಹೆಚ್ಚಾಗಿದೆಯೆಂದು ವಾದಮಾಡಿದರು, ಕೆಲವರು ಕಡಮೆಯೆಂದು ವಾದ ಮಾಡಿದರು. ಅದು ತಮಗೆಲ್ಲರಿಗೂ ಗೊತ್ತಿದೆ. ಸರಿಯಾದ ಕಂಪೆನ್ಸೇಷನ್ ಇದರೊಳಗೆ ಸಿಕ್ಕುವಂತೆ ಅಡಕವಾಗಿದೆಯೆಂದು ನನಗನ್ನಿಸುತ್ತದೆ. ಇದು ಯೋಗ್ಯವಾದುದು. 15 ವರ್ಷದ ಒಂದು ಲಾವಣಿ ಉತ್ಪನ್ನದ ಮೇಲೆ ಸಾಧಾರಣವಾಗಿ ಬೆಲೆ ಎಷ್ಟು ಬರುತ್ತದೆಂದು ಹೇಳಿದರೆ ಸಾಧಾರಣವಾಗಿ ಒಕ್ಕಲುತನ ಮಾಡುವವರಿಗೆಲ್ಲಾ ಗೊತ್ತಿದೆ. ಪ್ಲಾನಿಂಗ್ ಕಮಿಷನ್ನಿನವರ ಸೂಚನೆಗಳಂತೆ ಉತ್ತಮವಾದಂಥ ರೀತಿಯಲ್ಲಿರುವ ಹಾಗೆ ಒಂದು ತರಹ ಕಾಂಪೆನ್ಸೇಷನ್ ಇಟ್ಟಿದ್ದಾರೆ. ಸುಮ್ಮನೆ ಅದರ ಬಗ್ಗೆ ಯಾರೂ ತಕರಾರು ಮಾಡಬಾರದು. ಅದನ್ನು ಎಲ್ಲರೂ ಸ್ವೀಕರಿಸಬೇಕೆಂದು ನನ್ನ ವಿನಂತಿ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ತಮ್ಮ ಬೊಂಬಾಯಿ ಪ್ರಾಂತ್ಯದಲ್ಲಿ ಕಂದಾಯ ರೆವಿನ್ಯೂ ಎಷ್ಟು ಇದೆ?

ಶ್ರೀ ಎ. ಎಸ್. ಪಾಟೀಲ್.—ಐದುಪಟ್ಟುಗಳು. ಈ ವಿಚಾರವಾಗಿ ಹೇಳಿದರೆ 1955ನೆಯ ಇಸವಿಯಲ್ಲಿ ನಮ್ಮ ಕಡೆ ಅಗ್ರಿಕಲ್‌ಚರಲ್ ಲ್ಯಾಂಡ್ಸ್ ಎಂಬುದು ಮೊದಲೇ ಬಂತು. ಆಗಲೇ ಬಹಳ ಕ್ರಾಂತಿಕಾರಕವಾಗಿ ಎಷ್ಟೋ ಸಣ್ಣ ಸಣ್ಣ ಹಿಡುವಳಿದಾರರಿಗೆ ಕೊಡತಕ್ಕ ಗೇಣಿ ಬಹಳ ಕಡಮೆ ಎಂದು ವಾದ ಇತ್ತು. ಅದಕ್ಕೆ ನಾನು ಮಾನ್ಯ ಮಂತ್ರಿಗಳಿಗೆ ನಿವೇದನೆ ಮಾಡಿಕೊಳ್ಳುವುದೇನೆಂದರೆ, ಇದರೊಳಗೆ ಎಲ್ಲಾದಕ್ಕೂ ಸಮನ್ವಯವಾಗುವ ದೃಷ್ಟಿಯಿಂದ ಬೊಂಬಾಯಿಯಂತೆ ಅನ್ವಯಿಸಬೇಕು. 1/3 ಲಾವಣಿ ಆಗಬೇಕು.ಆದ್ದರಿಂದ 10ನೆಯ ಕಲಂ ಇಲ್ಲಿ ಹಾಕಿರುವುದು ಸರಿಯಲ್ಲ. ಅದನ್ನೂ ಕೂಡ ಸಮನ್ವಯ ಮಾಡಬೇಕಾದರೆ ಎಲ್ಲರಿಗೂ ಒಂದು ರೀತಿಯ ಕಾನೂನುಮಾಡಿದರೆ ಒಳ್ಳೆಯದು. ಅದೇ ಪ್ರಕಾರ ಐದು ಭಾಗಗಳಿಗೂ ಅನ್ವಯಿಸಬೇಕೆಂದು ಹೇಳುತ್ತೇನೆ. ಐದು ಪಟ್ಟುಗಳಿಗಿಂತ ಎಲ್ಲಿ ಕಡಮೆ ಇದೆ ಎಂಬುದನ್ನು ವಿಚಾರಿಸಿ ಐದು ಭಾಗಗಳಿಗೂ ಒಂದೇ ರೀತಿಯಾದ ಕಾನೂನು ಅನ್ವಯಿಸುವಂತೆ ಇಡುವ ವ್ಯವಸ್ಥೆ ಮಾಡಬೇಕೆಂದು ನಾನು ವಿನಂತಿಮಾಡಿಕೊಳ್ಳುತ್ತೇನೆ.

ಶ್ರೀ ಜಿ. ಎಂ. ಚಿನ್ನಸ್ವಾಮಿ (ಬಿಳಿಗೆರೆ).—ಮುಂಬೈಯೊಳಗೆ ಲ್ಯಾಂಡ್ ರೆವಿನ್ಯೂ ಒಂದು ಎಕರೆ ಡ್ರೈಲ್ಯಾಂಡ್ ಮತ್ತು ವೆಟ್‌ಲ್ಯಾಂಡಿಗೆಷ್ಟು?

ಶ್ರೀ ಎ. ಎಸ್. ಪಾಟೀಲ್.—ಡ್ರೈಲ್ಯಾಂಡಿಗೆ ಎರಡು ರೂಪಾಯಿಗಳು, ವೆಟ್‌ಲ್ಯಾಂಡಿಗೆ ನಾಲ್ಕು ರೂಪಾಯಿಗಳು.

3-30 P.M.

ಈ ಸೀಲಿಂಗಿಗೆ ಕೆಲವೊಂದು ಎಗ್ಜೆಮ್ಷನ್ ಏನು ಮಾಡಿದ್ದೀರಿ, ಟೀ, ಕಾಫಿ, ರಬ್ಬರ್ ಇವಕ್ಕೆ ಅದು ಸರಿ

ಎಂದು ನನಗೆ ಎನಿಸುತ್ತದೆ. ಇವುಗಳಿಂದ ನಮ್ಮ ದೇಶಕ್ಕೆ ಉತ್ತಮವಾದ ಹಣ ಸಿಕ್ಕುತ್ತದೆ. ಪಂಚವಾರ್ಷಿಕ ಯೋಜನೆಗಳನ್ನು ಉತ್ತಮ ರೀತಿಯಿಂದ ಕೊನೆಗಾಣಿಸಲಿಕ್ಕೆ ಸಾಕಷ್ಟು ದುಡ್ಡು ಬೇಕಾಗುತ್ತದೆ. ಸ್ವಲ್ಪ ವರ್ಷಗಳಾದಮೇಲೆ ಆರ್ಥಿಕ ದೃಷ್ಟಿಯಿಂದ ಬಲವಂತ ಆದಮೇಲೆ ನೋಡೋಣ. ಇದನ್ನು ಈಗ ಕಿತ್ತುಹಾಕಿದರೆ ಡಿಸ್‌ಆರ್ಗನೈಜ್ ಮಾಡಿದರೆ ಕಷ್ಟವಾಗಬಹುದು. ಆದ್ದರಿಂದ ಸದ್ಯಕ್ಕೆ ಮಾಡಬಾರದು. ಅದರಿಂದ ಉತ್ಪನ್ನಮಾಡಿಕೊಳ್ಳುವುದು ಯೋಗ್ಯ ಎಂದು ಅನಿಸುತ್ತದೆ. ಮೈಸೂರು ಪ್ರಾಂತದೊಳಗೆ ಉದ್ಯೋಗಗಳು ಬೆಳೆದಂತೆ ಬಡತನ ಹಂಚಿಹೋಗುತ್ತದೆ. ಕೆಲವೊಂದು ಉದ್ಯೋಗಗಳಿಗೆ ಸಂರಕ್ಷಣೆ ಇರಲಿ ಎಂದು ಮಾಡಿರುವುದು ಯೋಗ್ಯ ಇದೆ. ಸಮಾಜವಾದಿ ಸಮಾಜ ರಚನೆ ಇತ್ತಕಡೆ ಅದು ಎಷ್ಟರಮಟ್ಟಿಗೆ ಒದಗುತ್ತದೆ ನೋಡಬೇಕು. ನಮ್ಮ ದೇಶದ ಅಭ್ಯುದಯಕ್ಕೆ ಆರ್ಥಿಕ ಧಕ್ಕೆ ತಟ್ಟದಹಾಗೆ ಕಾಯಿದೆಮಾಡಬೇಕು. ಆರ್ಥಿಕ ಧಕ್ಕೆ ತಟ್ಟುವ ಹಾಗೆ ಮಾಡಿದರೆ ಎಷ್ಟೋ ಲೋಪದೋಷ ಆಗುತ್ತದೆ ಎಂದು ಕಾಣಿಸುತ್ತದೆ. ಟ್ಯಾಕ್ಸ್ ಅಥವಾ ಯಾವುದೇ ರೀತಿಯಿಂದಲಾದರೂ ಉತ್ಪನ್ನದ ಬಾಬುಗಳನ್ನು ಹೆಚ್ಚು ಮಾಡಬೇಕು ಎಂದು ಹೇಳುತ್ತೇನೆ. ನಮ್ಮ ಬಯಲು ಪ್ರದೇಶದಲ್ಲಿ ಸಾಕಷ್ಟು ಭೂಮಿ ಬೆಳಸು ಇದೆ. ಅದರೊಳಗೆ ಹೆಚ್ಚು ಕಡಮೆ ಡಿಸ್ಟಿಂಗ್‌ಷನ್ ಮಾಡುವುದು ಸರಿಯಲ್ಲ ಎಂದು ಎನಿಸಿತು. ರಾಷ್ಟ್ರೀಯ ವಿಚಾರಮಾಡಲಿಕ್ಕೆ ಮಾಡಿದ್ದು ಸರಿಯೆಂದು ಎನಿಸುತ್ತದೆ. ಗೇಣಿದಾರರು ಮಾಲೀಕರಾಗುವುದಕ್ಕೆ ಅವಕಾಶಮಾಡಿಕೊಟ್ಟಿದ್ದೀರಿ, ಯಾರು ಹೊಲದೊಳಗೆ ದುಡಿಯುತ್ತಾರೋ ಅವರು ಹೊಲದೊಡೆಯರಾಗಬೇಕು. ಆ ತತ್ವಕ್ಕೆ ಯಾರು ಒಳಪಟ್ಟು ಇರುತ್ತಾರೋ ಅವರಿಗೆ ರೈತಪಾರಿಪಟ್ಟೆ ಸಿಕ್ಕುತ್ತದೆ. ಒಂದಲ್ಲ ಒಂದು ದೃಷ್ಟಿಯಿಂದ ಅವರನ್ನು ಮಾಲೀಕರಾಗಿ ಮಾಡುವುದಕ್ಕೆ ಈ ಮಸೂದೆಯಲ್ಲಿ ಅವಕಾಶವಿದೆ. ಶ್ರೀ ರಾಮಕೃಷ್ಣ ಹೆಗ್ಗಡೆಯವರು ಹೇಳಿದಹಾಗೆ, ಈ ಕಾಯಿದೆ ಸರಿಯೆಂದು ಕಾಣುತ್ತದೆ, ಆದರೆ ಕಾರ್ಯಾಚರಣೆಗೆ ಬಂದಾಗ ರೈತರಿಗೆ ನೋವು ಆಗುವಂತೆ ಲುಕ್ಸಾನುಮಾಡಿ ಮಾಲೀಕರು ಆಗದಂತೆ ಮಾಡುವ ಅವಕಾಶ ಇರಬಾರದು. ಕಾಯಿದೆಯೊಳಗೆ ಭದ್ರವಾದ ಕಲಮುಗಳನ್ನು ಇಡಬೇಕು. ಆ ರೀತಿ ಸಂರಕ್ಷಣೆ ಇಟ್ಟರೆ ಸರಿ ಎಂದು ಅನಿಸುತ್ತದೆ. ಮುಂಬೈಯೊಳಗೆ ಕೆಲವರು ಪರ್ಸನಲ್ ಕಲ್ಟಿವೇಷನ್ನಿಗೋಸ್ಕರ ಲಕ್ಷಾಂತರ ಎಕರೆ ಭೂಮಿಯನ್ನು ತೆಗೆದುಕೊಂಡು ಮಾರಾಟಮಾಡಿದ್ದಾರೆ. ಈ ಕಾಯಿದೆಯೊಳಗೆ ಆರೀತಿ ಒಂದು ಕಲಂ ಇದೆ. ಇದರಿಂದ ಭೂಮಿಯನ್ನು ತಿರುಗಿ ಪಡೆದುಕೊಳ್ಳುವುದಕ್ಕೆ ವ್ಯವಸ್ಥೆ ಮಾಡಿದಹಾಗಾಗುತ್ತದೆ. ರೈತರಿಗೆ ಕೋರ್ಟು ಕಛೇರಿಗೆ ಹೋಗುವುದಕ್ಕೆ ಶಕ್ತಿ ಇರುವುದಿಲ್ಲ. ಕಾಯಿದೆಯೊಳಗೆ ಸಂರಕ್ಷಣೆ ಏನು ಕೊಡಬೇಕೋ ಅದಕ್ಕೆ ಸೂಕ್ತ ರೀತಿಯಿಂದ ಅವಕಾಶ ಮಾಡಿಕೊಡಬೇಕು ಎಂದು ನನ್ನ ಸೂಚನೆ ಇದೆ. ಮಾನ್ಯ ಕಂದಾಯ ಮಂತ್ರಿಗಳಲ್ಲಿ ನಾನು ವಿಜ್ಞಾಪನೆ ಮಾಡಿಕೊಳ್ಳುವುದು ಏನೆಂದರೆ ಟೆನೆನ್ಸಿ ಕಾಯಿದೆ ಆಚರಣೆಯೊಳಗೆ ಬಂದಾಗ ಅನೇಕತರಹ ಲೋಪದೋಷಗಳು ಕಂಡುಬಂದುವು. ಮಾಮಲೆದಾರರು ಟ್ರಿಬ್ಯುನಲ್ ಕೆಲಸಮಾಡುವುದು ಸೂಕ್ತವಲ್ಲ ಎಂಬುದು ಎಲ್ಲರಿಗೂ ಗೊತ್ತಿದೆ. ಮಾನ್ಯ ಮಂತ್ರಿಗಳು ಸಂಚಾರ ಕೈಗೊಂಡರೆ ಇದು ಅವರಿಗೆ ಗೊತ್ತಾಗುತ್ತದೆ. ರೆವಿನ್ಯೂ ಅಧಿಕಾರಿಗಳು ಬಹಳಕಡೆ ಮಾಲೀಕರ ಕಡೆ ಆಗುತ್ತಾರೆ. ಹತ್ತು ಪರ್ಸೆಂಟ್ ರೈತರ ಕಡೆ ನಿರ್ಣಯ ಬಂದದ್ದು ಗೊತ್ತಿದೆ. ಬಹಳ ಕಡೆ ರೆವಿನ್ಯೂ ಅಧಿಕಾರಿಗಳು ಜಮೀನ್ದಾರರ ಕಡೆ ಇರುತ್ತಾರೆ. 25 ಟ್ರಿಬ್ಯುನಲ್ಸ್ ಮಾಡುತ್ತಾರೆ ಎಂದು ಹೇಳಿದ್ದರೆ. ಸಿವಿಲ್ ಕೋರ್ಟಿಗೆ ಅಧಿಕಾರ ಕೊಡಬೇಕು. ಯಾಕೋ ಏನೋ ರೆವಿನ್ಯೂ ಅಧಿಕಾರಿಗಳ ಮೇಲೆ ಸರ್ಕಾರಕ್ಕೆ ಬಹಳ ಮೋಹ ಇದೆ. ಇನ್ನೂ ಒಂದು ಹೇಳಬೇಕಾದರೆ, ಲ್ಯಾಂಡ್ ಟ್ರಿಬ್ಯುನಲ್ ಏನು ಇದೆ ಅದು ಎರಡು ತಾಲ್ಲೂಕಿಗೂ ಆಗಲಿ ಅಥವಾ ಸಿವಿಲ್ ಕೋರ್ಟ್ ಜೂರಿಸ್‌ಡಿಕ್ಷನ್ ಏನು ಇದೆ ಅಲ್ಲಿಯ ಜಡ್ಜಿಗಳ ಹತ್ತಿರ ಇವುಗಳನ್ನು ವಿಚಾರಮಾಡಲಿಕ್ಕೆ ಕೊಡುವುದು ಸೂಕ್ತ ಇದೆ. ಮಾನ್ಯ ಮಂತ್ರಿಗಳು ಅನುಭವಸ್ಥರು ಇದ್ದಾರೆ ಕಂದಾಯ ಖಾತೆಯಲ್ಲಿ ಹೆಚ್ಚು ದುಡಿದವರು ಇದ್ದಾರೆ. ರೆವಿನ್ಯೂ ಇಲಾಖೆಗೆ ಕೊಡುವುದು ಚಲೋ ಎಂದು ಏತಕ್ಕೆ ತಿಳಿದುಕೊಂಡಿದ್ದಾರೋ ನನಗೆ ತಿಳಿಯದು. ಕಚೇರಿಯಿಂದ ಆರು ತಿಂಗಳು ಆದರೂ ಕಾಗದ ಈಚೆಗೆ ಬರುವುದಿಲ್ಲ. ಅವರಲ್ಲಿ ಹೋಗಿ ಒಂದು ವರ್ಷದಮೇಲೆ ಹೊಂತೆನೆಯು ಬೇಕಾಗುತ್ತದೆ.

Sri C. J. MUCKANNAPPA.—May I know what will be the jurisdiction of each civil judge in regard to taking decisions on land disputes ?

Sri A. S. PATIL.—It might be a taluk area, or it might be two taluks, whichever is compact. In our area it must be one taluk, because there are so many judges in many taluks. Therefore it will be very convenient.

ಮಾನ್ಯ ಸದಸ್ಯರು ವಕೀಲರು ಇದ್ದಾರೆ. ಅವರಿಗೆ ಅನುಭವ ಇದೆ. ಶ್ರೀ ಸೈ. ವೀರಪ್ಪನವರು ಟೆನೆನ್ಸಿ ಬೋರ್ಡ್ ಕೆಲಸಮಾಡಿರುವವರು, ಅವರಿಗೆ ಸ್ವಂತ ಅನುಭವ ಇದೆ. ಸಿವಿಲ್ ಕೋರ್ಟ್ ಸರಿ ಎಂದು ಅಭಿಪ್ರಾಯ ಇದೆ. ಇದರಲ್ಲಿ ಡಿಸ್ಟ್ರಿಕ್ಟ್ ಜಡ್ಜ್ ದರ್ಜೆಯವರು ಅಪೆಲೇಟ್ ಅಥಾರಿಟಿ ಪ್ರತಿಯೊಂದು ಜಿಲ್ಲೆಗೂ ನೇಮಕಮಾಡಬೇಕು ಎಂದು ಇದೆ. ಇದು ಹೀಗೆ ಅನಿಸುತ್ತದೆ. ಆ ರೀತಿ ಮಾಡುವುದಕ್ಕಿಂತ ಆಯಾ ಜಿಲ್ಲೆಯಲ್ಲಿದ್ದ ಡಿಸ್ಟ್ರಿಕ್ಟ್ ಜಡ್ಜ್ ಈ ಕೆಲಸವಾಡಬಹುದು. ಬೇರೆ ಪ್ರತ್ಯೇಕವಾಗಿ ಡಿಸ್ಟ್ರಿಕ್ಟ್ ಜಡ್ಜ್ ನೇಮಿಸುವುದು ಜರೂರು ಇಲ್ಲ. ಖರ್ಚುಬಾಬು ಹೆಚ್ಚು ಮಾಡುವುದಕ್ಕೆ ಮಾಡಿದ್ದು ಆಗಿದೆ. ಲ್ಯಾಂಡ್ ಟ್ರಿಬ್ಯುನಲ್ ಬೇರೆ ಮಾಡಬಾರದು. ಅಪೀಲು ಟ್ರಿಬ್ಯುನಲ್ ಮಾಡಬಾರದು ಎಂದು ನನ್ನ ಸೂಚನೆ ಇದೆ. ಮಾನ್ಯ ಮಂತ್ರಿಗಳು ಸೆಲೆಕ್ಟ್ ಕಮಿಟಿಯಲ್ಲಿ ಈರೀತಿ ತಿದ್ದುಪಡಿ ಮಾಡಬೇಕೆಂದು ವಿನಂತಿಮಾಡಿಕೊಳ್ಳುತ್ತೇನೆ. ಲ್ಯಾಂಡ್ ಕಮಿಷನ್ ಇದೂ ಸಹ ಅವಶ್ಯಕವಾಗಿದೆ ಎಂದು ಮಾತ್ರ ಹೇಳುತ್ತೇನೆ. ಆಯಾ ಕ್ಷೇತ್ರದಮೇಲೆ ಪರಿಮಿತಿ ನಿರ್ಣಯಮಾಡಬೇಕೆಂದು ಮಿತ್ರರಾದ ಶ್ರೀ ರಾಮಕೃಷ್ಣ ಹಗ್ಗಡೆಯವರು ಹೇಳಿದರು. ಕ್ಷೇತ್ರದಮೇಲೆ ಮಾಡುವುದು ಆರ್ಬಿಟ್ರರಿ. ಉತ್ಪನ್ನದ ಬಾಬಿನಲ್ಲಿ ಮಾಡಿದರೆ ಹೈದರಾಬಾದಿನಲ್ಲಿ ಉತ್ಪನ್ನ ಇಲ್ಲದಿರಬಹುದು, ಬೇರೆಕಡೆ ಅಂಥ ಭೂಮಿ ಬಾಗು ಭೂಮಿ ಆಗಿ ಫಲವತ್ತಾಗಿರಲಿಕ್ಕಿಲ್ಲ. ಭೂಮಿಯೊಳಗೆ ಉತ್ಪನ್ನ ನೋಡಿ ಮಾಡಬೇಕು. ಕ್ಷೇತ್ರದಮೇಲೆ ಮಾಡುವುದು ಸರಿಯಲ್ಲ. ಇದರಿಂದ ದೊಡ್ಡ ಅನ್ಯಾಯವಾಗುತ್ತದೆಂದು ನನಗನ್ನಿಸುತ್ತದೆ. ಉತ್ಪನ್ನದಮೇಲೆ ಪರಿಮಿತಿಯನ್ನು ನಿರ್ಧರಮಾಡುವುದು ಯೋಗ್ಯ. ಕ್ಷೇತ್ರದಮೇಲೆ ಮಾಡಿದರೆ ಮನಸ್ವಿ ರೀತಿಯಿಂದ ಮಾಡುವುದಕ್ಕೆ ಅವಕಾಶವಾಗುತ್ತದೆ. ಮಸೂದೆಯಲ್ಲಿರುವಂತೆ ಉತ್ಪನ್ನದ

(ಶ್ರೀ ಎ. ಎಸ್. ಪಾಟೀಲ್)

ಬಾಬಿನಮೇಲೆ ಪರಿಮಿತಿಯನ್ನು ನಿರ್ಧರಮಾಡಬೇಕೆನ್ನುವುದು ಸೂಕ್ತವಾಗಿದೆ. ಪ್ಲಾನಿಂಗ್ ಕಮಿಷನ್ ಅವರ ಸೂಚನೆಯೂ ಹೀಗೆಯೇ ಇದೆ. ಕ್ಷೇತ್ರದಮೇಲೆ ಮಾಡಬೇಕಾದರೆ standard acre ಎನ್ನುವುದು ಯಾವುದು, ಎಂದು ಗೊತ್ತುಮಾಡಿ, ಉತ್ತಮ, ಮಧ್ಯಮ ಮತ್ತು ಕನಿಷ್ಠ ಎಂದು ಭೂಮಿಯನ್ನು ವಿಂಗಡಿಸಿ, ಅದರ ಆಧಾರದಮೇಲೆ ಪರಿಮಿತಿಯನ್ನು ಮಾಡಬೇಕಾಗುತ್ತದೆಅದು ಸರಿಯಿಲ್ಲ. ಇದರಿಂದ ಅನೇಕ ತರಹ ಅನ್ಯಾಯಗಳು ನಡೆಯುತ್ತವೆ. ಆದುದರಿಂದ ಮಸೂದೆಯಲ್ಲಿರುವ ಸೂಚನೆ ಸರಿಯಾಗಿದೆ ಎಂಬುದು ನನ್ನ ಸಲಹೆ.

80ನೆಯ ಪುಟದೊಳಗೆ ಲ್ಯಾಂಡ್ ಕಮಿಷನ್ನಿನಲ್ಲಿ ಯಾರು ಯಾರು ಇರುತ್ತಾರೆಂದು ಕೊಟ್ಟಿದೆ. ಮೂರು ಸಾವಿರದ ಐದುನೂರು ಪಗಾರದ ಒಬ್ಬ ಹೈಕೋರ್ಟ್ ಜಡ್ಜ್ ಚೇರ್‌ಮನ್ ಆಗಿರಬೇಕೆಂದು ಹೇಳುತ್ತಾರೆ. 3,500 ಪಗಾರ ಬಹಳ ಜಾಸ್ತಿ. 2,500 ರೂಪಾಯಿ ಅಥವಾ 3,000 ರೂಪಾಯಿ ಪಗಾರವಿರಬಹುದೆಂದು ನಾನು ಸೂಚನೆ ಮಾಡುತ್ತೇನೆ.

ಲ್ಯಾಂಡ್ ಕಮಿಷನ್ನಿಗೆ ಮೂರು ವರ್ಷದ ಅವಧಿಯನ್ನು ನಿಗದಿಮಾಡಿದ್ದಾರೆ. ಹೈದರಾಬಾದಿನಲ್ಲಿ ನಾಲ್ಕಾರು ತಿಂಗಳೊಳಗೆ ಇಡೀ ದೇಶವನ್ನು ಅಡ್ಡಾಡಿ ಹಿಂದೆ ಅಲ್ಲಿ ನೇಮಕವಾಗಿದ್ದ ಲ್ಯಾಂಡ್ ಕಮಿಷನ್ ಅವರು ಇಂಥಿಂಥ ಪ್ರದೇಶ ಹೀಗಿದೆ, ಎಂಬ ವಿವರಗಳನ್ನೊಳಗೊಂಡಂಥ ಒಂದು ವರದಿಯನ್ನು ಕೊಟ್ಟರು. ಹೈದರಾಬಾದ್ ಪ್ರಾಂತ ಸಣ್ಣದು. ಆದುದರಿಂದ ನಮ್ಮ ರಾಜ್ಯದಲ್ಲಿ ಒಂದು ವರ್ಷದೊಳಗೆ ಈ ಕೆಲಸ ಮುಗಿಯಬಹುದು ಎಂದು ನನಗೆ ಖಾತ್ರಿ ಇದೆ. ಈ ಕಾರಣದಿಂದ ಮೂರು ವರ್ಷಕಾಲ ಲ್ಯಾಂಡ್ ಕಮಿಷನ್ ನೇಮಿಸಬಾರದು. ಒಂದು ವರ್ಷ ಕಾಲಕ್ಕೆ ನೇಮಿಸಿದರೆ ಸಾಕು. ಲ್ಯಾಂಡ್ ಕಮಿಷನ್ ನೇಮಕವಾಗಬೇಕು. ಪರಿಮಿತಿಯನ್ನು ಉತ್ಪನ್ನದ ಬಾಬಿನಮೇಲೆ ಗೊತ್ತುಮಾಡುವುದು ಸರಿ, ಈ ಪ್ರಕಾರ ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ನನ್ನ ಸೂಚನೆ ಇದೆ.

ಇನ್ನು ನಮ್ಮ ದೇಶದೊಳಗೆ ಜಮೀನಿನ ಉತ್ಪನ್ನ ಸಾಕಷ್ಟು ಹೆಚ್ಚಬೇಕೆಂಬ ಆಸೆ ಕೈಗೂಡಬೇಕಾದರೆ, ಈ ಕಾಯಿದೆ ಪರಿಣಾಮಕಾರಿಯಾಗಿ ಜಾರಿಗೆ ಬರಬೇಕು ಮತ್ತು ಸಾರ್ವಜನಿಕರಿಂದ ಎಲ್ಲ ರೀತಿಯ ಸಹಕಾರ ದೊರೆಯಬೇಕಾದುದು ಅವಶ್ಯಕ. ಇದರಿಂದ ನಮ್ಮ ಉದ್ದೇಶ ಸಾಧನೆಯಾಗುತ್ತದೆ. ಇಷ್ಟು ಮಾತ್ರ ಹೇಳಿ ನನಗೆ ಮಾತನಾಡಲು ಅವಕಾಶಮಾಡಿ ಕೊಟ್ಟುದಕ್ಕಾಗಿ ಅಧ್ಯಕ್ಷರಿಗೆ ವಂದಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ.

†ಶ್ರೀ ಬಿ. ಕೆ. ನಾಗೂರ್ (ಬಿಜಾಪುರ).—ಮಾನ್ಯ ಸಭಾಪತಿಗಳೇ, ಇಂದು ಮಾತನಾಡಲಿಕ್ಕೆ ನನಗೆ ಹೆಚ್ಚು ಹುರುಪು ಮತ್ತು ಸಂತೋಷವೆನ್ನಿಸುತ್ತದೆ. ಏಕೆಂದರೆ ನಮ್ಮ ಮಾನ್ಯ ಸಭಾಪತಿಗಳು ಇಂಗ್ಲೆಂಡಿಗೆ ಹೋಗಿ ಬಂದನಂತರ ಇಂಗ್ಲೆಂಡಿನ ಪಾರ್ಲಿಮೆಂಟಿನಲ್ಲಿ ಸದಸ್ಯರು ಯಾವ ರೀತಿಯಲ್ಲಿ ಭಾಷಣ ಮಾಡುತ್ತಿದ್ದರು ಎಂಬುದನ್ನೆಲ್ಲ ನೋಡಿಕೊಂಡು ಬಂದಿದ್ದಾರೆ. ಅಲ್ಲಿ ಒಬ್ಬ ಸದಸ್ಯರು ವರ್ಷದಲ್ಲಿ ಎರಡು ಸಲ ಅಥವಾ ಮೂರು ಸಲಕ್ಕಿಂತ ಹೆಚ್ಚಿಗೆ ಮಾತನಾಡುವುದಿಲ್ಲ. ಮಾತನಾಡಿದರೂ ಸಹ 15 ನಿಮಿಷ ಅಥವಾ 20 ನಿಮಿಷಗಳೊಳಗಾಗಿ ಮಾತನಾಡುತ್ತಾರೆ. ನಮ್ಮ ಮುಂದಿರುವುದು ಎಷ್ಟೇ ದೊಡ್ಡ ವಿಷಯವಾದರೂ ಕೂಡ ನಾನು ಕೇವಲ 20 ನಿಮಿಷಗಳಲ್ಲಿ ನನ್ನ ಮಾತನ್ನು ಮುಗಿಸುತ್ತೇನೆ ಎಂದು ಅಧ್ಯಕ್ಷರಿಗೆ ತಿಳಿಸುತ್ತೇನೆ. ಈ ದಿವಸ ನಮ್ಮ ಮುಂದೆ ಇರತಕ್ಕ ಬಿಲ್ಲಿನ ವಿಷಯದಲ್ಲಿ ನನ್ನ ಸ್ವಂತ ಅಭಿಪ್ರಾಯ ಬಡವರು ಬದುಕಬೇಕು, ಶ್ರೀಮಂತರು ಉಳಿಯಬೇಕು. ಈ ತತ್ವದ ಮೇಲೆ ನಾನು ಮಾತನಾಡುತ್ತೇನೆ.

ಅಧ್ಯಕ್ಷರು.—ಗೋಧಿ ಉಳಿಯಬೇಕು, ಹೋಳಿಗೆ ಆಗಬೇಕು ಎಂದ ಹಾಗಾಗುತ್ತವೆ!

ಶ್ರೀ ಬಿ. ಕೆ. ನಾಗೂರ್.—14 ಸಾವಿರ ರೂಪಾಯಿ ಖರ್ಚುಮಾಡಿ, 75 ದಿವಸ ಪ್ರವಾಸಮಾಡಿ 45 ದಿವಸಗಳಲ್ಲಿ ತಯಾರಿಸಿದ ಜತ್ತಿ ಸಮಿತಿಯ ರಿಪೋರ್ಟ್ ಈವಾಗ ಚರ್ಚೆಗೆ ಬಂದಿದೆ. ಈ ವಿಷಯ ಒಮ್ಮೆ ಬಂದು ಹೋಗಿತ್ತು. ಈವಾಗ ಈ ವಿಷಯ ಸಭೆಯ ಮುಂದೆ ಬರುವುದಕ್ಕೆ ಅವಕಾಶವನ್ನು ಕಲ್ಪಿಸಿಕೊಟ್ಟಿದ್ದಕ್ಕಾಗಿ ಮಾನ್ಯ ಕಂದಾಯ ಮಂತ್ರಿಗಳಾದಂಥ ಮಂಜಪ್ಪನವರಿಗೆ ನಾನು ಅಗದಿ ವಿನಯದಿಂದ ಕೇಳಿಕೊಳ್ಳುತ್ತೇನೆ.

ಕೋ-ಆಪರೇಟಿವ್ ಫಾರ್ಮಿಂಗ್ ಎಂದು ತರುತ್ತಿದ್ದೀರಿ. ಕೆರೆ ತೆಗೆಯುತ್ತೇವೆಂದು, ಕೆರೆಯನ್ನು ತೆಗೆಯುವಂಥ ಸ್ಥಾನದಲ್ಲಿ ಬಾವಿಯನ್ನು ಏಕೆ ತೋಡಲಿಕ್ಕೆ ಹೊರಟಿದ್ದೀರಿ? ಕೋ-ಅಪರೇಟಿವ್ ಫಾರ್ಮಿಂಗ್ ತರುವ ಕಾಲದಲ್ಲಿ, ಮುಂದೆ ಎಲ್ಲರೂ ಸಹಕಾರಿ ತತ್ವದ ಮೇಲೆ ಬೆಳೆಯಿರಿ ಎಂದು ಹೇಳುವ ಕಾಲದಲ್ಲಿ ಈ ಕಾಯಿದೆಯನ್ನು ತರುವಂಥ ಅವಶ್ಯಕತೆ ಇರಲಿಲ್ಲವೆನ್ನುವುದು ನನ್ನ ಸ್ವಂತ ಅಭಿಪ್ರಾಯ. ಆ ದೃಷ್ಟಿಯಿಂದ ಮುಂದೆ ಇದರ ಉಪಯೋಗ ಆದೀತು ಎಂದು ನನಗನ್ನಿಸುವುದಿಲ್ಲ. ಈ ವಿಷಯದ ಮೇಲೆ ಹೆಚ್ಚು ಜನ ಮಾತನಾಡುವವರಿರುವುದರಿಂದ ನಾನು ಹೆಚ್ಚುವೇಳೆ ತೆಗೆದುಕೊಳ್ಳುವುದಿಲ್ಲ. ಇದುವರೆಗೂ ಮಾತನಾಡಿರುವವರೆಲ್ಲರೂ ತಮ್ಮ ತಮ್ಮ ಅಭಿಪ್ರಾಯಗಳನ್ನು ಕೊಟ್ಟಿದ್ದಾರೆ.

ನಮಗೆ ಸ್ವಾತಂತ್ರ್ಯ ಬಂದು ಹನ್ನೊಂದು ವರ್ಷಗಳಾದುವು. ಈ ಹನ್ನೊಂದು ವರ್ಷಗಳಲ್ಲಿ ಹೆಚ್ಚು ಬೆಳೆ ತೆಗೆಯಬೇಕೆಂದು ಹೇಳುತ್ತಿದ್ದರೂ ಎಷ್ಟು ಬೆಳೆದಿದ್ದೀರಿ? ಹೆಚ್ಚು ಬೆಳೆಯಬೇಕು ಎನ್ನುವುದರ ಸಲುವಾಗಿ ವಿಶ್ವಬ್ಯಾಂಕಿನಿಂದ ಸಾಕಷ್ಟು ಹಣ ತೆಗೆದುಕೊಂಡು ಬಂದು ಹಿಂದೂಸ್ಥಾನದಲ್ಲಿ ಖರ್ಚುಮಾಡಿದ್ದರೂ, ಅಭಿವೃದ್ಧಿಗೆ ಬಂದಿಲ್ಲ. ಸರಿಯಾಗಿ ಬೆಳೆಯನ್ನು ತೆಗೆದುಕೊಂಡಿಲ್ಲ. ಅದಕ್ಕೆ ಕಾರಣಗಳು ನೂರೆಂಟಿರಬಹುದು. ಮುಖ್ಯವಾದ ಕಾರಣವೆಂದರೆ ಪ್ರಚಾರಕ್ಕೆ ಹಣ ಖರ್ಚಾಗುತ್ತದೆ. ಆದರೆ ಸರಿಯಾದ ರೀತಿಯಲ್ಲಿ ಪ್ರಚಾರ ಕಾರ್ಯ ನಡೆದಿಲ್ಲ. ಇದಕ್ಕೆ ಒಂದು ಉದಾಹರಣೆಯನ್ನು ಕೊಡಬಹುದು. ಮಂತ್ರಿಗಳು ಬರುತ್ತಾರೆ, ಊರಬಳಿ ಎಲ್ಲರೂ ಗಿಡಗಳನ್ನು ಹಚ್ಚಬೇಕೆಂಬುದಾಗಿ ಡಂಗುರ ಹೊಡೆಯಲು ತಿಳಿಸಿದರು. ಅವನು ಮಂತ್ರಿಗಳು ಬರುತ್ತಾರೆ, ಎಲ್ಲರೂ ಗಿಡ ಹತ್ತಿರಿ ಎಂದು ಸಾರಿದನು. ಮಂತ್ರಿಗಳು ಬರುವ ವೇಳೆಗೆ ಜನರೆಲ್ಲ ಗಿಡಗಳಮೇಲೆ ಕುಳಿತಿದ್ದರು. ಡಂಗುರ ಹೊಡೆದುದರ ಸಲುವಾಗಿ ತಾವು ಗಿಡ ಹತ್ತಿರುವುದಾಗಿ ಜನರು ತಿಳಿಸಿದರು. ಈ ರೀತಿಯ ಪ್ರಚಾರವಾಗಬಾರದು. ಹಳ್ಳಿಯ ಜನಗಳಿಗೆ ತಿಳುವಳಿಕೆ ಕೊಡುವಂಥ ಅವರಿಗೆ ತಿಳಿಯುವಂಥ ರೀತಿಯಲ್ಲಿ ಪ್ರಚಾರ ಕಾರ್ಯ ನಡೆಯಬೇಕು. ಆ ರೀತಿ ಇಲ್ಲದೆಹೋದರೆ ಸರ್ಕಾರದಿಂದ ಸಾಕಷ್ಟು ಹಣ ಖರ್ಚಾಗಿ ಹೋದರೂ ಏನೂ ಉಪಯೋಗವಾಗುವುದಿಲ್ಲವೆಂದು ಹೇಳುತ್ತೇನೆ.

ಒಂದು ಮಾತನ್ನು ನಮ್ಮ ಹಿಂದಿನ ಉಪ ಮಂತ್ರಿಗಳು ಹೇಳಿದರು. ಕಾಂಪೆನ್ಸೇಷನ್ ಹಣವನ್ನು ಕೊಡುವುದಕ್ಕೆ ಸರ್ಕಾರದವರು ಜವಾಬ್ದಾರಿ ತೆಗೆದುಕೊಳ್ಳಬಾರದು, ಅವರವರಿಗೇ ಹವಾಲತೆ ಹಾಕಿ

ಕೊಡಬೇಕು ಎಂದು ಹೇಳಿದರು. ಇದು ಬಹಳ ವಿಚಿತ್ರವಾಗಿದೆ. ಹೊಲವನ್ನು ಕಳೆದುಕೊಂಡು, ತನಗೆ ಬರಬೇಕಾದ ಹಣಕ್ಕೆ ಸರ್ಕಾರದವರ ಜವಾಬ್ದಾರಿ ಇಲ್ಲವೆಂದರೆ ಹೊಲವನ್ನು ಕಳೆದುಕೊಂಡವರ ಪರಿಸ್ಥಿತಿ ಏನು ? ಈರೀತಿ ಸರ್ಕಾರದವರು ಜವಾಬ್ದಾರಿಯನ್ನು ವಹಿಸಿಕೊಳ್ಳದೆ ಅವರವರಿಗೇ ಹವಾಲತೆಮಾಡಿ ಅವರಿಗೇ ಜವಾಬ್ದಾರಿಯನ್ನು ಕೊಡಬೇಕೆಂಬ ಹೇಳಿಕೆಗಳು ಒಳ್ಳೆಯದಲ್ಲ. ಚುನಾವಣೆಗಳ ಕಾಲಬಂದಾಗ ಚುನಾವಣೆಗೆ ನಿಂತಿರುವವರು ಹಳ್ಳಿಗಳಿಗೆ ಒಂದು ಕಂತು ನೋಟ್ ಬಿಡಿಸುತ್ತೇವೆ, ಕಂತನ್ನ ಕೊಡಬೇಡ ಎಂದು ರೈತನಿಗೆ ಹೇಳಿ ಅವನನ್ನು ಓಟು ಕೇಳಬಹುದು. ಮತ್ತೊಬ್ಬರೂ ಬಂದು ಅದೇರೀತಿ ಕೇಳಬಹುದು. ಕಾಂಗ್ರೆಸ್ ಪಕ್ಷ ಸಹ ಕೇಳಬಹುದು. ಕೋ-ಆಪ ರೇಟಿವ್ ಫಾರ್ಮಿಂಗ್ ಟೆನೆನ್ಸಿ ಇವುಗಳ ಬಗ್ಗೆ ಜನತೆಯ ಅಭಿಪ್ರಾಯವೇನಿದೆ ಎನ್ನುವುದು ಮುಂದೆ ಗೊತ್ತಾಗುತ್ತದೆ. 1962ನೆಯ ಇಸವಿ ಕಾಲಕ್ಕೆ ಪರಿಸ್ಥಿತಿ ಹೇಗೆ ಬರುತ್ತದೆಂದು ಹೇಳಲಿಕ್ಕೆ ಬರುವುದಿಲ್ಲ. ಇಂಥ ಪರಿಸ್ಥಿತಿಯಲ್ಲಿ ಬೇರೆಯ ಜನರೂ, ಕಾಂಗ್ರೆಸ್‌ನವರೂ ಇದರ ಉಪಯೋಗವನ್ನು ಏಕೆ ತೆಗೆದುಕೊಳ್ಳ ಬಾರದೆಂದು ಕೇಳುತ್ತೇನೆ. ಆದುದರಿಂದ ಜಮೀನನ್ನು ಒಬ್ಬರಿಂದ ತೆಗೆದುಕೊಂಡರೆ, ಮಾಲೀಕರಿಗೆ ಹಣವನ್ನು ಸರ್ಕಾರವೇ ಕೊಡಬೇಕು. ಜಮೀನು ತೆಗೆದುಕೊಳ್ಳುತ್ತೇವೆ, ರೊಕ್ಕವನ್ನು ರೈತನಿಂದ ಕೊಡಿಸುತ್ತೇವೆಂದರೆ ಉಪಯೋಗವಾಗುವುದಿಲ್ಲ. ಇದರಲ್ಲಿ ಒಂದು ಮಾತನ್ನು ಹೇಳಬೇಕಾಗಿದೆ. ಹೆಚ್ಚು ಜಮೀನು ಇದ್ದವರಿಂದ ಕಸಿದುಕೊಂಡು ಬಡಬಗ್ಗರಿಗೆ ಕೊಡಿ. ಯಾರು ಯಾರು ಯಾವ ಯಾವ ಮನೆಗಳಲ್ಲಿದ್ದಾರೆ ಅವರೇ ಆಯಾ ಮನೆಗಳ ಮಾಲೀಕರು ಎಂದು ಒಂದು ಕಾಯಿದೆಯನ್ನು ತಂದರೆ ಒಳ್ಳೆಯದಾಗು ತ್ತದೆ. ಅಂಥ ಕಾನೂನನ್ನು ತಂದರೆ ಮಾನ್ಯ ಮಂತ್ರಿಗಳಲ್ಲಿ ಶ್ರೀ ಕಡಿದಾಳ್ ಮಂಜಪ್ಪನವರಿಗೆ ಮತ್ತು ಶ್ರೀ ಟಿ. ಮರಿಯಪ್ಪನವರಿಗೆ ಅನುಕೂಲವಾಗುತ್ತದೆಯೋ ಇಲ್ಲವೋ. ಉಳಿದವರಿಗೆಲ್ಲ ಅವರಿರುವ ಸರ್ಕಾರಿ ಬಂಗಲೆಗಳು ಅವರವರಿಗೇ ಆದರೆ ಅದೂ ಒಂದು ತರಹ ಸಂತೋಷ.

ಇನ್ನು ಸೀಲಿಂಗಿನ ಬಗ್ಗೆ ಹೇಳುವುದಾದರೆ, ಕಾನೂನಿನ ಪ್ರಕಾರ ಸ್ವಂತ ಸಾಗುವಳಿಮಾಡುವ ಭೂಮಿಯ ಒಡೆಯರಿಗೂ ಸೀಲಿಂಗ್ ಅನ್ವಯಿಸುತ್ತದೆ. ಒಳ್ಳೆಯ ರೀತಿಯಿಂದ ಸಾಗುವಳಿ ಮಾಡುವಂತಹ ಭೂಒಡೆಯರ ಭೂಮಿಯನ್ನ ಭೂಮಿ ಇಲ್ಲದವರಿಗೆ ಬಲವಂತವಾಗಿ ಕೊಡಿಸುವ ವಿಚಾರವಿದೆ. ಈ ಬಲವಂತಿಕೆಗೆ ಒಂದು ನೈತಿಕ ತಳಹದಿ ಇರಬೇಕಾದುದು ಅಗತ. ಅನಾವಶ್ಯಕವಾಗಿ ಬಲವಂತದಿಂದ ಒಬ್ಬರ ಭೂಮಿಯನ್ನು ಇನ್ನೊಬ್ಬರಿಗೆ ಕೊಡಿಸುವುದು ನ್ಯಾಯವೆನಿಸದು. ಈ ಕೆಳಗೆ ನಾನು ಕೆಲವು ಸೂಚನೆಗಳನ್ನು ಮಾಡುತ್ತೇನೆ. ಇಂತಹ ಸಂದರ್ಭಗಳಲ್ಲಿ ಮಾತ್ರ ಭೂಮಿಯನ್ನು ಕಸಿದುಕೊಳ್ಳಲು ಸರಕಾರದ ಹಕ್ಕು ಉಂಟಾಗುವುದು ಎಂದು ನನ್ನ ಅಭಿಪ್ರಾಯ.

(1) ಅವ್ಯವಸ್ಥಿತ ಸಾಗುವಳಿಯಿಂದ ಭೂಮಿಯ ಫಲವತ್ತತೆಗೆ ಧಕ್ಕೆ ಬಂದಿದೆ. ಇಂತಹ ಜಮೀನನ್ನು ನೋಡಿಕೊಳ್ಳದಿದ್ದರೆ ಈ ರೀತಿಯ ಕಷ್ಟಗಳಾಗುತ್ತದೆ ಎನ್ನಲು ಅಡ್ಡಿ ಇಲ್ಲ.

(2) ಸಾಗುವಳಿ ಮಾಡುವವನ ವಾಸಸ್ಥಳ ಭೂಮಿಯಿಂದ ಐದು ಮೈಲುಗಳ ದೂರವಿದ್ದರೆ ಸರಕಾರಕ್ಕೆ ಹಕ್ಕುಂಟು.

(3) ಗೇಣಿದಾರರಿಗೆ ಸಾಗುಮಾಡುತ್ತಿದ್ದರೆ;

(4) ಬೇರೆ ಉದ್ಯೋಗವನ್ನು ಅನುಸರಿಸುತ್ತಿದ್ದರೆ;

(5) ಸರಕಾರಿ ನೌಕರನಾಗಿದ್ದರೆ, ಇಲ್ಲವೆ ಪೆನ್‌ಷನ್ನು ಪ್ರಾವಿಡೆಂಟು ಫಂಡದ ಲಾಭವಿರುವ ನೌಕರುದಾರನಾಗಿದ್ದರೆ;

(6) ಶಹರದಲ್ಲಿ ವಾಸವಾಗಿದ್ದು ಅಲ್ಲಿ ಮನೆಗಳ ಬಾಡಿಗೆಯ ಆದಾಯದಮೇಲೆ ಉಪಜೀವಿಸುತ್ತಿದ್ದರೆ, ಇದರಮೇಲೆ ಸೀಲಿಂಗ್ ಇರಬೇಕು.

ಸೀಲಿಂಗ್ ಎಷ್ಟು ಎಂದು ಗೊತ್ತುಪಡಿಸಲು ಲ್ಯಾಂಡು ಕಮಿಷನ್ನು ಅನವಶ್ಯ. ಆಯಾ ಭಾಗದ ಕಂದಾಯ ಒಕ್ಕಲುತನದ ಶಾಖೆಗೆ ಅಧಿಕಾರಿಗಳು ಕೆಲವೊಂದು ನಿಯಮಗಳ ಆಧಾರದ ಮೇಲೆ ಪ್ರಮಾಣ ಗೊತ್ತುಮಾಡಬಲ್ಲರು. ಕಂದಾಯದ ಮೊತ್ತ, ಬೆಳೆಯ ಅಂದಾಜು, ಭೂಮಿಯ ಬೆಲೆ, ಲಾವಣಿಯ ದರ, ಭೂಮಿಯ ವಿಸ್ತಾರ, ಇವುಗಳ ಮೇಲೆ ಪರಿಶೀಲಿಸಬೇಕು.

ಭೂಮಿಯ ಗುಣ ಹಳ್ಳಿಹಳ್ಳಿಗೆ, ಹೊಲಹೊಲಕ್ಕೆ ಹೆಚ್ಚು ಕಡಮೆಯಾಗುವುದರಿಂದ ಈ ಕಾರ್ಯವನ್ನು ಒಕ್ಕಲುತನ ಶಾಖೆಯವರೇ ಸಮರ್ಪಕವಾಗಿ ನಿರ್ವಹಿಸಬಲ್ಲರು. ಕಂದಾಯ ಶಾಖೆಯವರು ಅವರಿಗೆ ಅಂಕಿ ಸಂಖ್ಯೆ ಒದಗಿಸಬೇಕು. ಹೀಗೆ ಮಾಡದೆ ಸಾರ್ವತ್ರಿಕವಾಗಿ ತಾಲ್ಲೂಕಿಗೆ ಒಂದೇ ಬಗೆಯ ಸೀಲಿಂಗು ಅನ್ವಯಿಸುವುದು ಯೋಗ್ಯವಲ್ಲ. ಲ್ಯಾಂಡು ಕಮಿಷನ್ನು ಹಳ್ಳಿಹಳ್ಳಿಗೆ ಹೋಗಿ ಕೆಲಸ ಮಾಡಲು ಸಾಧ್ಯವಿಲ್ಲ. ಇದು ಸಾಕ್ಷಿ ಪುರಾವೆಗಳನ್ನು ಕೇಳಿ ನಿರ್ಣಯಿಸುವ ವಿಷಯವೂ ಅಲ್ಲ. ನ್ಯಾಯಾಧೀಶರು, ಕಂದಾಯದ ಆಡಳಿತಗಾರರು ಕಾಯಿದೆ ಹೇಳಬಲ್ಲರೇ ಹೊರತು ಭೂಮಿಯ ಗುಣದ ಬಗ್ಗೆ ನಿರ್ಣಯ ಕೊಡಲಾರರು.

ಟೆನೆನ್ಸಿ ಕಾಯಿದೆಯು ಒಂದು ಕುಟುಂಬಕ್ಕೆ ಕನಿಷ್ಠ ಇರಬೇಕಾದಷ್ಟೇ ಭೂಮಿ ಇರುವ ಯಾವ ಭೂ ಒಡೆಯನಿಗೂ ಅನ್ವಯಿಸಕೂಡದು. ಇದರಿಂದ ಅಲ್ಪಸ್ವಲ್ಪ ಭೂಮಿಯ ಆಶ್ರಯವಿರುವ ಎಲ್ಲ ಸಣ್ಣ ಪುಟ್ಟ ನೌಕರುದಾರರಿಗೆ ಹಿತವಾಗುವುದು. ಆದರೆ ಅವರು ತಮ್ಮ ಭೂಮಿಯನ್ನು ಕರಿಕೆ ದಡ್ಡು ಮಾಡಿದ್ದಾರೆಂದು ಒಕ್ಕಲುತನ ಶಾಖೆಯವರು ಕಂದಾಯದ ಶಾಖೆಗೆ ತಿಳಿಸಿದ್ದಾದರೆ ಈ ಕಾಯಿದೆಯನ್ನು ಅವರಿಗೂ ಅನ್ವಯಿಸಬೇಕು. ಭೂಮಿ ಯಾರ ಒಡೆತನದ್ದೇ ಇರಲಿ ಅದರ ಪೂರ್ಣ ಫಲ ಸಮಾಜಕ್ಕೇ ದೊರೆಯಲೇಬೇಕು. ಆದುದರಿಂದ ಭೂಮಿಯನ್ನು ಅಲಕ್ಷಿಸುವವನ ಭೂಮಿ ಆಸಕ್ತಿಯಿಂದ ದುಡಿಯುವವನಿಗೇ ಸಿಕ್ಕುವಂತಾಗಬೇಕು.

ಗೇಣಿದಾರರು ಹೊಲವನ್ನು ಬೀಳುಗೆಡವಿದರೆ ಅವರ ಹಕ್ಕು ವಜಾ ಆಗತಕ್ಕದ್ದು. ಹೀಗೆ ಹಕ್ಕು ವಜಾ ಆದುದರ ಲಾಭ ಭೂ ಒಡೆಯನಿಗೇ ಹೋಗಕೂಡದು. ಊರೊಳಗೆ ಉತ್ತಮ ಒಕ್ಕಲಿಗನೆಂದು ಹೆಸರುಗಳಿಸಿದವನಿಗೆ ಭೂಮಿ ಹೋಗತಕ್ಕದ್ದು. ಇದಕ್ಕಾಗಿ ಹಳ್ಳಿಯಲ್ಲಿ ಹೆಸರಾದ ಉತ್ತಮ ಒಕ್ಕಲಗರ ಯಾದಿಯೊಂದನ್ನು ಒಕ್ಕಲತನದ ಶಾಖೆಯವರು ಪ್ರತಿವರ್ಷ ಸಿದ್ಧಪಡಿಸತಕ್ಕದು . ಈ ಕಾರ್ಯವನ್ನು ಕಂದಾಯದ ಅಧಿಕಾರಿಗಳಿಗೆ ಕೊಡಕೂಡದು. ಟೆನೆನ್ಸಿ ಕಾಯಿದೆ ಅನ್ವಯಿಸುವ ಎಲ್ಲ ಭೂಮಿಯೂ ಆಯಾ ಹಳ್ಳಿಯ ಉತ್ತಮ ಒಕಲಿಗರಿಗೇ ಕೊಡತಕ್ಕದ್ದು. ಎಂದರೆ ಭೂಸುಧಾರಣೆಗೆ ಹಾದಿಯಾಗುವುದು.

ಲಾವಣಿ ರಕಮನ್ನು ಗೇಣಿದಾರರು ಭೂಮಿಯ ಒಡೆಯರ ಲೆಕ್ಕಕ್ಕೆ ಯಾವುದೊಂದು ಸಹಕಾರಿ ಬ್ಯಾಂಕಿನಲ್ಲಿ Deposit ಮಾಡಬೇಕು. ಇದರಿಂದ ರಶೀದಿ ಕೊಟ್ಟಿಲ್ಲವೇ ಕೊಟ್ಟಿದೆಯೋ ಎಂಬ ವಾದಕ್ಕೆ ಆಸ್ಪದ

(ಶ್ರೀ ಬಿ. ಕೆ. ನಾಗೂರ್)

ಉಳಿಯುವುದಿಲ್ಲ. ರಶೀತಿಯನ್ನು ಕಾಯ್ದಿಡುವ ಅಗತ್ಯವೂ ಬೀಳುವುದಿಲ್ಲ.

ಮೂರು ವರ್ಷ ಲಾವಣಿಯನ್ನು ಗೇಣಿದಾರ ಕೊಡದೇ ಇದ್ದರೆ ಅವನ ಹಕ್ಕು ಪೂರ್ಣವಾಗಿ ವಜಾ ಆಗಬೇಕು. ಅವನಿಗೆ ನವಲತ್ತು ಕೊಡಲು ಕೋರ್ಟಿಗೆ ಆಸ್ಪದವಿರಬಾರದು, ಇಂತಹ ಆಸ್ಪದವಿದ್ದರೆ ಭೂಮಿಯ ಒಡೆಯನು ಹಾಗೂ ಗೇಣಿದಾರನು ತಮ್ಮ ವಾದವನ್ನು ಕೆಳ ಕೋರ್ಟಿನಿಂದ ಹೈಕೋರ್ಟಿನವರೆಗೆ ಒಯ್ಯಲು ಕಾರಣವಾಗುತ್ತವೆ. ಇದರಿಂದ ರೈತರು ಹಾಗೂ ಭೂಮಿ ಒಡೆಯರು ಇಬ್ಬರಿಗೂ ಹಾನಿಯುಂಟಾಗುತ್ತದೆ.

ನೋಟೀಸು ಕೊಡುವ ಬಗ್ಗೆ ಕಟ್ಟುನಿಟ್ಟಾದ ನಿಯಮ ಅನವಶ್ಯ, ಜಗಳಕ್ಕೆ ಮೂಲ ಟೆನೆನ್ಸಿ ಹಕ್ಕುಗಳನ್ನು ನಿರ್ಧರಿಸುವ ಅಧಿಕಾರಿಗಳನ್ನು ಮೂಲತಃ ಕಂದಾಯ ಅಧಿಕಾರಿಗಳಿಗೆ ಕೊಟ್ಟದ್ದು ಯೋಗ್ಯವೆನಿಸಿದರೂ ಅಪೀಲನ್ನು ವಿಚಾರಣೆ ಮಾಡುವ ಅಧಿಕಾರವನ್ನು ಅವರಿಗೆ ಕೊಡಕೂಡದು. ಈ ಅಧಿಕಾರವನ್ನು ಜಿಲ್ಲೆಯಲ್ಲಿನ ಸಿವಿಲ್ ಕೋರ್ಟುಗಳಿಗೆ ಕೊಡತಕ್ಕದ್ದು ಮತ್ತು ಆ ಕೋರ್ಟುಗಳು ಕೊಡುವ ನಿರ್ಣಯವೇ ಕೊನೆಯ ನಿರ್ಣಯವಾಗತಕ್ಕದ್ದು.

ನನ್ನ ವೈಯಕ್ತಿಕ ಅಭಿಪ್ರಾಯದ ಪ್ರಕಾರ ಹೇಳಬೇಕೆಂದಾಗ ಮಾನ್ಯ ಅಧ್ಯಕ್ಷರು, ''ತಾವು ಡಾಕ್ಟರು, ಇದರಲ್ಲಿ Benefit ಏನು'' ಎಂದು ಕೇಳಿದರು. ಆದರೂ ನಾವು ಒಕ್ಕಲಿಗರು, ರೈತರೆಲ್ಲರೂ ಕೇಳುತ್ತಾರೆ, ವ್ಯವಸಾಯದ ದೃಷ್ಟಿಯಿಂದ ನನ್ನ ಸ್ವಂತ ಅಭಿಪ್ರಾಯಗಳನ್ನು ತಿಳಿಸಬೇಕೆಂದು ಹೇಳುತ್ತಿದ್ದೇನೆ. ನಿನ್ನೆಯಿಂದ ಮಾತನಾಡಿದ ಎಷ್ಟೋ ಜನ ಮಿತ್ರರು ಬಡವರು ಬದುಕಬೇಕು ಶ್ರೀಮಂತರೂ ಉಳಿದುಕೊಳ್ಳಬೇಕು ಎನ್ನುವ ಬಗ್ಗೆ ಹೇಳಿದ್ದಾರೆ. ಸಾವಿರಾರು ಎಕರೆ ಸಾಗುವಳಿಯಾಗದೆ ಇರುವ ಭೂಮಿಯನ್ನು ಸರಕಾರ ತೆಗೆದುಕೊಳ್ಳಲಿ ನನ್ನ ಅಭ್ಯಂತರವಿಲ್ಲ. ಈ ಕಾಯಿದೆಯನ್ನು ಮಾಡುವಾಗ ನಮ್ಮ ಮಾನ್ಯ ಮಂತ್ರಿಗಳಾದ ಶ್ರೀ ಮಂಜಪ್ಪನವರು ಬಹಳ ಸೂಕ್ಷ್ಮ ದೃಷ್ಟಿಯಿಂದ ವಿಚಾರ ಮಾಡೀ ಮಾಡೀ ಅವರೂ ಕೂಡ ಅತಿ ತೆಳ್ಳಗೆ ಆಗಿಬಿಟ್ಟಿದ್ದಾರೆ. ಇನ್ನೂ ಹೆಚ್ಚಿಗೆ ವಿಚಾರ ಮಾಡಲಿಕ್ಕೆ ಹೋದರೆ ಅವರೆಲ್ಲಿ ಕಾಯಿಲೆ ಬೀಳುತ್ತಾರೋ ಎನ್ನುವ ಸಂದೇಹ ನನಗೆ ಬರುತ್ತಿದೆ.

ಶ್ರೀ ಕಡಿದಾಳ್ ಮಂಜಪ್ಪ.—ತಮ್ಮ ಅಭಿಮಾನಕ್ಕಾಗಿ ನಾನು ಚಿರಋಣಿ (ನಗು).

ಶ್ರೀ ಬಿ. ಕೆ. ನಾಗೂರ್.—ಕರ್ನಾಟಕ ಮಾತೆಯ ಆಶೀರ್ವಾದ ಅವರ ಮೇಲೆ ಸಂಪೂರ್ಣವಾಗಿದೆ ಎಂದು ನಾನು ಒಪ್ಪುತ್ತೇನೆ.

ಈ ದೃಷ್ಟಿಯಿಂದ ಬಿಜಾಪುರ ಜಿಲ್ಲೆಯ ಉದಾಹರಣೆಯನ್ನು ಕೊಡಬೇಕಾದರೆ ಒಂದು ಜಾತಿಯ ಜನ ಬಹಳ ಮುಂದುವರಿದವರು ಇದೇ ಟೆನೆನ್ಸಿ ಕಾನೂನಿನ ಸಲುವಾಗಿ ಒಬ್ಬ ಕುಲಕರಣಿಯಂತಹವರನ್ನು ಕತ್ತರಿಸಿ ಖೂನು ಮಾಡುವಂತಹ ಸ್ಥಿತಿ ಬಂದಿತ್ತು. ಇಲ್ಲಿ ಭೂಮಾಲೀಕರಲ್ಲಿ ಅಂತಹ ಪರಿಸ್ಥಿತಿ ಕಂಡುಬರುವುದಿಲ್ಲ. ಈ ಟೆನೆನ್ಸಿ ಕಾನೂನಿನ ಕಾರಣವಾಗಿ ಒಬ ಕುಲಕರಣಿಯನ್ನು ತುಂಡು ಮಾಡಿದ ಸಲುವಾಗಿ ನಾನು ಹೇಳುವುದು ಮಸೂದೆ ಮಾಡುವಾಗ ಬಹಳ ಆಳವಾಗಿ ಯೋಚಿಸಿ ಮಾಡಬೇಕಾಗಿದೆ. ಜನ ಸಾಮಾನ್ಯರಿಗೆ ಅನುಕೂಲವಾಗುವಂತಹ ಕಾನೂನನ್ನು ಮಾಡಿ ಅವರ ತೊಂದರೆಗಳನ್ನು ತಪ್ಪಿಸುವಂತ ಮಾಡಬೇಕು.

ಮತ್ತೆ ರೆವೆನ್ಯೂ ಟ್ರಿಬ್ಯುನಲ್ಲು ತೀರಾ ಅನವಶ್ಯಕ. ಹಳ್ಳಿಹಳ್ಳಿಗೂ ಗೇಣಿದಾರರ ಸಹಕಾರಿ ಸಂಘಗಳನ್ನು ಸಂಘಟಿಸುವ ಜವಾಬ್ದಾರಿಯನ್ನು ಕಂದಾಯ ಶಾಖೆಯ ಅಧಿಕಾರಿಗಳಿಗೆ ಹಾಗೂ ಸಹಕಾರಿ ಶಾಖೆಯ ಅಧಿಕಾರಿಗಳಿಗೆ ಒಪ್ಪಿಸಬೇಕು. ಅಂತಹ ಸಹಕಾರಿ ಸಂಘಗಳ ಪ್ರೋತ್ಸಾಹಕ್ಕಾಗಿ ಸೂಕ್ತ ಅನುಕೂಲತೆಗಳನ್ನು ಒದಗುವಂತೆ ಮಾಡಿ ಈ ಕಾಯಿದೆಯಲ್ಲಿ ಕಾಣಿಸಲ್ಪಡಬೇಕು.

ಸಾಗುವಳಿಯಾಗದ ಭೂಮಿಯ ವ್ಯವಸ್ಥೆಯನ್ನು ಸರಕಾರ ತೆಗೆದುಕೊಳ್ಳಬಹುದು ಎಂಬ ಮಾತು ಯೋಗ್ಯವೇ ಸರಿ. ಆದರೆ ಈ ಕಾನೂನು ಇದುವರೆಗೆ ಕೇವಲ ಪುಸ್ತಕದಲ್ಲಿಯೇ ಉಳಿದಿದೆ. ಮುಂಬೈ ಹಾಗೂ ಹೈದರಾಬಾದು ಪ್ರದೇಶದಲ್ಲಿ ಈ ಕಾನೂನು ಇದ್ದು ಹತ್ತು ವರ್ಷಗಳಾಗಿದ್ದರೂ ಸರಕಾರ ಎಲ್ಲಿಯೂ ಒಂದು ಗೇಣು ಭೂಮಿಯನ್ನೂ ತನ್ನ ವಶಕ್ಕೆ ತೆಗೆದುಕೊಂಡು ಅದರ ವ್ಯವಸ್ಥೆ ಮಾಡಿಲ್ಲ. ಆದುದರಿಂದ ಈ ಬಗ್ಗೆ ಇರುವ ಆರನೆಯ ಪ್ರಕರಣವನ್ನು ಪೂರ್ಣವಾಗಿ ತೆಗೆದುಹಾಕಬೇಕು. ಇಲ್ಲದಿದ್ದರೆ ಸರಕಾರ ಈ ಕಾನೂನನ್ನು ಉಪಯೋಗಿಸುವ ಆಶ್ವಾಸನ ಕೊಡಬೇಕು.

ಭೂಮಿಯ ಒಡೆಯರಿಗೆ ಕೊಡತಕ್ಕ ಮೊತ್ತವನ್ನು ಕಂದಾಯದ ಆಧಾರದ ಮೇಲೆ ಗೊತ್ತುಪಡಿಸಬೇಕು. ಈ ಕಾರ್ಯವನ್ನು ಟ್ರಿಬ್ಯುನಲ್ಲಿಗೆ ಕೊಡಬಾರದು. ಅದರಿಂದ ಭೂಮಿಯ ಒಡೆಯರನ್ನು ಅನವಶ್ಯಕ ಕೋರ್ಟಿನ ವೆಚ್ಚಕ್ಕೆ ಗುರಿಪಡಿಸಿದಂತಾಗುತ್ತದೆ.

ಇದೇ ಕಾಯಿದೆಯಲ್ಲಿ ಭೂಸುಧಾರಣೆಯ ಸಲುವಾಗಿ ಸರಕಾರವು ಕೈಗೊಳ್ಳುವ ಕ್ರಮಗಳಿಗೆ ಭೂಮಿಯ ಒಡೆಯರು ಹಾಗೂ ಗೇಣೀದಾರರು ಬದ್ಧರು ಎಂಬ ಮಾತನ್ನು ಕಾಣಿಸಲ್ಪಡಬೇಕು.

ಒಟ್ಟಿನಲ್ಲಿ ಇವತ್ತಿನ ದಿವಸ ಆಳುವ ಪಕ್ಷದವರು 150 ಜನರಿದ್ದಾರೆ. ವಿರೋಧಪಕ್ಷದಲ್ಲಿ ಹೇಗೂ ಕಡಮೆ ಸಂಖ್ಯೆಯ ಸದಸ್ಯರಿದ್ದಾರೆ. ಹೇಗಿದ್ದರೂ ವಿರೋಧವಿಲ್ಲ. ಹೇಗೋ ಪಾಸಾಗುತ್ತದೆ ಎನ್ನುವ ಕಡೆಗೆ ಸರಕಾರ ಗಮನ ಕೊಡಬಾರದು. ಇವತ್ತಿನ ದಿನ ಜನ ಸಾಮಾನ್ಯರಿಗೆ ತೊಂದರೆಗಳಾಗದಂತಹ ಕಾನೂನನ್ನು ಮಾಡಬೇಕು. ಇದಕ್ಕೆ ಯಾವ ಪಾರ್ಟಿಯ ಮಹತ್ವವನ್ನೂ ಕೊಡಬಾರದು.

ಇಷ್ಟು ಹೇಳಿ ಇಷ್ಟು ಕಾಲಾವಕಾಶವನ್ನು ಮಾನ್ಯ ಅಧ್ಯಕ್ಷರು ನನಗೆ ಕೊಟ್ಟಿದ್ದಕ್ಕಾಗಿ ನನ್ನ ಆಭಾರವನ್ನು ಮನ್ನಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ.

4 P.M.

ಶ್ರೀ ಕುಂದೂರು ರುದ್ರಪ್ಪ (ಚನ್ನಗಿರಿ).—ಮಾನ್ಯ ಅಧ್ಯಕ್ಷರೇ, ಈ ಭೂ ಸುದಾರಣೆ ತಂದಿರತಕ್ಕಂಥ ಶ್ರೀ ಕಡಿದಾಳ್ ಮಂಜಪ್ಪನವರನ್ನು ಸ್ವಾಗತಿಸಿ, ಈ ಭೂಸುಧಾರಣೆ ಮೇಲೆ ಎರಡು-ಮೂರು ಸಲಹೆ, ಸಂಗತಿಗಳನ್ನು ಹೇಳಬೇಕೆಂದಿದ್ದೇನೆ.

ತಾವು ಹನ್ನೊಂದು ವರ್ಷಗಳಿಂದಲೂ ಭೂಮಾಲೀಕನಿಗೆ ಜಾಸ್ತಿ ಆಹಾರ ಬೆಳೆ ಉತ್ಪನ್ನ ಮಾಡಬೇಕೆಂದು ಹೇಳುತ್ತಿರುವುದೂ ಮತ್ತು ಪ್ರಚಾರ ಮಾಡುತ್ತಿರುವುದೂ ಪ್ರತಿಯೊಬ್ಬರಿಗೂ ಗೊತ್ತಿದೆ. ಈ ಪ್ರಚಾರಕ್ಕೋಸ್ಕರ ಲಕ್ಷಾಂತರ ರೂಪಾಯಿಗಳನ್ನು ಖರ್ಚು ಮಾಡಿದ್ದೂ ನ್ಯಾಯವಾಗಿದೆ. ಸಾಗುವಳಿ ಮಾಡುವ ರೈತರು ಹಗಲಿರುಳೂ, ಎಂದರೆ 365 ದಿವಸಗಳು ಜಿರಾಯಿತು ಕೆಲಸಮಾಡಿದರೂ ಕೂಡ, ಒಂದು ದಿವಸ ಅವರಿಗೆ ಬಿಡುವು ಇರುವುದಿಲ್ಲ. ಇಂದು ಅವರಲ್ಲಿ ತುಂಬ ಗಲಿಬಿಲಿ ಉಂಟಾಗಿದೆ. ನಮ್ಮ ಭೂಮಿಯನ್ನು ಕಸಿದು

ಕೊಳ್ಳುತ್ತಾರಂತೆ, ಮುಂದೆ ನಮ್ಮ ಗತಿ ಏನು ಎಂದು ಅಡಿಕೊಳ್ಳುತ್ತಿದ್ದಾರೆ. ಇಂಥ ಸಂದಿಗ್ಧ ಪರಿಸ್ಥಿತಿ ರೈತನಿಗೆ ಬಂದಿದೆ. ಭೂಮಿಯಲ್ಲಿ ಚೆನ್ನಾಗಿ ಬೆಳೆ ಬೆಳೆಯಬೇಕಾದರೆ ಯಾವ ಪ್ರತಿಬಂಧಕವೂ ರೈತನಿಗೆ ಇರಕೂಡದು. ಇವತ್ತು ಅವನಿಗೆ ಆಹಾರವನ್ನು ಬೆಳೆಯುವುದಕ್ಕೆ ಉತ್ಸಾಹವಿಲ್ಲದೆ, ನಿರುತ್ಸಾಹಿಯಾಗಿ ಬಿಟ್ಟಿರುತ್ತಾನೆ.

ಒಂದು ಕುಟುಂಬವೆಂದರೆ ಐದು ಜನವೆಂತಲೂ, ಒಂದು ಕುಟುಂಬ ಹಿಡುವಳಿ ಎಂದರೆ 1,200 ರೂಪಾಯಿ ವರಮಾನ ಬರುವ ಜಮೀನೆಂತಲೂ, ಒಬ್ಬ ಸ್ವಂತ ಸಾಗುವಳಿದಾರನು, 3,600 ರೂಪಾಯಿ ಉತ್ಪತ್ತಿ ಬರುವಷ್ಟು ಜಮೀನನ್ನು ಇಟ್ಟುಕೊಳ್ಳಬಹುದೆಂದೂ ನಿರ್ಣಯ ಮಾಡಿದ್ದೀರಿ. ಜತ್ತಿ ಸಮಿತಿಯವರು 5,400 ರೂಪಾಯಿ ನಿವ್ವಳ ವರಮಾನವಿರುವಷ್ಟು ಜಮೀನು ಸ್ವಂತ ವ್ಯವಸಾಯ ಮಾಡುವ ಒಬ್ಬ ರೈತನಿಗೆ ಬರಬೇಕೆಂದು ಶಿಫಾರಸ್ಸುಮಾಡಿದ್ದರು. ಅದನ್ನು ಬದಲಾಯಿಸಿ, ಈಗ ಮಾನ್ಯ ರೆವಿನ್ಯೂ ಮಂತ್ರಿಗಳು ಸ್ವಂತ ಸಾಗುವಳಿ ಮಾಡುವ ರೈತನ ಜಮೀನಿನ ವರ್ಷದ ನಿವ್ವಳ ಉತ್ಪತ್ತಿ 3600 ರೂಪಾಯಿಗೆ ಜಾಸ್ತಿ ಇರಕೂಡದೆಂದು ಮಾಡಿದ್ದಾರಲ್ಲಾ, ಇಡೀ ಮೈಸೂರು ಸಂಸ್ಥಾನದಲ್ಲಿ, ನೂರಕ್ಕೆ 80 ಜನಗಳು ಹಳ್ಳಿಗಳಲ್ಲಿ ವಾಸಮಾಡತಕ್ಕಂಥ ರೈತರ ಮಕ್ಕಳು. ಪಟ್ಟಣಗಳಲ್ಲಿ ಬೇಕಾದಷ್ಟು ಸೌಕರ್ಯಗಳಿವೆ. ಹಳ್ಳಿಗಳಲ್ಲಿ ಯಾವ ಸೌಕರ್ಯವಿದೆ? ರೈತರು ಅವರ ಮಕ್ಕಳಿಗೆ ವಿದ್ಯಾಭ್ಯಾಸ ಮಾಡಿಸುವುದಕ್ಕೋಸ್ಕರ, ಪಟ್ಟಣಗಳಿಗೆ ಕಳಿಸಬೇಕು. ಇದಕ್ಕೆ ಅವರಿಗೆ ಎಷ್ಟು ಖರ್ಚು ಬೀಳುತ್ತದೆ! ಸಂದರ್ಭವಶಾತ್ ಅವರು ಆಸ್ಪತ್ರೆಗೆ ಹೋಗಬೇಕಾದರೆ ಒಂದು ಸಾವಿರ ರೂಪಾಯಿ ಖರ್ಚಾದರೂ ಬೆಂಗಳೂರು ಮತ್ತು ಶಿವಮೊಗ್ಗಾಕ್ಕೆ ಹೋಗಲೇ ಬೇಕು. ಪಟ್ಟಣಗಳಿಗೆ ಸೌಕರ್ಯಗಳನ್ನು ಮಾಡಿಕೊಟ್ಟ ಹಾಗೆಯೇ ಹಳ್ಳಿಗಳಿಗೆ ಸೌಕರ್ಯಗಳನ್ನು ಮಾಡಿಕೊಟ್ಟಿಲ್ಲ, ಅಂತಹುದರಲ್ಲಿ ರೈತರ ವರಮಾನ ಇಷ್ಟೇ ಇರಬೇಕೆಂದು ನಿಗದಿ ಮಾಡುತ್ತಿರುವುದು ನ್ಯಾಯವೇ! ಕುರ್ಚಿಯ ಮೇಲೆ ಕುಳಿತುಕೊಂಡು ತಿಂಗಳಿಗೆ ನಾಲ್ಕು ಸಾವಿರ ರೂಪಾಯಿ ಯಾರು ತೆಗೆದುಕೊಳ್ಳುತ್ತಾರೆಯೋ, ಅವರ ವರಮಾನಕ್ಕೆ ಪರಿಮಿತಿ ಇಲ್ಲ; ನಾವು ಹಳ್ಳಿಯವರು ಒಂದು ಸೀಟ್ ಫಾರಂ ಕೇಳಿದರೆ, ಇಲ್ಲ. ಮಂತ್ರಿಗಳ ಮಕ್ಕಳು ವಿದ್ಯಾವಂತರಾಗಿ, ಮಂತ್ರಿಗಳಾಗಬೇಕು. ಅಧಿಕಾರಿಗಳ ಮಕ್ಕಳು ಓದಿ, ಅಧಿಕಾರಿಗಳಾಗಬೇಕು. ಹಳ್ಳಿಗಾಡಿನ ಮಕ್ಕಳದು ಏನು ದುರದೃಷ್ಟವೋ! ಅವರಿಗೆ ಯಾವ ಸೌಕರ್ಯವಿದೆ? ಶಾಲಾ ಕಾಲೇಜುಗಳಲ್ಲಿ ಒಂದು ಸೀಟು ಬೇಕಾದರೆ, ಅವರು ನಿಮ್ಮ ಹತ್ತಿರ ಬರಬೇಕು. ಬಂದರೆ ''ಮೆರಿಟ್'' ಎನ್ನುತ್ತೀರಿ. ಏನು ಅನ್ಯಾಯ? ಜಿರಾಯತು ಕೆಲಸ ಮಾಡುವವರಿಗೆ ''ಮೆರಿಟ್'' ಎಲ್ಲಿಂದ ಬರಬೇಕು ? ಪಾಪ, ಮುದ್ದೆ ತಿನ್ನುತ್ತಾರೆ; ಸಾರು ಕುಡಿಯುತ್ತಾರೆ. ಇನ್ನೆಷ್ಟು ಬುದ್ಧಿವಂತರಾಗುತ್ತಾರೆ? ಪಟ್ಟಣಿಗರ ಮಕ್ಕಳು ಅನೇಕ ರೀತಿಯಲ್ಲಿ ಮಾನಸಿಕವಾಗಿ ಅಭಿವೃದ್ಧಿಗೊಳ್ಳಲೂ ದೈಹಿಕವಾಗಿ ಪುಷ್ಟಿಹೊಂದಲೂ ಅನೇಕಾನೇಕ ಸೌಕರ್ಯಗಳಿವೆ. ಅಧಿಕಾರಿಗಳ ಮಕ್ಕಳಿಗೆ, ಮಂತ್ರಿಗಳ ಮಕ್ಕಳಿಗೆ ಮೆರಿಟ್ ಇರಬೇಕೆನ್ನುವುದು ನ್ಯಾಯವಾದುದ್ದೇ ಆಗಿದೆ. ಹಳ್ಳಿಗಾಡಿನವರ ಮಕ್ಕಳಿಗೆ ಮೆರಿಟ್, ಮೆರಿಟ್, ಎಂದರೆ ಏನು ಮಾಡೋಣ? ಹಳ್ಳಿಯ ಮಕ್ಕಳಿಗೆ ಮುಫತ್ತಾಗಿ ವಿದ್ಯಾಭ್ಯಾಸ ದೊರಕುವಂತೆ ಏರ್ಪಾಟು ಆಗಬೇಕು. ಅವರೂ ಮುಂದುವರಿಯಲಿ ಎಂದು ಜಿರಾಯತು ಕೆಲಸ ಮಾಡುವವರ ಮಕ್ಕಳ ಅಭಿವೃದ್ಧಿಯ ಕಡೆ ಹೆಚ್ಚಿನ ಮುತುವರ್ಜಿ ಅತ್ಯಾವಶ್ಯವಾದುದಾಗಿದೆ. ದೊಡ್ಡ ದೊಡ್ಡ ಅಧಿಕಾರಿಗಳ ಮಕ್ಕಳುಗಳನ್ನೂ ಅವರ ಅಳಿಯಂದಿರನ್ನೂ ನೋಡಿ; ಪಟ್ಟಣಗಳಲ್ಲಿದ್ದುಕೊಂಡು ವಿದ್ಯಾವಂತರಾಗಿದ್ದಾರೆ. ಬೆಂಗಳೂರಿನಲ್ಲಾಗಲಿ, ಶಿವಮೊಗ್ಗಾನಗರದಲ್ಲಾಗಲಿ ಇರುವ ಆಸ್ಪತ್ರೆಗಳು, ರಸ್ತೆಗಳು ಹಳ್ಳಿಗಳಲ್ಲಿವೆಯೇ ? ಬೆಂಗಳೂರು, ಮೈಸೂರು, ತುಮಕೂರು ಮುಂತಾದ ಕಡೆಗಳಲ್ಲಿ ಎಷ್ಟು ವೈಭವ ಮಾಡಿದ್ದೀರಿ! ಸಚಿವರು ತಮ್ಮ ತಮ್ಮ ಸ್ಥಳಗಳನ್ನು ಅಭಿವೃದ್ಧಿಮಾಡಿದ್ದಾರೆ ಮಲೆನಾಡಿಗೆ ಒಂದು ಅಗ್ರಿಕಲ್‌ಚರಲ್ ಫಾರಂ ಕೊಡಿ ಎಂದರೆ ಅವರಿಗೆ ಬಹಳ ಕಷ್ಟವಾಗಿದೆ. ಇದೇ ಅಸೆಂಬ್ಲಿಯಲ್ಲಿ ಅಲ್ಲಿಗೆ ಫಾರಂ ಕೊಡಿ ಎಂದು ಹೇಳಿದರೂ, ಹಿಂದೆ ಮುಂದೆ ನೋಡುತ್ತಾ ಇದ್ದಾರೆ. ರೈತರ ಆದಾಯಕ್ಕೆ ಪರಿಮಿತಿ ಹಾಕಿದರೆ ಅವರ ಮಕ್ಕಳು ವಿದ್ಯಾವಂತರಾಗುವುದು ಹೇಗೆ? ಎಲ್ಲರ ವರಮಾನಕ್ಕೂ ಪರಿಮಿತಿ ಹಾಕಿ. ನನ್ನ ಅನುಭವದಲ್ಲಿ ಒಬ್ಬೊಬ್ಬರಿಗೆ ಸಾವಿರ ರೂಪಾಯಿ ಬಾಡಿಗೆ ಬರುವ ಮನೆಗಳಿವೆ. ಏತಕ್ಕೆ ಇಷ್ಟು ಮನೆಗಳು ಇವರಿಗೆ? ಇವತ್ತು ರೈತನಿಗೆ 200 ಎಕರೆ ಜಮೀನಿದ್ದರೆ ಕಸಿದುಕೊಳ್ಳುತ್ತೀರಿ 200 ಎಕರೆ ಇರುವ ಜಮೀನುದಾರನಿಗೆ ಒಂದು ಮನೆಕಟ್ಟುವುದಕ್ಕೆ ಶಕ್ತಿ ಇಲ್ಲವಾಗಿದೆ. ಹೀಗೇಕೆ ಆಗುತ್ತದೆ ಎಂಬುದನ್ನು ಹಳ್ಳಿಯ ಸ್ವಯಂ ರೈತನಾಗಿ ಅರಿಯಬೇಕು ತಿಂಗಳಿಗೆ 5000 ರೂಪಾಯಿ ಮನೆ ಬಾಡಿಗೆ ಬರುವವನಿಗೆ ಪರಿಮಿತಿ ಇಲ್ಲ. ಎಲ್ಲರನ್ನೂ ಒಂದೇ ಸಮನಾಗಿ ನೋಡಿ. ಸಮಾಜವಾದ ಸಮತಾವಾದ ಎಂದಮೇಲೆ ಬಡವರು ಹಣವಂತರು ಎಂಬ ತಾರತಮ್ಯವಿರಕೂಡದು. ತಿಂಗಳಿಗೆ ಸಾವಿರಾರು ರೂಪಾಯಿ ವರಮಾನ ಇರುವವರಿಗೆ ಪರಿಮಿತಿ ಇಲ್ಲ. 365 ದಿವಸಗಳೂ ಕೂಡ ನೀರೆತ್ತಿ, ನೆಲ ಉತ್ತು ಕಷ್ಟಪಡುವ ರೈತನ ಆದಾಯದ ಮೇಲೆ ಪರಿಮಿತಿ ಹಾಕಿದ ಹಾಗೆ, ಪಟ್ಟಣಗಳಲ್ಲಿರುವವರ ಆದಾಯದ ಮೇಲೂ ಪರಿಮಿತಿ ಹಾಕಿ. ರೈತರಿಗೂ ಪ್ರೋತ್ಸಾಹ ಕೊಡಿ. ಕಾಫಿ, ರಬ್ಬರ್, ಏಲಕ್ಕಿ, ತೆಂಗು, ಅಡಿಕೆ, ಟೀ, ಮುಂತಾದುವನ್ನು ಬೆಳೆಯುವವರಿಗೆ ತಾತ್ಕಾಲಿಕವಾಗಿ ಪರಮಾವಧಿ ಮಿತಿ ವಿನಾಯಿತಿಯನ್ನು ಕೊಟ್ಟಿದ್ದೀರಿ. ಪರಿಮಿತಿ ಹೊರಿಸುವುದಾದರೆ ಎಲ್ಲರ ಮೇಲೂ ಹಾಕಬೇಕು. ಲಾಯರುಗಳು ಒಂದು ಖೂನಿ ಮೊಕದ್ದಮೆಗೆ ಐದು ಸಾವಿರ ರೂಪಾಯಿ ತೆಗೆದುಕೊಳ್ಳುತ್ತಾರೆ. ಅವರ ಮೇಲೂ ಆದಾಯ ಮಿತಿ ಹಾಕಿ. ಬ್ಯಾರಿಸ್ಟರುಗಳಿಗೆ 1000-2000 ರೂಪಾಯಿ ಕೊಡುತ್ತಾರೆ.

ಅಧ್ಯಕ್ಷರು.—ಕೊಡುವವರು ಯಾರು ? ವ್ಯವಸಾಯಗಾರರೇ.

ಶ್ರೀ ಕುಂದೂರು ರುದ್ರಪ್ಪ.—ಹೌದು, ಅಂತಹ ಅನಿವಾರ್ಯದಲ್ಲಿ ಹೊಲ ಮನೆ ಮಾರಿ ಕೊಡುತ್ತಾರೆ.

ಆದ್ದರಿಂದ ಒಂದು ಸಲಹೆ ಏನೆಂದರೆ, ತಾವು ಪ್ರತಿಯೊಬ್ಬರ ವರಮಾನದ ಮೇಲೂ ಸೀಲಿಂಗ್ ತರುವುದು ಸೂಕ್ತ. ಕರ್ಣಾಟಕದಲ್ಲಿರುವ ಎಲ್ಲ ಪ್ರಜೆಗಳನ್ನೂ ಈ ಆದಾಯದ ಪರಿಮಿತಿಯಲ್ಲಿ ಸೇರಿಸಿಕೊಂಡಿದ್ದಾರೆಂಬ ಒಂದು ಕೀರ್ತಿಯನ್ನು ನೀವು ಹೊತ್ತುಕೊಂಡರೆ ಚೆನ್ನಾಗಿರುತ್ತದೆ, ಎಲ್ಲರಿಗೂ ಸಂತೋಷವಾಗುತ್ತದೆ.

ಇನ್ನು ಜಮೀನು ಸುಧಾರಣೆಯ ಬಗ್ಗೆ ಒಂದು ತಜ್ಞರಸಮಿತಿಯನ್ನು ನೇಮಕಮಾಡುವ ವಿಚಾರ. ಈ ಬಗ್ಗೆ ನಾನು ಮಾತನಾಡುವಾಗ ದಿವಂಗತ ಶ್ರೀ ಕೆ. ಟಿ. ಭಾಷ್ಯಂ ಅವರ ಜ್ಞಾಪಕ ಬರುತ್ತದೆ. ಅವರು ಒಳ್ಳೆಯ ನಿಪುಣರು ಎಂದೆನಿಸಿಕೊಂಡಿದ್ದರು. ಒಂದು ಸಾರಿ ನಮ್ಮ ಜಿಲ್ಲೆಗೆ ಬಂದಾಗ ಒಂದು

ಮಾತನ್ನು ಹೇಳಿದರು. "ಚೆನ್ನಾಗಿ ಎಕರೆಗೆ 60-70 ಪಲ್ಲ ಬೆಳೆಯಬೇಕಯ್ಯಾ; ರೈತರಿಗೆ ಎಲ್ಲಾ ಸಹಾಯ ಮಾಡುತ್ತೇವೆ" ಎಂದು ಹೇಳಿದರು.

ಶ್ರೀ ಜಿ. ವೆಂಕಟೇಗೌಡ (ಪಾಳ್ಯಂ).—ಅವರು ಯಾರು ನಮಗೆ ಗೊತ್ತಿಲ್ಲವಲ್ಲಾ.

ಶ್ರೀ ಕುಂದೂರು ರುದ್ರಪ್ಪ.—ಹಿಂದೆ ಮಂತ್ರಿಗಳಾಗಿದ್ದವರು ಅವರು. ಅವರು ಇಂತಹ ಉತ್ಸಾಹದ ಮಾತನ್ನು ಪ್ರವಾಸ ಬಂದಾಗಲೆಲ್ಲಾ ಹೇಳುತ್ತಿದ್ದರು. ಆಗ ಅವರ ಜೊತೆಯಲ್ಲಿ ಕೆಲವು ವೇಳೆ ನಾನೂ ಇರುತ್ತಿದ್ದೆ. ಭಾಷಣದಲ್ಲಿ ಹಾಗೆಲ್ಲಾ ಹೇಳುತ್ತಿದ್ದರು. ಗ್ರಾಮದಲ್ಲಿ ಬೆಳೆಯಾಗಿರುವುದನ್ನೆಲ್ಲಾ ನೋಡುತ್ತಾ ಒಂದು ಕಡೆ ಹೋಗುತ್ತಿರುವಾಗ ನನ್ನನ್ನು ಕುರಿತು: What is this? ಎಂದು ಕೇಳಿದರು. ನಾನು this is Jawari ಎಂದು ಕೇಳಿದೆ. (ಅದು ಜೋಳದ ಬೆಳೆ) ಜೋಳ ಎಂಬುದೇ ಅವರಿಗೆ ಗೊತ್ತಾಗಲಿಲ್ಲ. ಈ ಮಾತನ್ನು ಹೇಳುತ್ತಿರುವುದೇಕೆಂದರೆ ಅವರ ಕೇವಲ ನಗರ ಜೀವಿಗಳು. ಅದ್ದರಿಂದ ಅಂತಹವರನ್ನೆಲ್ಲಾ ಒಳಗೊಂಡಂಥ ಕಮಿಷನನ್ನು ನೇಮಕಮಾಡಿದರೆ ಏನು ಪ್ರಯೋಜನ? ಅವರಿಗೆ ಹಳ್ಳಿಯ ಅನುಭವ ಇಲ್ಲದಿರುವುದರಿಂದ ಅದರ ಅರ್ಥ ಅವರಿಗೆ ಗೊತ್ತಾಗಲಿಲ್ಲ. ಆದ್ದರಿಂದ ಗ್ರಾಮದ ಸ್ಥಿತಿಯನ್ನು ಬಲ್ಲಂಥ ಅನುಭವಸ್ಥರನ್ನು ಈ ಭೂ ಸುಧಾರಣೆ ಸಮಿತಿಯಲ್ಲಿ ಹಾಕಬೇಕು. ಈ ಸಮಿತಿಯಲ್ಲಿ ನಿಜವಾಗಿ ರೈತರ ಪ್ರತಿನಿಧಿಗಳಿರಬೇಕು. ಈಗ ಐದು ಜನ ಸದಸ್ಯರುಳ್ಳ ಒಂದು ಸಮಿತಿಯನ್ನು ಮಾಡಿದ್ದೀರಿ. ಅದರೊಳಗೆ ಮೂವರು ಅಧಿಕಾರಿಗಳು ಇದ್ದಾರೆ. ಉಳಿದವರು ಕೇವಲ ಇಬ್ಬರು ಮಾತ್ರ ವ್ಯವಸಾಯದ ಅನುಭವಸ್ಥರಿದ್ದಾರೆ. ಇದಲ್ಲಿ ಎಷ್ಟೇ ಜನರಿದ್ದರೂ ಇಪ್ಪತ್ತು ಜನರಿದ್ದರೂ, ನಮ್ಮ ರೈತರ ಬಹುಮತ ಅದರಲ್ಲಿ ಇರಬೇಕು. ರೈತರ ಪ್ರತಿನಿಧಿಗಳು ಮೂವರು ಎಂಬುದಾಗಿ ಆ ಭೂ ಸುಧಾರಣಾ ಸಮಿತಿಯಲ್ಲಿ ಸೇರಿಸಬೇಕು. ಒಂದು ಪಲ್ಲಾ ಬೆಳೆಸಿ ಎಂದು ಬಾಯಲ್ಲಿ ಸುಮ್ಮನೆ ಹೇಳಿಬಿಟ್ಟರೆ, ಒಂದು ಪಲ್ಲಾ ಬೆಳೆ ಆಗಿ ಬಿಡುವುದಿಲ್ಲ. ಎಲ್ಲಾದಕ್ಕೂ ಒಂದೇ ಮಂತ್ರ ಮಾಡಿದರೆ, ನಾವು ಹೇಗೆ ಕೆಲಸ ಮಾಡಬೇಕು? ಅದಕ್ಕೋಸ್ಕರ ಈ ವಿಚಾರದಲ್ಲಿ ಹೆಚ್ಚಿನ ಅನುಭವ ಹೊಂದಿರುವವರನ್ನು ಸಮಿತಿಯಲ್ಲಿ ನೇಮಿಸಬೇಕು. ಅವರು ಪ್ರಾಮಾಣಿಕತೆಯಿಂದ ಪಕ್ಷಪಾತವಿಲ್ಲದೆ ಅನೇಕ ಜನ ರೈತರ ಅಹವಾಲವನ್ನು ತೀರ್ಮಾನ ಮಾಡುವಂತಿರಬೇಕು. ಅಂತಹ ಒಂದು ನ್ಯಾಯವಾದ ನಿರ್ಣಯವಾಗುವಂತೆ ಸರ್ಕಾರದವರು ವ್ಯವಸ್ಥೆ ಮಾಡಿದರೆ ಭೂ ಸುಧಾರಣಾ ಸಮಿತಿಯ ಕೆಲಸ ಕಾರ್ಯಗಳು ಸಂತೋಷವಾಗಿ ನಡೆಯುತ್ತವೆಂದು ನಾನು ಹೇಳುತ್ತೇನೆ. ಅಂತಹ ಅವಕಾಶವನ್ನು ಈ ಮಸೂದೆಯಲ್ಲಿ ಸರ್ಕಾರದವರು ಮಾಡಿಕೊಡಲೇಬೇಕು.

ಶ್ರೀ ಬಿ. ಕೆ. ಪುಟ್ಟರಾಮಯ್ಯ.—ನೀವು ಹೇಳಿದ್ದನ್ನೆಲ್ಲಾ ಮಂತ್ರಿಗಳು ತಿಳಿದುಕೊಂಡು ಅದಕ್ಕೆಲ್ಲಾ ಸರಿಯಾದ ಉತ್ತರ ಕೊಡದಿದ್ದರೆ, ನಾವೇಕೆ ರೈತರ ಪರವಾಗಿ ಇಲ್ಲಿ ಮಾತನಾಡಬೇಕೋ ಗೊತ್ತಿಲ್ಲ.

ಶ್ರೀ ಕಡಿದಾಳ್ ಮಂಜಪ್ಪ.—ಅವರು ಹೇಳಿದ್ದನ್ನೆಲ್ಲಾ ತಿಳಿದುಕೊಳ್ಳುತ್ತಿದ್ದೇನೆ. ಉತ್ತರ ಕೊಡುತ್ತೇನೆ.

ಶ್ರೀ ಕುಂದೂರು ರುದ್ರಪ್ಪ.—ನಾವು ಅವರಿಗೆ ಹೇಳುವುದಿಷ್ಟು. ನಮ್ಮಲ್ಲಿ ಕೆಂಪು ಜೋಳ ಇತ್ಯಾದಿ ಎಲ್ಲಾ ತರಹ ಜೋಳವೂ ಬೆಳೆಯುತ್ತದೆಂದು ಅನೇಕರು ಹೇಳುತ್ತಾರೆ. ಅಂಥಾದ್ದನ್ನೆಲ್ಲಾ ನಾನು ಹೇಳಿದರೆ ಅವರಿಗೆ ಅನುಭವ ಬರುತ್ತದೆ. ಆದ್ದರಿಂದ ತಾವು ಇದನ್ನು ಪರಾಂಬರಿಸಿ ರೈತರಿಗೆ ಅನುಕೂಲವನ್ನು ಕಲ್ಪಿಸಿಕೊಡಬೇಕು.

ಇನ್ನು ಇದರಲ್ಲಿ ಸ್ವತಃ ವ್ಯವಸಾಯ ಮಾಡತಕ್ಕವನೂ ಸೇರಿ ಐದು ಜನಗಳುಳ್ಳ ಒಂದು ಕುಟುಂಬದವರು, ಒಂದು ದೊಡ್ಡ ಸಂಸಾರ ಎಂದು ಹೇಳಿದ್ದಾರೆ. ಯಾವುದೇ ಕಮಿಟಿ ಸ್ವಂತ ಬೇಸಾಯಕ್ಕೆ ಬಿದ್ದ ಮೇಲೆ ಸುಮಾರು 53 ಜನರಾಗಲಿ, ಎಷ್ಟೇ ಜನರಾಗಲಿ ಒಗ್ಗಟ್ಟಾಗಿರುವುದಕ್ಕೆ ಒಂದು ಅವಕಾಶವನ್ನು ಕಲ್ಪಿಸಿಕೊಡಬೇಕು. ಈಗ ಈ ಮಸೂದೆಯಲ್ಲಿ ಅಡಕವಾಗಿರುವುದನ್ನು ನೋಡಿದರೆ, ಅಣ್ಣ ತಮ್ಮಂದಿರನ್ನೇ ಬೇರೆ ಮಾಡುತ್ತಿದ್ದೀರಿ. ಈ ಕಾನೂನಿಂದ ಸುಮಾರು 50-53 ಜನ ಇರತಕ್ಕ ಕುಟುಂಬದಲ್ಲಿ ನಮ್ಮ ನಮ್ಮ ಮಕ್ಕಳೊಂದಿಗೆ ನಾವು ನಾವೇ ಜಗಳ ಮಾಡಿಕೊಳ್ಳುವ ರೀತಿ ಬಂದಿದೆ. ಇದೇನು ನಮ್ಮ ದುರದೃಷ್ಟವೋ ಏನೋ ತಿಳಿಯದು. ಆದ್ದರಿಂದ ಒಂದು ಕುಟುಂಬದಲ್ಲಿ 50-60 ಜನಗಳಿದ್ದರೆ ಯಾವ ರೀತಿಯಾಗಿ ಅಂತಹವರಿಗೆ ಜಮೀನು ಹಂಚುವಿಕೆಯ ಬಗ್ಗೆ ಪರಿಹಾರ ಕೊಡಬೇಕೆಂಬುದನ್ನು ಸ್ವಲ್ಪ ಸೂಕ್ಷ್ಮವಾಗಿ ಸರ್ಕಾರದವರು ಯೋಚನೆ ಮಾಡಬೇಕು. ಅದಕ್ಕೆ ತಕ್ಕ ಕಾನೂನುಗಳನ್ನು ತರಬೇಕೆಂದು ತಮ್ಮನ್ನು ಪ್ರಾರ್ಥಿಸಿಕೊಳ್ಳುತ್ತೇನೆ. ಅಮೇಲೆ ಚುನಾವಣೆಯಲ್ಲಿ ಖರ್ಚುಮಾಡಲು ರೈತನಾದವನು ಉಮೇದುವಾರನಾದಲ್ಲಿ ತನ್ನ ಸರ್ವಸ್ವವನ್ನೂ ಮಾರಬೇಕು. ಈತ ತನ್ನ ಕಷ್ಟವನ್ನು ನಗರವಾಸಿ ಅಧಿಕಾರಿಯ ಮುಂದೆ ವಿಮರ್ಶಿಸಿ ಉಚಿತ ಸುಲಭೋಪಾಯವನ್ನು ಕೋರಿದರೆ ಅವನಿಗೆ ಸಿಕ್ಕಬಹುದಾದ ಉತ್ತರವಾಗಿ ಅಂತಹ ಅಧಿಕಾರಿ ನನ್ನ ನಿನ್ನ ಆದಾಯ ಸಾಟಿ ಮಾಡಿಕೊಳ್ಳೋಣ ಎನ್ನುತ್ತಾನೆ. ಇದು ಅಣಕವೇಹೊರತು ಪರಿಹಾರವಲ್ಲ. ಈ ರೀತಿಯಾಗಿ ಮೂರು ನಾಲ್ಕು ಸಾವಿರ ರೂಪಾಯಿಗಳನ್ನು ಎಲೆಕ್ಷನ್ನಿನಲ್ಲಿ ಖರ್ಚುಮಾಡುವುದಕ್ಕೆ ಅವನಿಗೆ ಎಲ್ಲಿದೆ? ಅದನ್ನು ಹೇಗೋ ನಿರ್ವಹಿಸಲು ಪ್ರಾಣಸಂಕಟ ಪಡುತ್ತಾನೆ. ಪರಿಮಿತಿ ಹಾಕುವಾಗ ದೊಡ್ಡದೊಡ್ಡ ಸಂಸಾರದವರು ಎಂದು ಅವರನ್ನೇ ಉದ್ಧಾರ ಮಾಡಲಿಕ್ಕೆ ಹೋಗುತ್ತಾರೆ. ಇದು ಸರಿಯಲ್ಲ. ರೈತರ ಹಿತವನ್ನು ಕಾಪಾಡಬೇಕು. ರೈತನ ಆದಾಯದ ಮೇಲೆ ಪರಿಮಿತಿಯನ್ನು ವಿಧಿಸುವುದಾದರೆ, ಎಲ್ಲರ ಮೇಲೂ ಆ ರೀತಿ ಪರಿಮಿತಿಯನ್ನು ಹಾಕಿರಿ. ನಮ್ಮ ಮುಖ್ಯಮಂತ್ರಿಯಾಗಿರುವ ಶ್ರೀ ಜತ್ತಿಯವರು ತಮ್ಮ ಸಮಿತಿ ವರದಿಯಲ್ಲಿ ನಿರ್ಧರಿಸಿರುವಹಾಗೆ 5,400 ರೂಪಾಯಿಗಳ ಪರಿಮಿತಿ ಒಂದು ಕುಟುಂಬಕ್ಕೆ ಇರಲಿ ಎಂದು ನಾನು ಹೇಳುತ್ತೇನೆ. ಭೂ ಸುಧಾರಣೆ ಜಾರಿಯಾಗುವ ಸಂದರ್ಭದಲ್ಲಿ ಪರಿಹಾರ ಕೊಡುವ ಬಗ್ಗೆ ತಾವೆಲ್ಲರೂ ಅದಕ್ಕೆ ಒಪ್ಪುತ್ತೀರೆಂದು ನಾನು ಭಾವಿಸುತ್ತೇನೆ. ಇನ್ನು ಭೂ ಸಮಿತಿಯವರು ಈ ಬಗ್ಗೆ ಅನ್ಯಾಯ ಮಾಡುತ್ತಾರೆಂದು ನನ್ನ ಸ್ನೇಹಿತರು ಕೆಲವರು ಹೇಳುತ್ತಿದ್ದಾರೆ. ಅದು ಸರಿಯಲ್ಲ. ಹಿಂದೆ 1933ನೇಯ ಇಸವಿಯಲ್ಲಿ ಒಂದು ಪಲ್ಲಾ ರಾಗಿಗೆ ಎಷ್ಟು ಇತ್ತು, ಇವತ್ತು ಧಾರಣೆವಾಸಿಗಳು ಹೇಗಿವೆಯೆಂಬುದನ್ನು ನೋಡಿದರೆ ಈಗ ಅಂತಹ ಒಂದೊಂದು ಜಮೀನಿಗೆ ದುಡ್ಡು ಕೊಡುವುದು ಹೇಗೆ ಎಂಬುದನ್ನು ಆಲೋಚನೆ ಮಾಡಬೇಕಾಗಿದೆ. ಮಧ್ಯೆ ಮಧ್ಯೆ ನನ್ನ ಸ್ನೇಹಿತರು ಟೀಕೆಮಾಡುವುದರಿಂದ ನಾನು ಬೇರೆ ವಿಷಯಗಳನ್ನು ಹೇಳುವುದಕ್ಕೆ

ಕಾಲಾವಕಾಶವಿಲ್ಲದೆ ಅವರಿಗೆ ಉತ್ತರಿಸಬೇಕಾಗಿದೆ. ಜಮೀನುಗಳನ್ನು ತೆಗೆದುಕೊಳ್ಳುವಾಗ ಒಂದು ಮಿತಿಯಿಂದ, ಎಂದರೆ 5-10-15 ಸಾವಿರ ಎಂದು ಸ್ವಲ್ಪ ಸ್ವಲ್ಪ ಹಣದ ರೂಪವಾಗಿ ಪರಿಹಾರ ಕೊಡಿ ಎಂದು ನಾನು ಒತ್ತಾಯ ಪೂರ್ವಕವಾಗಿ ಕೇಳಿಕೊಳ್ಳುತ್ತೇನೆ.

ಸಮತಾವಾದ ಸಮಾಜ ಅಥವಾ ಸೋಷಿಯಲಿಸ್ಟಿಕ್ ಪ್ಯಾಟರ್ನ್ ಆಫ್ ಸೊಸೈಟಿ ಎಲ್ಲ ರಂಗಗಳಲ್ಲಿಯೂ ಬಂದರೆ ಮಾತ್ರ ನನಗೆ ಐದು ಎಕರೆ ಭೂಮಿ ಕೊಡಿ ಸಾಕು ಎಂದು ಹೇಳುತ್ತಿದ್ದೆ. ತಾವು ಸ್ವಲ್ಪ ಯೋಚನೆ ಮಾಡಿ ಪರಮಾವಧಿ ಮಿತಿಯನ್ನು ಕನಿಷ್ಠ ಪಕ್ಷ 5,400 ರೂಪಾಯಿಗಳವರೆಗಾದರೂ ಹೆಚ್ಚಿಸಬೇಕು ಎಂದು ಕೇಳಿಕೊಳ್ಳುತ್ತೇನೆ. ನನಗೆ ಇಷ್ಟು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಅಧ್ಯಕ್ಷರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಬಿ. ಎಲ್. ನಾರಾಯಣಸ್ವಾಮಿ.—ಮಾನ್ಯ ಅಧ್ಯಕ್ಷರೇ, ಮಾನವ ಜನಾಂಗಕ್ಕೆ ಗಾಳಿ ಮತ್ತು ನೀರು ಎಷ್ಟು ಆವಶ್ಯಕವೋ ಅಷ್ಟೇ ಅನ್ನವೂ ಆವಶ್ಯಕವಾದದ್ದು. ದೇಶದಲ್ಲಿ ಆಹಾರೋತ್ಪತ್ತಿ ಮುಖ್ಯವಾದುದು. ಈ ಆಹಾರೋತ್ಪತ್ತಿ ಉದ್ಯಮದಲ್ಲಿ ದೇಶದ ಜನರಲ್ಲಿ ಶೇಕಡ ತೊಂಬತ್ತು ಭಾಗ ನಿರತರಾಗಿದ್ದಾರೆ. ಈ ಉದ್ಯಮ ಲಾಭದಾಯಕವಾದುದಲ್ಲ. ಸಮಾಜದ ಏಳಿಗೆಗೆ ಈ ಎಲ್ಲ ಜನರೂ ಕೂಡ ತ್ಯಾಗಮಾಡಿದ್ದಾರೆಂದರೆ ಉತ್ಪ್ರೇಕ್ಷೆಯಲ್ಲ. ಈ ಜನರಿಗೆ ಅನುಕೂಲ ಮಾಡಬೇಕೆಂಬ ಅಭಿಪ್ರಾಯ ನಮಗೆ ಸ್ವಾತಂತ್ರ್ಯ ಬಂದಾಗಿನಿಂದಲೂ ಇದೆ. ಹನ್ನೆರಡು ವರ್ಷಗಳ ದೀರ್ಘ ಅವಧಿಯಲ್ಲಿ ಬೆಳೆದ ಗಜಗರ್ಭದ ಫಲವನ್ನು ನೋಡಿದರೆ ಏನೂ ಇಲ್ಲದಂತಾಗಿದೆ. ಬಡವರಿಗೆ ಹೆಚ್ಚಿನ ಸಹಾಯವಾಗಬೇಕು, ಹೆಚ್ಚಿನ ಉಪಕಾರವಾಗಬೇಕು ಎಂದು ಎಲ್ಲರೂ ಹೇಳುವವರೇ. ಆದರೆ ಈ ಮಸೂದಾ ಕಾನೂನಿನಿಂದ ಬಡವರಿಗೆ ಅಂಥ ಉಪಕಾರ ಲಭಿಸುತ್ತದೆಯೇ ಎಂದರೆ ಇಲ್ಲವೆಂದು ಹೇಳಬೇಕಾಗಿದೆ. ಮಾನ್ಯ ಸಚಿವರೂ ಇದನ್ನು ಮನಗಂಡಿದ್ದಾರೆ. ರೈತನ ಜೀವನ ಉತ್ತಮಗೊಳ್ಳಬೇಕಾಗಿದೆ. ಆದರೆ ಹೆಚ್ಚಿನ ನಿಟ್ಟಿನಲ್ಲಿ ಪ್ರಗತಿಪರ ಸುಧಾರಣೆಗಳನ್ನು ತರುವುದಕ್ಕೆ ಸಾಧ್ಯವಿಲ್ಲದೆ ಇರುತ್ತದೆ ಎಂದು ನೈಜವಾಗಿ, ತಮ್ಮ ಮನಸ್ಸಿನಲ್ಲಿರುವುದನ್ನು ಅವರು ಹೇಳಿದ್ದಾರೆ. ಅವರ ಮನೋಭಾವವನ್ನು ನಾನು ನಿಜವಾಗಿಯೂ ಗೌರವಿಸುತ್ತೇನೆ ಮತ್ತು ಅಭಿನಂದಿಸುತ್ತೇನೆ. ಪ್ರಗತಿಪರವಾದ ಸುಧಾರಣೆ ಹೇಗಿರಬೇಕು, ದೇಶದ ಜನತೆ ಏನನ್ನು ನಿರೀಕ್ಷಿಸುತ್ತದೆ ಎಂದು ಯೋಚನೆ ಮಾಡಬೇಕು. ದೇಶದಲ್ಲಿ ಇಂದು ಇರತಕ್ಕ ಪರಿಸ್ಥಿತಿಯಲ್ಲಿ, ಅನೇಕ ಜನ ಸಣ್ಣ ಸಣ್ಣ ಹಿಡುವಳಿದಾರರಾದರೂ, ಹೆಚ್ಚು ಆಹಾರವನ್ನು ಬೆಳೆಯುವುದಕ್ಕೆ ಸಾಕಷ್ಟು ಸೌಲಭ್ಯಗಳು, ಪ್ರಕೃತಿ ಸೌಲಭ್ಯಗಳು ಇಲ್ಲದೆ ರೈತರಿಗಿರುವ ಕಷ್ಟಗಳು ಎಲ್ಲರಿಗೂ ತಿಳಿದಿವೆ. ಕೋಲಾರ ಜಿಲ್ಲೆಯಿಂದ ಬಂದಂಥವನು ನಾನು. ಆ ಜಿಲ್ಲೆಯ ಪರಿಸ್ಥಿತಿಯನ್ನು ತಮಗೆ ಅನೇಕವೇಳೆ ಈ ಮಾನ್ಯ ಸಭೆಯಲ್ಲಿ ಅರಿಕೆ ಮಾಡಿದ್ದೇನೆ. ಈಗಲೂ ಸಹ ಕೆಲವು ಮಾತುಗಳನ್ನು ಮನವರಿಕೆಮಾಡಿಕೊಡಲು ನಿಂತಿದ್ದೇನೆ.

ಕೋಲಾರ ಜಿಲ್ಲೆ ಸರಾಸರಿ ವರ್ಷಕ್ಕೆ 22 ಅಂಗುಲ ಮಳೆ ಬೀಳತಕ್ಕ ಪ್ರದೇಶ. ಇಲ್ಲಿ ಬೆಳೆಯತಕ್ಕ ಹೆಚ್ಚಿನ ಬೆಳೆ ಎಂದರೆ ರಾಗಿ. ಪ್ರಕೃತಿಯ ದಯೆಯಿಂದ ಮಳೆ ಬಂದು ಕೆರೆಗಳಿಗೆ ನೀರು ಬಂದರೆ ಕೊಂಚ ಮಟ್ಟಿಗೆ ಬತ್ತ ಬೆಳೆಯುತ್ತದೆ. ರಾಗಿಯ ಉತ್ಪತ್ತಿ ಒಂದು ಎಕರೆಗೆ ಸರಾಸರಿ ಮೂರು ಪಲ್ಲ ಎಂದು ಮಾನ್ಯ ಸಚಿವರಿಗೂ ಗೊತ್ತು. ಸರ್ಕಾರದಲ್ಲಿ ಅಂಕಿ ಅಂಶಗಳಿವೆ. ಭತ್ತದ ಬೆಳೆ ಆಗುತ್ತದೆಂಬ ಭರವಸೆ ಇಲ್ಲ. ಪ್ರಕೃತಿಯ ದೆಸೆಯಿಂದ ಮಳೆ ಬಂದು ಕೆರೆಗಳು ತುಂಬಬೇಕು. ಅಲ್ಲಿರತಕ್ಕದ್ದು ಬಹುಮಟ್ಟಿಗೆ ಸಣ್ಣ ಕೆರೆಗಳು. ಒಂದು ಬೆಳೆಯಾಗಬೇಕಾದರೆ ಕೆರೆಗಳು ಮೂರು ಸಲ ತುಂಬಬೇಕಾಗಿದೆ. ಒಂದು ಬೆಳೆ ಕೆಟ್ಟರೆ ರೈತ ತಾನೂ ಕೆಡುತ್ತಾನೆ. ಬೆಳೆ ಸರಿಯಾಗಿ ಬಂದರೂ ಒಂದು ಎಕರೆಗೆ 8–9 ಪಲ್ಲಗಳಿಗೆ ಜಾಸ್ತಿ ಇರುವುದಿಲ್ಲ. ಕೋಲಾರ ಜಿಲ್ಲೆಯ ಪರಿಸ್ಥಿತಿ ಬಹಳ ಆಶ್ಚರ್ಯಕರವಾಗಿದೆ. ಪ್ರತಿನಾಲ್ಕು ವರ್ಷಕ್ಕೊಮ್ಮೆ ಅಲ್ಲಿ ಬೆಳೆ ಆಗದೆ ಇರುವುದು ಸರ್ವೇಸಾಧಾರಣ. ಒಂದೆರಡು ವರ್ಷ ಬೆಳೆ ಆಗಬಹುದು, ಮೂರನೆಯ ವರ್ಷ ಬೆಳೆ ಇರುವುದಿಲ್ಲ. ಮೂರನೆಯ ವರ್ಷ ಕ್ಷಾಮ ಪರಿಸ್ಥಿತಿಯ ಪರಿಹಾರವನ್ನು ಕೊಡುವುದಕ್ಕೆ ಸರ್ಕಾರವನ್ನು ಬೇಡಿಕೊಳ್ಳಬೇಕಾಗುತ್ತದೆ. ಆದುದರಿಂದ ಕೋಲಾರ ಜಿಲ್ಲೆಗೆ ಸಂಬಂಧಿಸಿದ ಯಾವ ಅಂಕಿ ಅಂಶಗಳನ್ನು ತೆಗೆದುಕೊಳ್ಳಬೇಕಾದರೂ 5–10 ವರ್ಷಗಳ ಸರಾಸರಿ ಲೆಕ್ಕವನ್ನು ತೆಗೆದುಕೊಂಡು ಒಂದು ವರ್ಷಕ್ಕೆ ಎಷ್ಟು ಬೆಳೆ ಬರುತ್ತದೆಂದು ತಿಳಿಯಬೇಕು. ಒಂದೆರಡು ವರ್ಷಗಳ ಅಂಕಿ ಅಂಶಗಳನ್ನು ತೆಗೆದುಕೊಳ್ಳುವುದಾದರೆ ತಪ್ಪಾಗುತ್ತದೆ. ಆದ್ದರಿಂದ ಅನ್ಯಾಯವಾಗುತದೆಂದು ಹೇಳುತ್ತೇನೆ.

ನಮ್ಮ ಜಿಲ್ಲೆಯಲ್ಲಿ ರೈತನು ಯಾವಾಗಲೂ ಕೂಡ ಸಂತುಷ್ಟನಾಗಿಲ್ಲ. ದೇಶದಲ್ಲಿ ನೀರಾವರಿ ಇರತಕ್ಕ ಪ್ರದೇಶಗಳಲ್ಲಿಯೂ ಕೂಡ ಆಹಾರ ಧಾನ್ಯಗಳನ್ನು ಬೆಳೆಯತಕ್ಕ ರೈತನ ಸ್ಥಿತಿ ಉತ್ತಮಗೊಂಡಿಲ್ಲವೆಂದು ಹೇಳುವವರು ಇರುವಾಗ ಕೋಲಾರ ಜಿಲ್ಲೆಯ ರೈತರ ಸ್ಥಿತಿ ಹೇಗೆ ತಾನೇ ಉತ್ತಮಗೊಂಡೀತು! ಯಾರಾದರೂ ಒಬ್ಬ ಮನುಷ್ಯನ ಮೇಲೆ ಸೇಡನ್ನು ತೀರಿಸಿಕೊಳ್ಳಬೇಕಾದರೆ ಒಳ್ಳೆಯ ಮಾತಿನಿಂದಲೇ 50 ಎಕರೆ ಜಮೀನನ್ನು ಅವನಿಗೆ ಕೊಡಿ ಎಂದು ಹೇಳುತ್ತಾರೆ. ಭೂಸ್ವಾಮಿ ದೊಡ್ಡ ಜಮೀನ್ದಾರ, ಹೆಚ್ಚು ಕಂದಾಯ ಕೊಡುತ್ತಾನೆ. ಇನ್‌ಕಂಟ್ಯಾಕ್ಸ್ ಕಟ್ಟುತ್ತಾನೆ ಎಂದು ಗೌರವವನ್ನು ಸಂಪಾದಿಸಿ ಕೊಂಡರೂ, ಜಮೀನನ್ನು ಕೊಡಿ ಎಂದು ಹೇಳುವವರ ನಿಜವಾದ ಉದ್ದೇಶವೇನೆಂದರೆ, ಜಮೀನಿನಲ್ಲಿ ಬೆಳೆ ಹೇಗೂ ಆಗುವುದಿಲ್ಲ, ಪ್ರತಿವರ್ಷವೂ ಕಂದಾಯ ವಗೈರೆ ಕೊಡಬೇಕಾಗುವುದರಿಂದ ಕೆಲವೇ ದಿವಸಗಳಲ್ಲಿ ಸಾಲಗಾರನ ಮಗನಾಗುತ್ತಾನೆ. ಹೀಗೆ ಮಾಡುವುದು ಸೇಡು ತೀರಿಸಿಕೊಳ್ಳುವುದಕ್ಕೆ ಒಳ್ಳೆಯ ಮಾರ್ಗವೆಂದು ಹೇಳುತ್ತಾರೆ. ವಾಸ್ತವವಾಗಿಯೂ ಇದು ನಿಜ.

ಪ್ಲಾನಿಂಗ್ ಕಮಿಷನ್‌ಅವರು ವ್ಯವಸಾಯದ ಖರ್ಚು ಖುಷ್ಕಿ ಜಮೀನಿಗೆ ಅರ್ಧಭಾಗವೆಂದು ನಿರ್ಧರಮಾಡಬೇಕೆಂದು ಹೇಳಿದ್ದಾರೆ. ಈ ವಿಚಾರದಲ್ಲಿ ಶ್ರೀಮಾನ್ ದೊಡ್ಡಮೇಟಿಯವರು ಹೇಳಿದ್ದನ್ನೆ ನಾನು ಮತ್ತೆ ಹೇಳಬೇಕಾಗುತ್ತದೆ. ಇದನ್ನು ಯಾರೂ ಒಪ್ಪತಕ್ಕದ್ದಲ್ಲ. ಕೋಲಾರ ಜಿಲ್ಲೆಯಲ್ಲಿ ಪರಿಪೂರ್ಣವಾಗಿ ಬೆಳೆ ಬಂದರೂ ಒಂದು ಎಕರೆಗೆ ಮೂರು ಪಲ್ಲ ರಾಗಿ ಬರುತ್ತದೆ. ರೈತನ ಖರ್ಚಿಗೂ ಸಾಕಷ್ಟಾಗುವುದಿಲ್ಲ. ಅನೇಕಮಂದಿ ಸಣ್ಣ ಹಿಡುವಳಿದಾರರ ಪಾಡು ದೇವರೇ ಬಲ್ಲ. ಅವರು ಪಡತಕ್ಕ ಕಷ್ಟದ, ಜೊತೆಗೆ, ಜಮೀನಿಗೆ ಹಾಕುವ ಗೊಬ್ಬರ, ಬೀಜ ವಗೈರೆ ಎಲ್ಲವನ್ನೂ ಎಷ್ಟೋವೇಳೆ ಕಳೆದುಕೊಳ್ಳುತ್ತಿದ್ದಾನೆ. ಇದರಿಂದ ಅಲ್ಲಿಯ ರೈತ ಉತ್ತಮ ಸಿತಿಗೆ ಬರುವುದಕ್ಕೆ ಅವಕಾಶವೇ ಇಲ್ಲ.

ವ್ಯವಸಾಯದ ಕೂಲಿಕಾರರಿದ್ದಾರೆ. ವ್ಯವಸಾಯವಿಲ್ಲದ ಕಾಲದಲ್ಲಿ ಗ್ರಾಮಾಂತರ ಪ್ರದೇಶಗಳಲ್ಲಿರುವ

(ಶ್ರೀ ಬಿ. ಎಲ್. ನಾರಾಯಣಸ್ವಾಮಿ)

ಕೂಲಿಯ ಜನರು ಹೇಗೆ ಜೀವನ ಮಾಡುತ್ತಿದ್ದಾರೆಂದರೆ ಕೂಲಿ ಸಿಕ್ಕಿದ ದಿವಸ ಊಟ ಮಾಡುತ್ತಾರೆ; ಇಲ್ಲದೆ ಹೋದರೆ ಉಪವಾಸವಿರುತ್ತಾರೆ. ಇಷ್ಟು ಆಶ್ಚರ್ಯವಾಗಿದೆ ವಿಚಾರ. ತಾನು ಏನು ಯೋಚನೆ ಮಾಡುತ್ತಾನೆಂದರೆ ಎರಡು ಎಕರೆ ಜಮೀನು ಸಿಕ್ಕಿದರೆ ಸಾಕು, ಸುಖವಾಗಿರಬಹುದು ಎಂದು. ನಿಜವಾಗಿ ಎರಡು ಎಕರೆ ಜಮೀನಿನಿಂದ ಅವನ ಸ್ಥಿತಿ ಉತ್ತಮಗೊಳ್ಳುತ್ತದೆಯೇ ಎಂದರೆ ಖಂಡಿತವಾಗಿಯೂ ಇಲ್ಲ. ಎರಡು ಎಕರೆ ಜಮೀನನ್ನಿಟ್ಟುಕೊಳ್ಳುವುದಕ್ಕಿಂತ ಜಮೀನಿಲ್ಲದೆ ನಿತ್ಯವೂ ಕೂಲಿ ಮಾಡುತ್ತಿದ್ದರೆ ಅದರಿಂದ ನೆಮ್ಮದಿಯುಂಟು, ಅರೆ ಹೊಟ್ಟೆಯಾದರೂ ತುಂಬಿಕೊಳ್ಳುತ್ತಾನೆ. ಎರಡು ಎಕರೆ ಜಮೀನಿದ್ದರೂ ಸಾಗುವಳಿ ಮಾಡಲು ಎತ್ತು ನೇಗಿಲು ಬೇಡವೆ? ಎಷ್ಟು ದುಡಿದರೂ ಹೊಟ್ಟೆಗೇ ನಡೆಯುವುದಿಲ್ಲ. ಅನೇಕ ಜನ ಹರಿಜನರು ಸರ್ಕಾರದಿಂದ ಜಮೀನನ್ನು ಪಡೆದರೂ ಈ ಒಂದು ಬೇಗೆಯನ್ನು ತಾಳಲಾರದೆ ಜಮೀನನ್ನು ಹಿಂದಕ್ಕೆ ಕೊಟ್ಟಿದ್ದಾರೆ. ಇದೇ ರೀತಿ ಅನೇಕ ಜನ ಬಡವರೂ ಹಿಂದಕ್ಕೆ ಕೊಟ್ಟಿದ್ದಾರೆ. ಬಡವರಿಗೆ ಜಮೀನು ಬೇಡವೆ ಎಂದು ಕೇಳಬಹುದು. ಅವರಿಗೆಲ್ಲ ಜಮಿನು ಕೊಡಬೇಕು. ನಾನು ಇಷ್ಟೆಲ್ಲ ಏಕೆ ವಾದ ಮಾಡುತ್ತಿದ್ದೇನೆಂದರೆ ಈಗಿರತಕ್ಕ.......

ಶ್ರೀ ಮಂಜಪ್ಪ ಉಳ್ಳಾಲ (ಕಾರಕಲ್).—ಈ ಮಸೂದೆಯಿಂದ ಹರಿಜನರಿಗೆ ಪ್ರಯೋಜನವಿದೆ ಎನ್ನುವ ಅಭಿಪ್ರಾಯದಲ್ಲಿ ಮಾತನಾಡುತ್ತಿದ್ದೀರಾ ?

ಶ್ರೀ ಬಿ. ಎಲ್ ನಾರಾಯಣಸ್ವಾಮಿ.—ಹರಿಜನರಿಗೆ ಮತ್ತು ಎಲ್ಲ ಬಡವರಿಗೆ ಒಳ್ಳೆಯದಾಗಬೇಕು. ನಾನು ಇಷ್ಟೊಂದು ಏಕೆ ಹೇಳುತ್ತಿದ್ದೇನೆಂದರೆ ಪ್ರಗತಿಪರವಾದ ಸುಧಾರಣೆಯನ್ನು ಸರ್ಕಾರ ತರಬೇಕಾಗಿದೆ. ಆಹಾರದ ಉತ್ಪತ್ತಿಯನ್ನು ಜಾಸ್ತಿ ಮಾಡಬೇಕೆಂಬ ಉದ್ದೇಶದಿಂದಲೇ ಮೊದಲನೆಯ ಪಂಚವಾರ್ಷಿಕ ಯೋಜನೆಯಾಯಿತು, ಎರಡನೆಯ ಪಂಚವಾರ್ಷಿಕ ಯೋಜನೆ ಮುಗಿಯುತ್ತ ಬಂದಿದೆ. ಇನ್ನು ಮೂರನೆಯ ಯೋಜನೆಯನ್ನು ಪ್ರವೇಶಿಸುತ್ತೇವೆ. ಇಷ್ಟೆಲ್ಲ ಆದರೂ ನಮ್ಮ ದೇಶ ಆಹಾರೋತ್ಪತ್ತಿಯಲ್ಲಿ ಸ್ವಪರಿಪೂರ್ಣವಾದೀತೇ ಎಂದರೆ ಅದು ಕೂಡ ಸಾಧ್ಯವಿಲ್ಲವೆಂದು ಕಾಣುತ್ತದೆ. ಈ ಮಸೂದೆಯ ಮುಖೇನ ಭೂಸುಧಾರಣೆಯನ್ನು ಜಾರಿಗೆ ತಂದು ಆಹಾರದ ಉತ್ಪತ್ತಿಯನ್ನು ಹೆಚ್ಚು ಮಾಡತಕ್ಕದ್ದು ಮೂಲ ಉದ್ದೇಶವಾಗಿದೆ. ಆ ರೀತಿ ಉತ್ಪಾದನೆಯನ್ನು ಹೆಚ್ಚು ಮಾಡಲು ದೇಶದಲ್ಲಿರುವ ರೈತರು ಮುಂದೆ ಬರಬೇಕು. ಈ ವರ್ಗದ ಜನಗಳಿಗೆ ವ್ಯವಸಾಯದ ಕಸಬನ್ನು ಬಹಳ ಗೌರವಯುತವಾದುದನ್ನಾಗಿ ಆಕರ್ಷಣೀಯವಾದುದನ್ನಾಗಿ ಮತ್ತು ರೈತರ ಸ್ಥಿತಿಯನ್ನು ಉತ್ತಮಗೊಳಿಸುವಂಥಾದ್ದನ್ನಾಗಿ ಮಾಡಿದರೆ ರೈತರ ಪ್ರಗತಿಯಾದೀತು, ರೈತರು ಹೆಚ್ಚಿಗೆ ಆಹಾರ ಬೆಳೆದಾರು.

4-30 P.M.

ಹಾಗಿಲ್ಲದೆ ಇರತಕ್ಕಂಥ ರೀತಿಯಲ್ಲಿ ಮಾನ್ಯ ಮಂತ್ರಿಗಳು ಹೇಳಿದ್ದಾರೆ. Well sounding slogansಗೆ ಒಳಗಾಗಿ ಖಾಸಗಿ ಜನರ ಒತ್ತಡಕ್ಕೆ ಸಿಕ್ಕಿ ಸುಧಾರಣೆಯನ್ನು ತಂದಿರುವುದರಿಂದ ಅದರಿಂದ ಯಾವ ಅನುಕೂಲವೂ ಜನಗಳಿಗೆ ಆಗುವುದಿಲ್ಲ. ಪ್ರಗತಿಪರ ಸುಧಾರಣೆ ಆಗಬೇಕಾದರೆ ಮೊದಲು ಮಾಡತಕ್ಕ ಕಾರ್ಯ ಸಣ್ಣ ಸಣ್ಣ ಹಿಡುವಳಿ ಆಗುವುದನ್ನು ತಡೆಗಟ್ಟಬೇಕು. ಫ್ರಾಗ್‌ಮೆಂಟೇಷನ್ ನಿಲ್ಲಿಸಬೇಕು. ಛಿದ್ರವಾಗಿರತಕ್ಕದ್ದನ್ನು ಒಟ್ಟುಗೂಡಿಸಬೇಕು. ಅದು ಕನ್‌ಸಾಲಿಡೇಷನ್. ವ್ಯವಸಾಯ ಮಾಡುವವರಿಗೆ ಎಕನಾಮಿಕ್ ಹೋಲ್ಡಿಂಗ್ಸ್ ಇದ್ದು ಅವರಿಗೆ ಅದರಿಂದ ಜೀವನಕ್ಕೆ ಅವಶ್ಯಕವಾದ ಉತ್ಪತ್ತಿ ಬರಬೇಕು. ಒಂದು ವಿಸ್ತೀರ್ಣ ಪ್ರದೇಶ ಅವನಿಗೆ ಇರಬೇಕು. ಆ ವಿಸ್ತೀರ್ಣ ಪ್ರದೇಶ ಎಷ್ಟು ಇರಬೇಕು ಎಂಬುದನ್ನು ಮಂತ್ರಿಗಳು ಹೇಳಿದ್ದಾರೆ. ಸಾಧಾರಣವಾದ ಜನತೆ ಜೀವನ ಮಾಡಬೇಕಾದರೆ, ತಿಂಗಳಿಗೆ 100 ರೂಪಾಯಿ ಸಂಪಾದನೆ ಇರಬೇಕು. ಸಾಮಾನ್ಯವಾದ ಚಪ್ರಾಸಿಗೆ ಒಂದು ತಿಂಗಳಿಗೆ ನೂರು ರೂಪಾಯಿ ಸಂಬಳ ಬೇಕು ಎನ್ನುವಾಗ, ದೇಶಕ್ಕಾಗಿ ಸಮಾಜಕ್ಕಾಗಿ ಕಷ್ಟಪಟ್ಟು ದುಡಿಯತಕ್ಕಂಥ ರೈತನಿಗೆ ಅಷ್ಟು ಸಂಪಾದನೆ ಬೇಡವೇ? ಬೇಕೇ ಬೇಕು. ಆ ದೃಷ್ಟಿಯಿಂದ ನೂರು ರೂಪಾಯಿನಂತೆ ಸಾಲಿಯಾನ 1,200 ರೂಪಾಯಿ ಸಂಪಾದನೆ ಬರತಕ್ಕಂಥ ವಿಸ್ತೀರ್ಣದ ಎಕನಾಮಿಕ್ ಹೋಲ್ಡಿಂಗ್ಸ್ ಮಾಡಿ ಆ ಪ್ರದೇಶಕ್ಕೆ ಅವನು ಒಡೆಯ ಆಗಿರಬೇಕು. ಈಗ ಫ್ಯಾಮಿಲಿ ಹೋಲ್ಡಿಂಗ್ 1,200 ರೂಪಾಯಿ ಎಂದು ಹೇಳುತ್ತಾರೆ. 1,200 ರೂಪಾಯಿ ನಿರ್ಧಾರ ಮಾಡುವಾಗ ಅದರ ವಿಸ್ತೀರ್ಣ ಎಷ್ಟು ಹೇಳುತ್ತಿರೋ, ಅಷ್ಟೇ ವಿಸ್ತೀರ್ಣದಿಂದ 1,200 ರೂಪಾಯೀ ಆದಾಯ ಬರುತ್ತದೆಯೇ? ಖಂಡಿತಾ ಬರುವುದಿಲ್ಲ. ಬೀಳು ಭೂಮಿ ಇರುತ್ತದೆ. ಅದರಲ್ಲ ಬೆಳೆಯಬೇಕು. ಕಂದಾಯಕ್ಕೆ ತೆತ್ತು, ಗೊಬ್ಬರಕ್ಕೆ ತೆತ್ತು, ಕೂಲಿ ಕೊಟ್ಟು ಬೆಳೆಯಬೇಕು. ಅದಕ್ಕೆ ಬೇಕಾದ ನೀರಾವರಿ ಸೌಕರ್ಯವನ್ನು ಒದಗಿಸಬೇಕು. ಯಾವ ರೈತನೇ ಆಗಲಿ ಕಷ್ಟಪಟ್ಟು ಬೆಳೆದು ದೇಶಕ್ಕೆ ಆಹಾರವನ್ನು ಒದಗಿಸುತ್ತಾನೆ. ದ್ರವ್ಯ ಬರತಕ್ಕ ಬೆಳೆಯನ್ನು ಬೆಳೆದು ಜೀವನವನ್ನು ನಡೆಸುತ್ತಾನೆ. ಆ ದೃಷ್ಟಿಯನ್ನು ಇಟ್ಟು ಏನಾದರೂ ಸುಧಾರಣೆಯನ್ನು ಸಭೆಯ ಮುಂದೆ ಇಟ್ಟಿದ್ದರೆ ಅವರನ್ನು ಕೊಂಡಾಡಬಹುದಾಗಿತ್ತು.

ಶ್ರೀ ಕಡಿದಾಳ್ ಮಂಜಪ್ಪ.—ತಾವು ಎಲ್ಲಾ ಒಪ್ಪಿಕೊಂಡರೆ ನಾವೂ ಒಪ್ಪಿಕೊಳ್ಳುತ್ತೇವೆ.

ಶ್ರೀ ಬಿ. ಎಲ್. ನಾರಾಯಣಸ್ವಾಮಿ.—ಜವಾಬ್ದಾರಿ ನಿಮ್ಮದು. ತಾವು ನಾಯಕರಾಗಿದ್ದೀರಿ,

> "Any scheme relating to agrarian reform should take into account the practial difficulties, the sentiments of the people, the benefits to the State in terms of production and the resulting economic and social justice. When compared to some other avocations, agriculture is not a paying profession even today. In the name of radical reform, we cannot drive the agricultural classes into perpetual poverty. When the people who plead for radical reforms advocate payment of a salary of at least one hundredrupees a month to a Chaprasi, I do not know they will feel happy if an agriculturist is required to eke out his livelihood from one or two acres which he is likely to get on account of the so called radical reforms."

ಇಷ್ಟು ಹೇಳಿದ ಮೇಲೆ ನಿಜವಾಗಿ ರೈತನ ಕಷ್ಟವನ್ನು ಅರಿತು ತಾವು ಸುಧಾರಣೆ ತರಬೇಕು. ಅವರ ವಿಚಾರ

ದಲ್ಲಿ ಎಲ್ಲರಿಗೂ ದಯೆ ಇದ್ದೇ ಇದೆ. ಪ್ರತಿಯೊಬ್ಬ ಬಡ ರೈತನನ್ನೂ ಉದ್ಧಾರ ಮಾಡುವುದು ಬೇಡವೇ? ತಕ್ಷಣ ಉಚಿತವಾಗಿ ಕೊಡಿ ಎಂದು ಹೇಳುವುದಿಲ್ಲ. ಅವರಿಗೆ ನೂರು ರೂಪಾಯಿಗಳನ್ನು ಕೊಡಿ. ಬಾವಿ ತೆಗೆಸಿ ಕೊಡ ಬೇಡವೇ? ಪ್ರತಿಕುಟುಂಬಕ್ಕೆ 20 ಎಕರೆ ಖುಷ್ಕಿ, ಐದು ಎಕರೆ ತರೀ, ಎರಡು ಎಕರೆ ಬಾಗಾಯಿತು ಕೊಡಿ 60 ಎಕರೆ ಕೊಟ್ಟರೂ ನಾನು ಬೇಡ ಎಂದು ಹೇಳುವುದಿಲ್ಲ.

ಶ್ರೀ ಕಡಿದಾಳ್ ಮಂಜಪ್ಪ.—ಮೈಸೂರು ರಾಜ್ಯದಲ್ಲಿ ಸಾಗುವಳಿಗೆ ಯೋಗ್ಯವಾದ ಭೂಮಿಯ ವಿಸ್ತೀರ್ಣ ಎಷ್ಟಿದೆ ಗೊತ್ತೇ?

ಶ್ರೀ ಬಿ. ಎಲ್. ನಾರಾಯಣಸ್ವಾಮಿ.—ಏತಕ್ಕೆ ಈ ರೀತಿ ಮೋಸ ಮಾಡುತ್ತೀರಿ? ದಯವಿಟ್ಟು ಕ್ಷಮಿಸಿ. ಇವೊತ್ತು ದೇಶದ ಜನ ಶ್ರೀ ಕಡಿದಾಳ್ ಮಂಜಪ್ಪನವರು ದಯಾಳು, 20 ಎಕರೆ ಫ್ಯಾಮಿಲಿ ಹೋಲ್ಡಿಂಗ್, 60 ಎಕರೆ ತರಿ, 80 ಎಕರೆ ಖುಷ್ಕಿ ಮತ್ತು 180 ಎಕರೆ ಬಾಗಾಯಿತು ಇಟ್ಟಿದ್ದಾರೆ, ಎಂದು ಹೇಳುತ್ತಾರೆ. ಆದರೆ ನಿಜವಾಗಿಯೂ ಅಷ್ಟು ಭೂಮಿ ಇದೆಯೇ? ಇಷ್ಟು ಉದಾರವಾಗಿ ಹಂಚಿ ಕೊಡುವುದಾದರೆ ಸರ್ಕಾರದ ಅಧೀನದಲ್ಲಿ ಹತ್ತಾರು ಎಕರೆ ಜಮೀನು ಇದೆ, ಅದನ್ನು ಹಂಚಿ. ನಿಜವಾಗಿಯೂ, ಇದು ದೇಶದ ಬಹುಭಾಗದ ಜನರಿಗೆ ಸಂಬಂಧಪಟ್ಟ ಪ್ರಶ್ನೆ. ಇದನ್ನು ಲೀಲಾ ಜಾಲವಾಗಿ ತಾತ್ಸಾರ ಮನೋಭಾವದಿಂದ ನೋಡಬಾರದು. ಈಗಲೂ ಸರ್ಕಾರದವರನ್ನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಇನ್ನೂ ಕಾಲಮೀರಿಲ್ಲ. 25 ಎಕರೆ ಸಾಧ್ಯವಿಲ್ಲ ಎಂದು ನಾನು ಹೇಳುವಾಗ 60 ಎಕರೆ ಎಂದು ನೀವು ಹೇಳುತ್ತೀರಿ. ಕೋಟ್ಯಂತರ ಪ್ರಜೆಗಳು ಹೊರಗೆ ಕಾದು ನೋಡುತ್ತಿದ್ದಾರೆ. ದೇಶದ ಆಗು ಹೋಗುಗಳನ್ನು ಪರೀಕ್ಷೆ ಮಾಡುತ್ತಿದ್ದಾರೆ. ನಿಮ್ಮ ಮತ್ತು ನಮ್ಮ ಭವಿಷ್ಯವನ್ನು ನಿರ್ಧರಿಸುವವರು ಪ್ರಜೆಗಳು.

ಶ್ರೀ ಕಡಿದಾಳ್ ಮಂಜಪ್ಪ.—ಸರಿಯಾದದ್ದು ಯಾವುದು ಎಂಬುದನ್ನು ಹೇಳುತ್ತೀರಾ?

ಶ್ರೀ ಬಿ. ಎಲ್. ನಾರಾಯಣಸ್ವಾಮಿ.—60 ಎಕರೆ ಬೇಕಾಗಿಲ್ಲ. ಕರಾರ್‌ವಾಕ್ ರೈತರು ಬೆಳೆಯ ಬೇಕಾದರೆ ಇಪ್ಪತ್ತೈದು ಎಕರೆ ಇರಬೇಕು. ಅದಕ್ಕೆ ತಕ್ಕ ನೀರಾವರಿ ಸೌಕರ್ಯ ಇರಬೇಕು. ಅದಕ್ಕೆ ಅವಕಾಶ ಮಾಡಿಕೊಡಿ ಎಂದು ಬೇಡಿಕೊಳ್ಳುತ್ತೇನೆ. ಅದು ಬಿಟ್ಟು 60 ಎಕರೆ, 80 ಎಕರೆ, 180 ಎಕರೆ ಎಂದು ಹೇಳಿದರೆ ಇದರಿಂದ ಎಳ್ಳಷ್ಟೂ ಅನುಕೂಲವಾಗುವುದಿಲ್ಲ. ನಮ್ಮ ಜಿಲ್ಲೆಯಲ್ಲಿ ಈ ಕಷ್ಟ ಇದೆ. ಪರಿಹಾರ ಮಾಡಿಕೊಡಿ ಎಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಬೇರೆ ಯಾವ ಮಾರ್ಗದಲ್ಲಿ ಮಾಡಿದರೂ ಅದು ಸುಧಾರಣೆ ಅಲ್ಲ ಎಂದು ಹೇಳುತ್ತೇನೆ. ಬಡವನು ಮತ್ತಷ್ಟು ದರಿದ್ರನಾಗುತ್ತಾನೆ; ಅವನು ಉತ್ತಮವಾಗ ಬೇಕಾದರೆ 1,200 ರೂಪಾಯಿ ಬರತಕ್ಕ ಹೋಲ್ಡಿಂಗ್ಸ್ ಕೊಟ್ಟು ನೀರಿನ ಸೌಕರ್ಯ ಕಲ್ಪಿಸಿ ಕೊಟ್ಟರೆ ಜನ ಸ್ಮರಿಸಿಕೊಳ್ಳುತ್ತಾರೆ. ಅವರ ಜೀವನಸ್ಥಿತಿ ಉತ್ತಮಗೊಳ್ಳುತ್ತದೆ. ಆ ರೀತಿ ಮಾಡಿಕೊಡಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ.

ಸೀಲಿಂಗ್ ವಿಷಯದಲ್ಲಿ ಅನೇಕರು ಹೇಳಿದ್ದಾರೆ ಏನೋ ರೈತರ ವಿಚಾರದಲ್ಲಿ ಇಷ್ಟೊಂದು ಮನಸ್ಸು ಮಾಡಿದ್ದೀರಿ ಬೇರೆ ವಿಚಾರದಲ್ಲಿ ಏತಕ್ಕೆ ಮನಸ್ಸು ಮಾಡಬಾರದು? ಸಮಾಜ ದೃಷ್ಟಿಯಿಂದ ಯೋಚನೆ ಮಾಡಬೇಕು ಭೂಮಿ ಇಟ್ಟುಕೊಂಡಿರುವವನು ಪಾಪಿ, ಮಿಕ್ಕವರು ಸ್ವರ್ಗಲೋಕದಿಂದ ಬಂದವರು ಎಂದು ಏತಕ್ಕೆ ಆಲೋಚನೆ ಮಾಡುತ್ತೀರಿ? ಭೂಮಿ ಪಡೆಯುವುದಕ್ಕೆ ಎಲ್ಲರಿಗೂ ಸಮಾನವಾದ ಹಕ್ಕು ಇದೆ ಎಂದು ವಿನೋಬ ಭಾವೆಯರು ಹೇಳುತ್ತಾರೆ. ಅದು ಸರಿ. ಆದರೆ ವಾಸ್ತವಾಂಶ ಏನಾಗಿದೆ ಎಂದು ಕೊಂಚ ಯೋಚನೆ ಮಾಡೋಣ. ಒಂದೇ ಜಾತಿಗೆ ಸೇರಿದಂಥ ಶ್ರೀಮಂತನಿಗೆ ಅದೇ ಜಾತಿಗೆ ಸೇರಿದಂಥ ಬಡವನನ್ನು ಕಂಡರೆ ತಾತ್ಸಾರ ಮನೋಭಾವ ಅಸ್ಪೃಶ್ಯತೆ ಐಶ್ವರ್ಯಕ್ಕೆ ಬಂದಿದೆಯೇ ಹೊರತು ಜಾತಿಗೆ ಬರಲಿಲ್ಲ. ಅಸ್ಪೃಶ್ಯತೆ ಹೋಗಬೇಕಾದರೆ ಮನುಷ್ಯನ ಆರ್ಥಿಕಸ್ಥಿತಿ ಉತ್ತಮಗೊಳ್ಳಬೇಕು. ಹಾಗಿಲ್ಲದೆ ಸಮಾಜ ಸುಧಾರಿಸುವುದಕ್ಕೆ ಆಗುವುದಿಲ್ಲ. ಜಾತಿಯಿಂದ ಅಸ್ಪೃಶ್ಯತೆ ಇಲ್ಲ. ಬಡವರಿಗೂ ಭಾಗ್ಯವಂತರಿಗೂ ಇರುವ ಭೇದದಿಂದ ಬರುತ್ತದೆ. ಯಾವ ಜಾತಿಯಲ್ಲೇ ಆಗಲಿ ಅವರಲ್ಲಿ ಶ್ರೀಮಂತರಿಗೂ ಬಡವರಿಗೂ ಅಸ್ಪೃಶ್ಯತೆ ಇದೆ. ವ್ಯವಸಾಯ ವಿಧಾನದಲ್ಲಿ ನಿರತರಾಗಿರ ತಕ್ಕವನಿಗೆ ಗೌರವ ಇದೆ ಎಂದು ನೀವು ಒಪ್ಪಿ ಕೊಳ್ಳುವುದಾದರೆ ಆತನಿಗೆ ಅನುಕೂಲ ಮಾಡಿಕೊಡುವುದು ಅಗತ್ಯ. ಅದರಿಂದ ಸಮಾಜಕ್ಕೆ ನ್ಯಾಯ ದೊರಕಿಸಿಕೊಡಬೇಕು. ನಮ್ಮ ರಾಜ್ಯದಲ್ಲಿ urban areaದಲ್ಲಿ ಮಿತಿಗೊಳಿಸಲು ಅವಕಾಶವಿಲ್ಲ. ನಾನು ಒಪ್ಪುತ್ತೇನೆ. ಈಗೇನೋ ಇಷ್ಟೊಂದು ಕಾನೂನು ಮಾಡಿದ್ದೀರಿ. ಆದರೆ ಈಗ್ಗೆ ಕೆಲವು ದಿನಗಳ ಹಿಂದೆ ಆಂಧ್ರದ ಅಸೆಂಬ್ಲಿಯವರು ಇದನ್ನೆಲ್ಲ ಆಲೋಚನೆಮಾಡಿ urban area ceilingನ್ನು ಮಾಡಿದ್ದಾರೆ. ಅವರು ಪ್ರಗತಿಪರರು, ದೂರದೃಷ್ಟಿಯಿಂದ ಮಾಡುವವರು. ಇದನ್ನೆಲ್ಲ ಆಲೋಚಿಸಿ, ಆಂಧ್ರದಲ್ಲಿ urban areaದ ಮೇಲೆ ಸೀಲಿಂಗು ಇರಬೇಕೆಂದು ನಿರ್ಣಯಮಾಡಿದ್ದಾರೆ.

ಶ್ರೀ ಕಡಿದಾಳ್ ಮಂಜಪ್ಪ.—ಆಂಧ್ರದಂತೆಯೇ ನಾವೂ ಅನುಸರಿಸೋಣ.

ಶ್ರೀ ಬಿ. ಎಲ್. ನಾರಾಯಣಸ್ವಾಮಿ.—ಬರಲಿ ಸ್ವಾಮಿ, ಬಹಳ ಸಂತೋಷ.

ಐದು ಜನರಿರುವ ಒಂದು ಕುಟುಂಬಕ್ಕೆ 3,600 ರೂಪಾಯಿಗಳೆಂದು ತಾವು ಸೂಚಿಸಿದ್ದೀರಿ. ಈಗಾಗಲೇ ಭಾಷಣಮಾಡಿದ ಅನೇಕ ಮಹನೀಯರು ಎಲ್ಲರೂ ರೈತರ ಜೀವನಕ್ಕೆ ಮುನ್ನೂರು ರೂಪಾಯಿಗಳೇ ಸಾಲದು, ಇದನ್ನು ಜಾಸ್ತಿಮಾಡಬೇಕೆಂದು ಹೇಳಿದರು. ಶ್ರೀ ಜತ್ತಿಯವರ ವರದಿಯಲ್ಲಿ 5,400 ರೂಪಾಯಿಗಳಷ್ಟು ಮಿತಿ ಇಟ್ಟಿರುವುದು ಸೂಕ್ತವಾಗಿದೆ. ಇಷ್ಟು ಹೆಚ್ಚುಮಾಡಿದರೂ ಪ್ರತಿಯೊಬ್ಬರಿಗೂ, ಈ 5,400 ರೂಪಾಯಿಗಳ ಮಿತಿಯನ್ನು ಮುಟ್ಟುವುದಕ್ಕೆ ಸಾಧ್ಯವಿಲ್ಲ. ಕಷ್ಟಪಟ್ಟು ದುಡಿದು ಮಾಡಲು ಅವಕಾಶವಿದೆ. ಇದನ್ನು ಎಷ್ಟುಮಟ್ಟಿಗೆ ಮಾಡುತ್ತಾರೆಂದು ನಾನು ಹೇಳುವುದಕ್ಕೆ ಆಗುವುದಿಲ್ಲ. ವರದಿಯಲ್ಲಿ ಹೇಳಿದ ಪ್ರಕಾರ 5,400 ರೂಪಾಯಿಗಳು ಇರುವುದು ಯುಕ್ತವಾಗಿದೆ. (*Interruption*) ಮಾನ್ಯ ಮಂತ್ರಿಗಳಲ್ಲಿ ಹೇಳುವುದು, ನನ್ನ ಅಭಿಪ್ರಾಯ ವಿಷ್ಟೆ. ಏನೋ ಜಮೀನನ್ನು ಕೊಡುತ್ತೇವೆಂದು ಎರಡೆರಡು ಎಕರೆ ಕೊಡೋಣವೆಂದು ಹೇಳುವ ಉದ್ದೇಶ ಸರಿಯಾದುದಲ್ಲ. ಯಾವ ಮನುಷ್ಯನು ಯಾವ ವೃತ್ತಿಯನ್ನೇ ಮಾಡಲಿ, ಎಲ್ಲರೂ ಬದುಕಬೇಕು, ಬಾಳಬೇಕು. ಆ ರೀತಿಯಾಗಬೇಕಾದರೆ, ಪ್ರತಿಯೊಬ್ಬ ಮನುಷ್ಯನಿಗೂ ಒಂದೊಂದು ಕುಂದಕವಿರಬಹುದು. ಜಮೀನಿಲ್ಲದೆ ಎಷ್ಟೊಂದು ಜನ ಉಳಿಯುತ್ತಾರೋ ಅವರಿಗೆ ಬೇರೆ ಉದ್ಯೋಗವನ್ನು ಒದಗಿಸುವುದು ಸರಕಾರದ ಕರ್ತವ್ಯ. ಇದರಿಂದ ಅನ್ಯಾಯಗಳಾಗುವುದಕ್ಕೆ ಅವಕಾಶವಿಲ್ಲ.

(ಶ್ರೀ ಬಿ. ಎಲ್. ನಾರಾಯಣಸ್ವಾಮಿ)

ಸ್ವಾಮೀ, ಎಕ್ಸೆಂಪ್‌ಷನ್ನಿನ ವಿಚಾರವಾಗಿ ಅನೇಕರು ಹೇಳಿದ್ದಾರೆ. ನಾನು ಒಂದು ಮಾತನ್ನು ಹೇಳುತ್ತೇನೆ. ದೇಶದಲ್ಲಿ ಧಾನ್ಯದ ಅವಶ್ಯಕತೆ ಜಾಸ್ತಿಯಾಗಿದೆ. ಹಳ್ಳಿಗಾಡಿನ ಪ್ರದೇಶದಲ್ಲೇ ಎರಡು ಎಕರೆಯಷ್ಟು ಭೂಮಿಯನ್ನು ಕೊಟ್ಟರೆ ಎಲ್ಲರಿಗೂ ತೃಪ್ತಿಯಾಗುತ್ತದೆ ಎನ್ನುವುದು ಸರಿಯಲ್ಲ. ಇಷ್ಟರಮೇಲೆ ಈ ಜನಕ್ಕೆ ಕೂಲಿ ಸಿಕ್ಕಬೇಕಾದರೆ ಸರಕಾರದ ರಕ್ಷಣೆ ಇದೆಯೇ ? ಪ್ಲಾಂಟೇಷನ್ ಜನರುಗಳು ತಮ್ಮ ಸ್ವಂತ ಖರ್ಚಿನಿಂದ ಜನರಿಗೆ ಉದ್ಯೋಗವನ್ನು ಒದಗಿಸುವುದರಿಂದ ತಪ್ಪೇನು ? ಇವತ್ತಿನ ಸ್ಥಿತಿಯಲ್ಲಿ ರೈತನು ಕೊನೆಯವರಿಗೆ ಉಳಿಯುತ್ತಾನೆ ಎನ್ನುವ ನಂಬಿಕೆ ಇಲ್ಲ. ಭೂಮಿಯಲ್ಲಿ ಉಳುವ ಗೇಣಿದಾರನಿಗೆ ಸರಿಯಾದ ಅನುಕೂಲವಿಲ್ಲ. ಪ್ಲಾಂಟೇಷನ್ನುಗಳಿಗೆ ಎಕ್ಸೆಂಪ್ಷನ್ ಕೊಡಬಹುದು ಎನ್ನುವುದೇನೋ ಒಳ್ಳೆಯ ಉದ್ದೇಶ. ಇದರಿಂದ ಎಷ್ಟೋ ಜನ ಕೂಲಿಗಾರರಿಗೆ ಉದ್ಯೋಗ ಸಿಕ್ಕುತ್ತದೆ.

ಇನ್ನು orchards ಬಗ್ಗೆ ಹೇಳುವಾಗ್ಗೆ—ಹೂವಿನ ತೋಟಗಳಿಗೆ ವಿನಾಯಿತಿ ಕೊಡಲಾಗಿದೆ. ಆದರೆ ಯಾವ ಯಾವ ತರಹ ಹೂವಿನ ತೋಟಗಳಿಗೆ ಎನ್ನುವುದನ್ನು ಸರಿಯಾಗಿ define ಮಾಡಿಲ್ಲ. ಇದು ಒಂದು ದೊಡ್ಡ ಅನರ್ಥಕ್ಕೆ ಕಾರಣವಾಗುತ್ತದೆ. ಇನ್ನು cashewnut cultivation ದೇಶದ ಆರ್ಥಿಕ ಸ್ಥಿತಿಯನ್ನು ಉತ್ತಮಪಡಿಸುವಂತಹುದು ಮತ್ತು Dollarsನ್ನು ಸಂಪಾದಿಸುವಂತಹುದು. ಇದನ್ನು ಪರದೇಶಗಳಿಗೆ ಕಳುಹಿಸಬೇಕೆನ್ನುವುದು ಇದರ ಉದ್ದೇಶ. ಇದಕ್ಕೆ ಉತ್ತೇಜನ ಕೊಡಬೇಕು ಆದರೆ ಇಲ್ಲಿ ಇದನ್ನೆಲ್ಲ ಸರಿಯಾಗಿ ವಿಶದೀಕರಿಸಬೇಕೆಂದು ಕೇಳುತ್ತೇನೆ.

Sri S. D. KOTHAVALE.—I want to know Hon'ble Member's views regarding coconut, cashewnut and arecanut gardens. I am sure he knows that labour and factory laws are not applicable. Under labour laws the employer should provide medical and maternity benefits. Therefore does the Hon'ble Member say that exemption should be given in favour of these gardens ?

Sri B. L. NARAYANASWAMY.—I know that labour working there do not come under the category of plantation labour. There is a separate department working to fix up minimum wages for other classes of labour also. I can see the point that by allowing coconut and arecanut gardens, it may not solve the problem we have in mind. But nobody can stand in the way of a country prospering in whatever direction it is. My friend need not be very anxious about it. He is also a Member of the Mininum Wages Committee and he may do a lot to improve the condition of the labourers who work there.

Sri S. D. KOTHAVALE.—That is a different matter. The question now is whether exemption should be granted.

Sri B. L. NARAYANASWAMY.—Yes. It should be given. Otherwise we will have to cut away all the trees and dispose of the lands for tilling.

ಎರಡನೆಯದು, specialised farmಗೆ ಎಕ್ಸೆಂಪ್‌ಷನ್ನು ಎಂದು ಹೇಳಿದ್ದಾರೆ. ಇದನ್ನು ವಿಶದೀಕರಿಸಿಲ್ಲ. ಕಾನೂನು ಮಾಡುವಾಗ ಯಾವಾಗಲೂ ನಮಗೆ ಓದುವ ರೀತಿಯಲ್ಲಿ ಸಂಗಳವಾಗಿ ಸುಲಭವಾಗಿ ತಿಳಿಯುವಂತೆ ಅರ್ಥವಾಗುವಂತಿರಬೇಕು. ಇಲ್ಲದಿದ್ದರೆ ಈ ಕಾನೂನು ಬಿಕ್ಕಟ್ಟಿಗೆ ಅವಕಾಶವಾಗುತ್ತದೆ. ಇಲ್ಲಿ Specialsed farm ಎಂದರೆ ಯಾವ ತರಹ ಇರಬೇಕು ಎನ್ನುವುದನ್ನೆಲ್ಲ ವಿಶದೀಕರಿಸಲು ತೊಂದರೆ ಏನು ? ಇದಕ್ಕೆ ನಾವು ceiling limitನ್ನು enforce ಮಾಡಬೇಕೇ, ಎನ್ನುವುದನ್ನು specify ಮಾಡಬೇಕು. ಈ ರೀತಿಯಾಗಿ ವಿಶದೀಕರಿಸಬೇಕೆಂದು ನಾನು ಸೂಚನೆ ಕೊಡುತ್ತೇನೆ. ಹಣ್ಣು ಬೆಳೆಯುವವರಿಗೆ ವಿನಾಯಿತಿ ಇದೆ ಎಂದು ಹೇಳುತ್ತೀರಿ. ಈ ಬಗ್ಗೆ ದೇಶದಲ್ಲಿರುವ ಬೆಂಗಳೂರು ಪಟ್ಟಣವನ್ನು ಒಂದೇ ನಿದರ್ಶನವನ್ನಾಗಿ ತೆಗೆದುಕೊಳ್ಳುವುದು ತಪ್ಪು. ಮಾಲೀಕರುಗಳು ಎಷ್ಟೋ ಕಡೆ ಹಾಗೇ ಜಮೀನನ್ನು ಬಿಟ್ಟಿರಬಹುದು. ಅದನ್ನು ಗಮನಕ್ಕೆ ತೆಗೆದುಕೊಳ್ಳಬೇಕು. Private Forestಗಾಗಿ encourage ಮಾಡುವುದು ಯೋಗ್ಯ. ಅದರಿಂದ ಸಾಗುವಳಿಯಾಗುವ ಜಮೀನನ್ನು ಬಿಟ್ಟು, ಸಾಗುವಳಿ ಆಗದೇ ಇರುವ ಪ್ರದೇಶಗಳಿಗೆ ಈ ಅವಕಾಶ ನೀಡಬೇಕು. ಈ ರೀತಿ ಅವಕಾಶ ಮಾಡತಕ್ಕದ್ದನ್ನು ನಾನು ಒಪ್ಪುತ್ತೇನೆ.

ಸಣ್ಣ ಹಿಡುವಳಿದಾರರಿಗೆ ಮಿಲಟರಿ ಸರ್ವಿಸ್ಸಿನಲ್ಲಿರುವವರಿಗೆ ಒಂದು ವಿನಾಯಿತಿಯನ್ನಿಟ್ಟಿದ್ದಾರೆ. ಇದೇ ರೀತಿಯಾಗಿ ರಿಟೈರಾದ ಸ್ಕೂಲುಮಾಸ್ಟರು, ಜವಾನರು ಮತ್ತು ಇತರ ಸರಕಾರಿ ನೌಕರರು ರಿಟೈರಾದಮೇಲೆ ಜೀವನವನ್ನು ಸಾಗಿಸುವುದು ಕಷ್ಟ. ಅಂತಹವರಿಗೆ ಜಮೀನು ಇಟ್ಟುಕೊಳ್ಳಲು ಅವಕಾಶ ಕೊಡದಿದ್ದಾರೆ. ಉಳುಮೆ ಮಾಡಿಕೊಂಡು ಜೀವನ ಸಾಗಿಸಲು ಅವಕಾಶವಿರುವುದಿಲ್ಲ. ಇಂತಹ ನೌಕರರ ಮಕ್ಕಳಿಗೆಲ್ಲರಿಗೂ ಸರಕಾರಿ ನೌಕರಿ ಸಿಗುತ್ತದೆ ಎಂದು ಹೇಳುವುದಕ್ಕಾಗುವುದಿಲ್ಲ. ಆ ರೀತಿ ಸರಕಾರ ಗ್ಯಾರಂಟಿ ಕೊಡುವುದಕ್ಕೂ ಆಗುವುದಿಲ್ಲ. ಆದ್ದರಿಂದ ಬೇರೆಯವರಿಗೆ ಯಾವ ರೀತಿ ವಿನಾಯಿತಿ ಕೊಡಲಾಗಿದೆಯೋ ಅದೇ ರೀತಿ ರಿಯಾಯಿತಿಯನ್ನು ಇವರಿಗೂ ಕೊಡುವುದು ಯೋಗ್ಯವಾಗಿದೆ.

ಟೆನೆನ್ಸಿ ರೆಸ್ಟೊರೇಶನ್ ವಿಚಾರದಲ್ಲಿ ಒಂದು ಮಾತು ಹೇಳಬೇಕು. 1952ನೆಯ ಇಸವಿಗೆ ಮೊದಲು ಯಾರು ಜಮೀನಿನ ಸ್ವಾಧೀನದಲ್ಲಿದ್ದರೋ, ಅಂಥವರು ಒಂದು ವೇಳೆ ಆ ಭೂಮಿಯನ್ನು ಪುನಃ ಕೊಡಬೇಕೆಂದು ಅರ್ಜಿ ಹಾಕಿಕೊಂಡರೆ, ಗೇಣಿದಾರಿಯನ್ನು ರೆಸ್ಟೋರ್ ಮಾಡಬೇಕೆಂದಿದೆ. ಈ ಸೆಕ್ಷನ್ ಅನಾವಶ್ಯಕ. ಇದರಿಂದ ಅನಾವಶ್ಯಕವಾದ ವ್ಯವಹಾರ ಮತ್ತು ಮಿಶ್ಚೀಫಿಗೆ ಅವಕಾಶವಿದೆ. ನಮ್ಮ ದೇಶದಲ್ಲಿ ಟೆನೆನ್ಸಿ ಕಾನೂನುಗಳು ಬಹಳ ವರ್ಷಗಳಿಂದ ಜಾರಿಯಲ್ಲಿವೆ. ಅದರ ಉಪಯೋಗ ಪಡೆದುಕೊಂಡು ಕೋರ್ಟುಗಳಲ್ಲಿ ಜನಗಳು ವ್ಯವಹಾರ ಹೂಡಿದ್ದಾರೆ. ಈ ಸೆಕ್ಷನ್ನು ಸೂಪರ್‌ಫ್ಲೂಯಸ್ ಪ್ರಾವಿಷನ್. ಇದನ್ನು ಪ್ರೊವೈಡ್ ಮಾಡುವುದರಿಂದ ಮತ್ತಷ್ಟು ಮಿಶ್ಚೀಫು, ವ್ಯವಹಾರ

ಬೆಳೆಯಲಿಕ್ಕೆ ಅವಕಾಶ ಕೊಟ್ಟಂತಾಗುತ್ತದೆ. ಇದರ ಅವಶ್ಯಕತೆಯನ್ನು ಪುನರಾಲೋಚಿಸಬೇಕು.

ಸರ್ಪ್‌ಲಸ್ ಲ್ಯಾಂಡುಗಳಿಗೆ ಕಾಂಪೆನ್ಸೇಷನ್ ಕೊಡುವ ವಿಚಾರದಲ್ಲಿ ಇದುವರೆಗೂ ಅನೇಕರು ಹೇಳಿದರು. ಕೆಲವರು, ಪೂರ್ವಕಾಲದಲ್ಲಿ ಈ ಇನಾಂ ಆಗಿ ಬಂದ ಜಮೀನುಗಳು ದೇಶದ್ರೋಹ ಮಾಡಿದ್ದಕ್ಕೆ, ಆದ್ದರಿಂದ ಅವುಗಳಿಗೆ ಪ್ರತಿಫಲ ಕೊಡಬೇಕಾಗಿಲ್ಲವೆಂದು. ಹೀಗಿರತಕ್ಕಂಥ ಜಮೀನುಗಳೂ ಇವೆ. ಆದರೆ ದುಡ್ಡುಕೊಟ್ಟು ಜಮೀನು ಕೊಂಡಿರುವವರೂ ಇದ್ದಾರೆ. ಒಬ್ಬರ ಜಮೀನನ್ನು ತೆಗೆದುಕೊಂಡಾಗ ಅವರಿಗೆ ಏನು ನ್ಯಾಯವಾದ ಪರಿಹಾರ ಕೊಡಬೇಕೋ, ಅದನ್ನು ಕೊಡಬೇಕು. ಈ ಕಾಂಪನ್ಸೇಷನ್ ಹಣವನ್ನು ಕಂದಾಯದ ಆಧಾರದ ಮೇಲೆ ಏನೋ ಒಂದು ಲೆಕ್ಕ ಹಾಕಿದ್ದಾರೆ, ಸರಾಸರಿ 100—150 ರೂಪಾಯಿ ಎಂದು ನಿರ್ಧಾರ ಮಾಡಿದ್ದಾರೆ. ಇದು ನ್ಯಾಯವಾದುದಲ್ಲ. ಯಾವಾಗ್ಲೂ, ಒಬ್ಬರ ಸ್ವತ್ತು ತೆಗೆದುಕೊಂಡಾಗ, 20 ವರ್ಷದ ಸರಾಸರಿ ಲೆಕ್ಕತೆಗೆದುಕೊಳ್ಳಿ, ಮಾರುಕಟ್ಟೆ ಬೆಲೆಗೆ ಅನುಸಾರವಾಗಿ ನಿರ್ಧಾರಮಾಡಿ ಕೊಡಿ. ನೀವು ಕೊಡುವ ಪರಿಹಾರ ಧನವನ್ನು ಭೂಮಾಲೀಕರು ಬೇರೆ ಕಡೆ ಇನ್‌ವೆಸ್ಟ್‌ಮಾಡಿ ಜೀವನ ಯಾತ್ರೆ ನಡೆಸಿಕೊಳ್ಳಲಿ. ನೀವು 180 ರೂಪಾಯೋ, 200 ರೂಪಾಯೋ ಕೊಟ್ಟರೆ, ಅವರಿಗೆ ಉಪಕಾರವಾಗುವುದಿಲ್ಲ; ಅಪಕಾರವಾಗುತ್ತದೆ. ಅವರ ವಿಚಾರದಲ್ಲಿ ಕೂಡ ನ್ಯಾಯವಾಗಿ ವರ್ತಿಸೋಣ.

ಈ ಭೂಮಿ ಹಂಚಿಕೆಯ ವಿಚಾರದಲ್ಲಿ ಒಂದು ಮಾತು. ಹಂಚುವ ಭೂಮಿ ಒಂದು ಎಕನಾಮಿಕ್ ಹೋಲ್ಡಿಂಗ್ ಆಗಿರಬೇಕು. ಆ ದೃಷ್ಟಿಯಿಂದ ನಾನು ಪದೇ ಪದೇ ಒತ್ತಿ ಹೇಳಬೇಕಾಗಿದೆ. ಸಾಕಷ್ಟು ಭೂಮಿ ಇಲ್ಲದೆ ಯಾವ ರೈತರೂ ಉದ್ಧಾರವಾಗಲಾರರು. ದಯವಿಟ್ಟು ಎಕನಾಮಿಕ್ ಹೋಲ್ಡಿಂಗ್ ಆಗುವ ರೀತಿಯಲ್ಲಿ ಭೂಮಿಯನ್ನು ಹಂಚಿಕೆ ಮಾಡಿಕೊಡಬೇಕು.

ಕೋ-ಆಪರೇಟೀವ್ ಫಾರ್ಮಿಂಗ್ ಎಂದು ಒಂದು ವಿಚಾರ ಬಂದಿದೆ. ಸೀಲಿಂಗ್ ವಿಚಾರದಲ್ಲಿ ಹೇಳುತ್ತಾ ಅನೇಕರು ಸ್ಟಾಂಡರ್ಡ್ ಎಕರೇಜ್‌ಮೇಲೆ ಮಾಡಬೇಡಿ ಎಂದು ಹೇಳಿದರು. ಈ ಬಿಲ್ಲಿನಲ್ಲಿರತಕ್ಕಂಥ ರೀತಿಯಲ್ಲಿ ಸ್ಟಾಂಡರ್ಡ್ ಎಕರೇಜ್‌ಮೇಲೆ ಪರಿಮಿತಿ ನಿಗದಿ ಮಾಡುತ್ತೇವೆಂದು ಹೇಳುತ್ತೀರಿ. ಅನೇಕ ಕಡೆ ಹೆಚ್ಚು ಉತ್ಪತ್ತಿ ಬರತಕ್ಕಂಥ ಜಮೀನುಗಳಿವೆ; ಕೆಲವು ಕಡೆ ಬೀಳು ಜಮೀನು ಇರುತ್ತದೆ. ಆದ್ದರಿಂದ ಒಂದು ಕಡೆ 30 ಎಕರೆಯಲ್ಲಿ ಬಾರುವಷ್ಟು ಉತ್ಪತ್ತಿ ಇನ್ನೊಂದು ಕಡೆ 100 ಎಕರೆಗಳಲ್ಲಿ ಬರದಿರಬಹುದು. ಒಂದು ಜಮೀನಿನಲ್ಲಿ ಸಾವಿರ ರೂಪಾಯಿ ಸಂಪಾದನೆ ಬರುತ್ತದೆ, ಇನ್ನೊಂದರಲ್ಲಿ ನೂರು ರೂಪಾಯಿ ಬರುವುದಿಲ್ಲ. ಆದಕಾರಣ ಆದಾಯದ ಆಧಾರದಮೇಲೆ ಭೂಮಿಯ ವಿಸ್ತೀರ್ಣವನ್ನು ನಿಗದಿಮಾಡುವುದು ಕ್ರಮವಾದುದು.

ಕೋ-ಆಪರೇಟಿವ್ ಫಾರ್ಮಿಂಗ್ ವಿಚಾರದಲ್ಲಿ ಕೆಂಚಪ್ಪನವರು ಅಪ್ಪಣೆ ಕೊಡಿಸಿದರು :

"Co-operative farming is an ideal thing provided there is genuine co-operation among the people concerned and provided the management is run by men of integrity and efficiency coupled with a sense of service."

ಈಗ ದೇಶದಲ್ಲಿರತಕ್ಕಂಥ ಸಹಕಾರ ಸಂಘಗಳು ಎಷ್ಟರಮಟ್ಟಿಗೆ ನಡೆಯುತ್ತಿವೆ ಎಂಬುದು ಎಲ್ಲರಿಗೂ ಗೊತ್ತಿದೆ. ಇವುಗಳ ವಿಚಾರದಲ್ಲಿ ಅನೇಕ ದೂರುಗಳು ಬರುತ್ತಿವೆ. ನಾವು ಹೆಚ್ಚಿನ ಟೀಕೆಗೆ ಹೋಗಬೇಕಾಗಿಲ್ಲ. ಸಹಕಾರ ವ್ಯವಸಾಯ ಪದ್ಧತಿಗೆ ನಮ್ಮ ದೇಶದಲ್ಲಿ ಇನ್ನೂ ವಾತಾವರಣ ಪರಿಪಕ್ವವಾಗಿಲ್ಲವೆಂದು ಒಪ್ಪಿಕೊಳ್ಳಲೇಬೇಕು. ನಮ್ಮ ದೇಶದಲ್ಲಿ ಹರಿಶ್ಚಂದ್ರರು ಬಹುಮಂದಿ ಇಲ್ಲ; ಇದ್ದವರಲ್ಲಿ ಬಹಳ ಮಂದಿ ಹೋಗಿಬಿಟ್ಟರು, ಮಹಾತ್ಮ ಗಾಂಧಿಯವರು ಹೋಗಿಬಿಟ್ಟರು. ಮೇಲ್ಮಟ್ಟದಲ್ಲಿ ನೋಡಿ ನಡೆದುಕೊಂಡರೆ ಏನೂ ಪ್ರಯೋಜನವಿಲ್ಲ. ಶ್ರೀಮಂತರ ಹತ್ತಿರವಿರುವ ಹೆಚ್ಚು ಭೂಮಿಯನ್ನು ಒಂದುಗೂಡಿಸಿ, ಒಂದು ಕೋ-ಆಪರೇಟಿವ್ ಸೊಸೈಟಿಮಾಡಿ, ಅದಕ್ಕೆ ಮೆಂಬರುಗಳನ್ನು ಸೇರಿಸಿ, ಸಂಸ್ಥೆಯನ್ನು ನಡೆಸುತ್ತೀರಿ. ಆದರೆ ಸಾಲದ ಹೊರೆ ರೈತನ ತಲೆಯಮೇಲೆ ಇರುತ್ತದೆ. ಭೂಮಿಯಿಂದ ಬರತಕ್ಕಂಥ ಪ್ರತಿಫಲ, ಮತ್ತು ಹಣವನ್ನೆಲ್ಲಾ ಹಾಕಿದರೂ ಜೀವನ ನಡೆಸುವುದೇ ರೈತನಿಗೆ ಕಷ್ಟವೆಂದು ನಮ್ಮ ಅನುಭವದಿಂದ ಗೊತ್ತಿದೆ. ಇನ್ನು ಅವನಿಗೆ ಸಾಲ ತೀರಿಸುವುದಕ್ಕೆ ಶಕ್ತಿ ಎಲ್ಲಿಂದ ಬರುತ್ತದೆ? ಅವನು ಬದುಕುತ್ತಾನೆಯೋ? ನಾವು ಕೆಲವು ಹಿಂದಿನ ಹಳ್ಳಿಗಳ ದಾಖಲೆಗಳನ್ನು ನೋಡಿದರೆ ವರ್ಷಾನುಗಟ್ಟಲೆ ನೂರು ರೂಪಾಯಿ ಸಾಲವನ್ನು ತೀರಿಸದಿದ್ದ ದೃಷ್ಟಾಂತಗಳಿವೆ. ಹೀಗಿರುವಾಗ ಈ ವ್ಯವಸಾಯ ಪದ್ಧತಿಗೆ ಕಾಲ ಪರಿಸ್ಥಿತಿ ಇನ್ನೂ ಪರಿಪಕ್ವವಾಗಿಲ್ಲ. ಸ್ಲೋ ಅಂಡ್ ಸ್ಟಡಿ ಪ್ರೋಗ್ರೆಸ್ ಮಾಡಬೇಕು. ವಿನೋಬಾಜಿಯವರು ಹೇಳಿರುವಹಾಗೆ ಯಾವ ಪರ್ಯಂತರ ತನ್ನದು, ತನ್ನ ಮಾಲೀಕತ್ವ ಎಂಬ ಭಾವನೆ ಮನುಷ್ಯರಲ್ಲಿ ಇರುತ್ತದೆಯೋ, ಅಲ್ಲಿಯ ತನಕ ಕೋ-ಆಪರೇಟೀವ್ ಫಾರ್ಮಿಂಗ್ ಸರಿಯಾಗಿ ಕೆಲಸ ಮಾಡುವುದಿಲ್ಲ. ಅವಕ್ಕೆ ಬದಲಾಗಿ ರಷ್ಯನ್ ಮೆಥಡ್ ಪ್ರಾರಂಭಮಾಡಿದರೆ ಕಾಲಕ್ರಮೇಣ ನೀವು ಸರ್ವೋದಯ ಪದ್ಧತಿಯನ್ನಾದರೂ ಜಾರಿಗೆ ತರಬಹುದು.

ಒಬ್ಬ ಸದಸ್ಯರು.—ಸರ್ವೋದಯಕ್ಕೂ ಬಾಲ್‌ಷೆವಿಸಿಮ್ಮಿಗೂ ವ್ಯತ್ಯಾಸವಿಲ್ಲವೆಂದು ಹೇಳುತ್ತೀರಾ?

ಒಬ್ಬ ಸದಸ್ಯರು.—ಮ್ಯಾಡ್‌ನೆಸ್ ಅಂಡ್ ಫಿಲಾಸಫಿಗೆ ಎಷ್ಟು ವ್ಯತ್ಯಾಸವಿದೆಯೋ, ಅಷ್ಟೇ ವ್ಯತ್ಯಾಸವಿದೆ.

5 P.M.

ಶ್ರೀ ಬಿ. ಎಲ್. ನಾರಾಯಣಸ್ವಾಮಿ.—ಎಲ್ಲಾ "ಇಸಂ" ನಲ್ಲಿಯೂ ಒಳ್ಳೆಯದಿದೆ. ಎಲ್ಲಾ ಪದ್ಧತಿಗಳ ಒಳ್ಳೆಯ ಪ್ರತಿಫಲ ನಮಗೆ ಬರಲಿ. ಕೋ-ಆಪರೇಟೀವ್ ಫಾರ್ಮಿಂಗ್ ಒಂದು ಕೆಲಸಮಾಡಿದರೆ ಸಾಕೆಂದು ಕಾಣುತ್ತದೆ. ಅನೇಕ ಜನ ಭೂಹೀನರಿದ್ದಾರೆ, ಒಕ್ಕಲತನದಲ್ಲಿ ಕೂಲಿಗಾರರಿದ್ದಾರೆ, ಅವರಿಗೆ ಭೂಮಿ ಇರುವುದಿಲ್ಲ. ಪಡೆದುಕೊಂಡ ಭೂಮಿಯ ಮೇಲೆ ಸಾಲದ ಹೊರೆ ಇದ್ದೇ ಇರುತ್ತದೆ. ಆದರೆ ಐಕಮತ್ಯದಿಂದ ಇದ್ದರೆ, ಬರತಕ್ಕಂಥ ಪ್ರತಿಫಲದಲ್ಲಿ, ಖರ್ಚುವೆಚ್ಚ ಹೋಗಿ, ಮಿಕ್ಕದ್ದನ್ನು ಹಂಚಿಕೊಳ್ಳುವುದಾದರೆ, ಲಯಬಿಲಿಟೀಸ್ ರೈತನ ಮೇಲೆ ಬರುವುದಿಲ್ಲ. ಆವಾಗ ಭೂಮಿಯನ್ನು ಹೆಚ್ಚಿಗೆ ಇಂಪ್ರೂ ಮಾಡುವುದಕ್ಕೆ, ನೀರಾವರಿ ಸೌಕರ್ಯಗಳನ್ನು ವಹಿಸಿಕೊಳ್ಳುವುದಕ್ಕೆ, ಸೊಸೈಟಿಗೆ ಚೈತನ್ಯವಿರುತ್ತದೆ. ಈ ಒಂದು ಉಪಯೋಗವನ್ನು ಸೊಸೈಟಿಯಿಂದ ಮಾಡುತ್ತೇವೆಂದರೂ ಕೆಲವು ಕಾಲದನಂತರ ಕೋ-ಆಪರೇಟಿವ್ ಫಾರ್ಮಿಂಗ್ ಯೋಚನೆಮಾಡಿ. ಈಗಿನ ಪರಿಸ್ಥಿತಿಯಲ್ಲಿ ಕೋ-ಆಪರೇಟಿವ್ ಫಾರ್ಮಿಂಗನ್ನು

(ಶ್ರೀ ಬಿ. ಎಲ್. ನಾರಾಯಣಸ್ವಾಮಿ)

ತರುವುದು ಎಳ್ಳಷ್ಟೂ ಒಳ್ಳೆಯದಲ್ಲ. ಯಾವ ಕೆಲಸವೇ ಮಾಡಲಿ, ಅದನ್ನು ಬಲೋದ್ಬಂಧಿಲು ಮಾಡುವುದು ಬೇಡ. ಈ ಮಸೂದೆಯಲ್ಲಿರತಕ್ಕ ಪ್ರಾವಿಜನ್ಸ್ ಕೆಲವು ಬಹಳ ಅನುಮಾನಾಸ್ಪದವಾಗಿವೆ, ಅರ್ಥವಿವರಣೆಯಲ್ಲಿ ವ್ಯತ್ಯಾಸವಾಗಲು ಕಾರಣವಿದೆ. ಯಾವುದಾದರೂ ಕಾನೂನುಗಳನ್ನು ಮಾಡುವಾಗ ಸಾಮಾನ್ಯ ಮನುಷ್ಯರೂ ಕೂಡ ಸ್ಪಷ್ಟವಾಗಿ ಅರ್ಥಮಾಡಿಕೊಳ್ಳುವ ರೀತಿಯಲ್ಲಿಯೂ ಮತ್ತು ಸುಲಭ ಶೈಲಿಯಲ್ಲಿಯೂ ಇರುವ ಹಾಗೆ ವ್ಯವಸ್ಥೆಮಾಡಬೇಕು. ಆ ರೀತಿ ಈ ಮಸೂದೆಯಲ್ಲಿ ಅನೇಕ ಕಾನೂನುಗಳನ್ನು ಮಾಡಬೇಕಾಗಿ ಬರುತ್ತದೆ. ಈ ಮಸೂದೆ ಸೆಲೆಕ್ಟ್ ಕಮಿಟಿಗೆ ರೆಫರ್ ಆದಮೇಲೆ, ಸೆಲೆಕ್ಟ್ ಕಮಿಟಿಯ ಸದಸ್ಯರು ಈ ವಿಷಯವನ್ನು ಕೂಲಂಕಷವಾಗಿ ಪರಿಶೀಲನೆ ಮಾಡುತ್ತಾರೆಂದು ನಂಬಿ, ನನಗೆ ಇಷ್ಟು ಹೊತ್ತು ಈ ಮಸೂದೆಯ ಮೇಲೆ ಇಲ್ಲಿ ಮಾತನಾಡಲು ಒಂದು ಸದವಕಾಶವನ್ನು ಕಲ್ಪಿಸಿಕೊಟ್ಟಂಥ ನಮ್ಮ ಅಧ್ಯಕ್ಷರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

[SRI K. MALLAPPA in the Chair]

†ಶ್ರೀ ಎಸ್. ವೈ. ಪಾಟೀಲ್ (ಸಿಂಧ್ಗಿ).—ಸ್ವಾಮಿ, ಈ ಭೂಸುಧಾರಣೆಯನ್ನು ಸಂಪೂರ್ಣವಾಗಿ ವಿಚಾರ ಮಾಡಿದ್ದೇ ಆದರೆ ಮತ್ತು ಇದರ ಬಗ್ಗೆ ಭಾರತದ ಪರಿಸ್ಥಿತಿಯನ್ನು ಇವತ್ತಿನ ದಿವಸ ಹೋಲಿಸಿ ನೋಡಿದರೆ ಇದು ಅಷ್ಟೇನೂ ಕ್ರಾಂತಿಕಾರಕ ಮಸೂದೆ ಅಲ್ಲವೆಂದು ಹೇಳಬಹುದು. ಏಕೆಂದರೆ ಇಲ್ಲಿಯವರೆಗೆ ಮಾತನಾಡಿದಂಥ ಮಾನ್ಯ ಸದಸ್ಯರು ಸೀಲಿಂಗ್ ಒಳಗೆ ಕೊಟ್ಟರೆ ಎಷ್ಟು ಭೂಮಿ ಒಬ್ಬೊಬ್ಬರಿಗೆ ಬರುತ್ತದೆ, ಜಮೀನು ಇಲ್ಲದವರಿಗೆ ಭೂಮಿ ಬರುತ್ತದೋ ಇಲ್ಲವೋ ಎಂಬ ದೃಷ್ಟಿಯಿಂದ ವಿಚಾರಮಾಡಿದ್ದಾರೆಯೇ ಎಂದರೆ ಏನೂ ಇಲ್ಲ. ಯಾರಿಗೆ ಭೂಮಿ ಕೊಡಬೇಕು ಯಾರಿಗೆ ಭೂಮಿ ಕೊಡಬಾರದು ಎನ್ನುವ ಪ್ರಶ್ನೆ ಇಲ್ಲ. ಅನ್ನದ ಸಮಸ್ಯೆಯನ್ನು ಬಿಡಿಸಲಿಕ್ಕೆ ಇದು ಅಷ್ಟೇನೂ ಪರಿಣಾಮಕಾರಿಯಾಗಲಾರದು. ಆದರೂ ಮೈಸೂರು ರಾಜ್ಯದ ಜನತೆಯ ಮನಸ್ಸನ್ನು ಅವಲೋಕಿಸಿ ಇದ್ದ ಪರಿಸ್ಥಿತಿಯಲ್ಲಿ ಇಂತಹ ಒಂದು ಬಿಲ್ಲನ್ನು ತಂದಿದಕ್ಕಾಗಿ ನನ್ನ ಅತ್ಯಂತ ಸಂತೋಷವನ್ನು ವ್ಯಕ್ತಪಡಿಸುತ್ತೇನೆ. ಪರಮೇಶ್ವರನ ಹೆಸರ ಹೇಳಿ ಪೂಜಾರಿ ದಕ್ಷಿಣೆ ಸಂಪಾದಿಸುವ ಹಾಗೆ ಕೆಲವು ಸದಸ್ಯರು, ರೈತನ ಹಿತಸಾಧನೆಯಾಗಬೇಕು, ರೈತನ ಕಲ್ಯಾಣವಾಗಬೇಕು ಎಂದು ಹೇಳುತ್ತಾ ತನ್ನ ಭೂಮಿ ಹೇಗೆ ಉಳಿಯಬೇಕೆಂಬ ತತ್ವವನ್ನು ಪ್ರತಿಪಾದನೆ ಮಾಡುತ್ತಿರುವ ಸ್ಥಿತಿ ಈಗ ಕಾಣುತ್ತಿದೆ. ಆದ್ದರಿಂದ ಮಾನ್ಯ ಮಂತ್ರಿಗಳು ಈ ವಿಷಯವನ್ನು ಕೂಲಂಕಷವಾಗಿ ವಿಚಾರಮಾಡಿ ಭೂ ಒಡೆಯರಿಗೆ ಯಾವ ರೀತಿಯ ಸೌಲಭ್ಯಗಳನ್ನು ಕಲ್ಪಿಸಿ ಕೊಟ್ಟಿದ್ದಾರೋ ಅದೇ ರೀತಿಯ ಅನುಕೂಲಗಳನ್ನು ದೇಶದಾದ್ಯಂತ ರೈತರಿಗೆ ಒದಗಿಸಿ ಕೊಡಬೇಕು. ಸೀಲಿಂಗ್ ಹಾಕುವುದರಿಂದ ಶೇಕಡ 60 ಜನರಿಗೆ ತೊಂದರೆಯಾಗುವುದಿಲ್ಲ. ಜಮೀನು ಹೋಗುತ್ತದೆಂದೂ ಸಹ ಹೇಳುವುದಿಲ್ಲ. ಈ ಮಸೂದೆಯಲ್ಲಿ ಒಂದು ಅತ್ಯಂತ ಮಹತ್ವವಾದಂಥ ವಿಷಯ ಇದೆ. ಬೇಸಿಕ್ ಹೋಲ್ಡಿಂಗ್ ಎಂದು ಕೆಲವು ಎಕರೆ ಭೂಮಿಯನ್ನು ಅಂಗಹೀನರಿಗೆ, ಮಿಲಟರಿ ಜನರಿಗೆ, ವಿಧವೆಯರಿಗೆ ಕೊಡಿಸುವ ವಿಷಯ ಹೇಳಿದೆ. ಅವರಿಗೆ ಸ್ವಲ್ಪ ವಿನಾಯಿತಿ ತೋರಿಸಿ ಕೊಡುವುದು ಬಹಳ ಮಹತ್ವವಾದಂಥ ವಿಷಯ. ಶಿಕ್ಷಕರಿಗೆ ಏಕೆ ಆ ರೀತಿ ವಿನಾಯಿತಿ ಕೊಡಬಾರದು ? ಶಿಕ್ಷಕರಿಗೆ ವಿನಾಯಿತಿ ಇರಬೇಕು ಎಂದು ನಾನು ಹೇಳುತ್ತೇನೆ. ಇನ್ನು ಸೀಲಿಂಗ್ ವಿಷಯ. ಈ ಪ್ರಶ್ನೆ ಬಹಳ ಮುಖ್ಯವಾದುದು. ಎಷ್ಟೋ ಜಮೀನು ಒಡೆಯರಿಗೆ ಅವರ ಜಮೀನು ಎಲ್ಲಿ ಇರುತ್ತದೆ ಎಂದು ಗೊತ್ತಿರುವುದಿಲ್ಲ. ಮದ್ರಾಸಿನಲ್ಲೋ ಅಥವಾ ಇನ್ನೊಂದು ಕಡೆಯೋ ವಾಸ ಮಾಡುತ್ತಿರುತ್ತಾರೆ. ಆಗ ತಮ್ಮ ಜಮೀನು, ಪೂರ್ವಿಕರು ಸಂಪಾದಿಸಿದ್ದು ಎಂದುಕೊಂಡು ಭೂಒಡೆಯರಾಗಿರುತ್ತಾರೆ. ಅಂತಹ ಪ್ರದೇಶಗಳಿಗೆ ಸೀಲಿಂಗ್ ಹಾಕುವಾಗ, ಮಧ್ಯಮ ವರ್ಗದವರಿಗೆ ಒಂದು ಕಾಯಿದೆ ಮಾಡಬೇಕು. ಈ ದೃಷ್ಟಿಯಿಂದ ನಾನು ಹೇಳುವುದಿಷ್ಟೆ. ಜತ್ತೀಸಮಿತಿ ವರದಿಯ ಪ್ರಕಾರ ಏನು 5,400 ರೂಪಾಯಿಗಳ ಪರಿಮಿತಿಯನ್ನು ಇಟ್ಟಿದ್ದಾರೋ ಅದರಂತೆ ಸೀಲಿಂಗ್ ಇಡಬೇಕು. ಒಟ್ಟಿನಲ್ಲಿ 5,400 ರೂಪಾಯಿಗಳವರೆಗೆ ಸೀಲಿಂಗ್ ಇಡುವುದರಲ್ಲಿ ಏನೂ ಅಡ್ಡಿಯಿಲ್ಲವೆಂದು ನನ್ನ ಅಭಿಪ್ರಾಯ. ಈ ಸೀಲಿಂಗಿಗಿಂತ ಹೆಚ್ಚಿನ ಭೂಮಿಯನ್ನು ಸರ್ಕಾರದವರು ವಶಪಡಿಸಿಕೊಂಡು ಅದಕ್ಕೆ ಸೂಕ್ತ ಪರಿಹಾರ ಕೊಡಬೇಕು. ಇವತ್ತು ಯಾರ ಕೈಯಲ್ಲಿ ಭೂಮಿ ಇದೆಯೆಂದರೆ ಚೆನ್ನಾಗಿ ದುಡಿಯದೇ ಇರುವವರ ಕೈಲಿ ಉತ್ತಮವಾದ ಜಮೀನು ಇದೆ. ಯಾರೂ ಪ್ರತ್ಯಕ್ಷವಾಗಿ ಭೂಕೆಲಸಮಾಡುವ ಜನರು ಇಲ್ಲ. ಕೂಲಿಗಾರರಿಂದ ವ್ಯವಸಾಯ ಮಾಡಿಸುವ ಜನರು ಹೆಚ್ಚಿಗೆ ಇದ್ದಾರೆ. ಸ್ವಂತವಾಗಿ ಜಮೀನು ಮಾಡಬೇಕಾದರೆ ಐದು ಎಕರೆಗಿಂತ ಹೆಚ್ಚು ವ್ಯವಸಾಯ ಮಾಡಲು ಸಾಧ್ಯವಿಲ್ಲವೆಂದು ನಾನು ಪ್ರತ್ಯಕ್ಷ ಅನುಭವದಿಂದ ಹೇಳುತ್ತಿದ್ದೇನೆ. ನಾನು ಸುಮಾರು ಆರು ಎಕರೆ ಭೂಮಿ ಮಾಡುತ್ತಿದ್ದೇನೆ. ನನಗೆ ಬರುವ ಉತ್ಪನ್ನ ಆರು ಎಕರೆಗೆ 70 ಚೀಲ ಧಾನ್ಯ ಬರುತ್ತದೆ. ಬಹಳ ಭೂಮಿ ಇದ್ದರೆ, ಅದನ್ನು ವ್ಯವಸಾಯ ಮಾಡುವುದಕ್ಕೆ ಯಾಂತ್ರಿಕ ದೃಷ್ಟಿಯಿಂದಾಗಲೀ ಅಥವಾ ಕೋ-ಆಪರೇಟಿವ್ ಫಾರಂನಿಂದಾಗಲೀ ಸಾಧ್ಯವೇ ಹೊರತು ಮತ್ತೆ ಬೇರೊಂದರಿಂದಲ್ಲ.

ಕೋ-ಆಪರೇಟಿವ್ ಫಾರಂ ಸಲುವಾಗಿ ಒಂದು ಮಾತು. ಇವತ್ತಿನ ದಿವಸ ನಾನು ಪ್ರತ್ಯಕ್ಷವಾಗಿ ಅನೇಕ ಹಳ್ಳಿಗಳಿಗೆ ಹೋಗಿ ನೋಡಿದ್ದೇನೆ. ಇವೊತ್ತಿನ ದಿವಸ ಪ್ರತಿಯೊಂದು ತಾಲ್ಲೂಕಿನ ಸ್ಥಿತಿಗತಿಗಳನ್ನು ಪ್ರತ್ಯಕ್ಷವಾಗಿ ವಿಚಾರಮಾಡಿ ತಿಳಿದುಕೊಳ್ಳ ಬೇಕಾಗಿದೆ. ಒಂದು ಭಾಗದ 2/3 ಭಾಗ ಜನರು ಒಪ್ಪಿದರೆ, ಉಳಿದ ಒಂದುಭಾಗದ ಜನರನ್ನು ಬಲಾತ್ಕಾರದಿಂದ ಕೋ-ಆಪರೇಟಿವ ಫಾರಮ್ಮಿಗೆ ಸೇರಿಸಿಕೊಳ್ಳಬೇಕೆಂದು ಹೇಳುತ್ತಿದ್ದಾರೆ. ಅದು ಸರಿಯಲ್ಲ. ಎಲ್ಲರೂ ತಾವಾಗಿಯೇ ಒಪ್ಪಿಕೊಂಡರೆ ಅದನ್ನು ಮಾಡಬಹುದು, ಇಲ್ಲದಿದ್ದರೆ ಮಾಡಬಾರದೆಂದು ನನ್ನ ಅಭಿಪ್ರಾಯ.

ಶ್ರೀ ಡಿ. ಮೂಕಪ್ಪ (ಸಾಗರ).—ಗೇಣಿ ನಿರ್ಧಾರ ಮಾಡುವ ವಿಚಾರದಲ್ಲಿ ಅಭಿಪ್ರಾಯವನ್ನು ಕೊಡಲಾಯಿತು. ಮಾನ್ಯಸದಸ್ಯರು ಗೇಣಿಯನ್ನು ವಸೂಲ್ಮಾಡುವವರೋ ಅಥವಾ ಕೊಡುವವರೋ ಎಂಬುದನ್ನು ಹೇಳುತ್ತಾರೆಯೇ ?

ಶ್ರೀ ಎಸ್. ವೈ. ಪಾಟೀಲ್.—ನಾನು ಗೇಣಿ ವಸೂಲುಮಾಡುವವನೂ ಅಲ್ಲ ಕೊಡುವವನೂ ಅಲ್ಲ. ಸ್ವಂತ ಒಕ್ಕಲುತನಮಾಡತಕ್ಕ ರೈತ.

ಮೂರನೆಯ ಒಂದು ಅಂಶದ ಜನರನ್ನೂ ಬಲಾತ್ಕಾರದಿಂದ ಕೋ-ಆಪರೇಟಿವ್ ಫಾರ್ಮಿಂಗ್‌ನಲ್ಲಿ ಸೇರಿಸಬಾರದೆನ್ನುವುದು ಮಹತ್ವದ ಪ್ರಶ್ನೆ.

ಲ್ಯಾಂಡ್ ಕಮಿಷನ್ನಿಗೆ ಹೈಕೋರ್ಟ್ ಜಡ್ಜ್‌ಗಳನ್ನು ಅಧ್ಯಕ್ಷರನ್ನಾಗಿ ಮಾಡಬೇಕೆಂದಿರುವುದು ಸೂಕ್ತ

ವಾಗಿದೆ. ಆದರೆ ಟ್ರಿಬ್ಯುನಲ್‌ನಲ್ಲಿ ಮಾತ್ರ ರೆವಿನ್ಯೂ ಅಧಿಕಾರಿಗಳು ಇರಬೇಕೆಂದು ಸೂಚಿಸಿದ್ದಾರೆ. ಇವರು ಈ ಕಾಯಿದೆಯ ವಿಷಯದ ಮೇಲೆ ನಿರ್ಧಾರಮಾಡಬೇಕಾಗಿದೆ. ಈ ಸ್ಥಾನಗಳಿಗೂ ಸಹ ನ್ಯಾಯಾಧಿಕಾರಿಗಳೇ ಇರುವುದು ಸೂಕ್ತವಾದಮಾತು. ರೆವಿನ್ಯೂ ಜನರು ಇದ್ದರೆ ಅನ್ಯಾಯಮಾಡುತ್ತಾರೆಂದಲ್ಲ. ಇವರಿಗಿಂತಲೂ ನ್ಯಾಯಾಧಿಕಾರಿಗಳಿದ್ದರೆ ಒಳ್ಳೆಯದು. ಅಲ್ಲದೆ ಸಾಮಾನ್ಯವಾಗಿ ಎರಡು ತಾಲ್ಲೂಕಿಗೆ ಒಂದರಂತೆ ಮತ್ತು ಒಂದು ತಾಲ್ಲೂಕಿಗೆ ಒಂದರಂತೆ ಕೋರ್ಟ್‌ಗಳಿವೆ. ಆ ಕೋರ್ಟ್‌ಗಳಿಗೇ ಈ ಕೆಲಸವನ್ನು ವಹಿಸಬಹುದು. ಇದರಿಂದ ಜನರಿಗೂ ಬಹಳ ಅನುಕೂಲವಾಗುತ್ತದೆ.

ಅರ್ಜಿಗಳನ್ನು ಹಾಕಲಿಕ್ಕೆ ಕೋರ್ಟ್ ಇರುವಂಥ ಕಡೆ ಶಕ್ಯವಿದ್ದಷ್ಟು ಜನ ಹೋಗುತ್ತಾರೆ. ಇದರ ಬಗ್ಗೆ ಒಂದು ಅನುಕೂಲತೆಯನ್ನು ಮಾಡಿಕೊಡುವುದು ಸೂಕ್ತವಿದೆ. ರೈತನು ಕೋರ್ಟ್ ಇರುವಲ್ಲಿಗೆ ಹೋಗಬೇಕಾದರೆ ಅವನ ವೇಳೆ ಹಾಳಾಗುತ್ತದೆ. ಆದುದರಿಂದ ಕೋರ್ಟೇ ಜನತೆ ಇದ್ದ ಕಡೆಗೆ ಹೋಗುವಂತೆ ಮಾಡುವುದು ಒಳ್ಳೆಯದು. ಕೋರ್ಟ್ ಪ್ರತಿ ತಾಲ್ಲೂಕಿಗೆ ಅಥವಾ ಪ್ರತಿ ಗ್ರೂಪಿಗೆ ಹೋಗಿ ನ್ಯಾಯ ತಿಳಿದುಕೊಂಡು ಅಲ್ಲಿಯೇ ವಿಚಾರಮಾಡಬೇಕೆಂದು ನನ್ನ ಅಭಿಪ್ರಾಯ.

ಕೆಲವು ಮಾನ್ಯಸದಸ್ಯರು ಮಾತನಾಡುವಾಗ ಈ ಬಿಲ್ಲಿನಲ್ಲಿ ಹೊಲದೊಡೆಯರ ಮೇಲೆ ಯಾವ ರೀತಿ ಸೀಲಿಂಗ್ ಹಾಕಬೇಕೆಂದು ಸೂಚನೆಮಾಡಿದ್ದೀರೋ ಅದೇ ರೀತಿ ಪಟ್ಟಣಗಳಲ್ಲಿರುವವರ ಮೇಲೂ ಹಾಕಬೇಕು ಎಂದು ಹೇಳಿದರು. ದೊಡ್ಡ ದೊಡ್ಡ ಷಹರುಗಳಲ್ಲಿ ಮನೆಗಳು, ಬಂಗಲೆಗಳು ಇವನ್ನು ಹೊಂದಿರುವವರಿಗೂ ಇಂಥ ಕಾಯಿದೆ ಅನ್ವಯಿಸಬೇಕು ಎಂದು ಹೇಳಿದರು. ನಾವು ಇರುವುದು ಪ್ರಜಾಪ್ರಭುತ್ವಕಾಲ. ನಮ್ಮ ಕೈಯಲ್ಲಿ ಅಂಥ ಕಾಯಿದೆಮಾಡತಕ್ಕ ಅಧಿಕಾರವಿರುವುದರಿಂದ ಆ ರೀತಿಮಾಡಬಹುದು. ಅದಕ್ಕೆ ಯಾವ ವಿರೋಧವೂ ಬರಬಾರದು. ಜನತೆ ಮತ್ತು ಜನತೆಯ ಪ್ರತಿನಿಧಿಗಳಾದ ವಿಧಾನಸಭಾಸದಸ್ಯರು ಹೇಳಿದಂತೆ ಮಾಡಲೇ ಬೇಕಾಗುತ್ತದೆ. ಇದರ ಸಲುವಾಗಿ ಅಂಥ ಕಾಯಿದೆ ಮಾಡುವತನಕ ಈಗ ನಮ್ಮ ಮುಂದಿರುವ ಭೂಸುಧಾರಣಾ ಕಾಯಿದೆಯನ್ನು ತಡೆಹಿಡಿಯಿರಿ ಎಂದು ಹೇಳುವುದರಲ್ಲಿ ತಥ್ಯಾಂಶವಿಲ್ಲ.

ಭೂಒಡೆಯರಿಗೆ ಜಮೀನಿನ ಕಿಮ್ಮತ್ತು ಕೊಡುವ ಕಾಲಕ್ಕೆ ರೆಂಟಿನ ಹದಿನೈದು ಪಟ್ಟು ಕೊಡಬೇಕೆಂದು ಹೇಳಿದೆ. ಭೂಮಿಯನ್ನು ಕಸಿದುಕೊಳ್ಳುವ ಕಾಲಕ್ಕೆ ಅವರಿಗೆ ಇನ್ನಷ್ಟು ಹಣಕೊಡುವುದಕ್ಕೆ ಯಾವತರಹ ಅಭ್ಯಂತರವೂ ಇಲ್ಲವೆಂದು ನನ್ನ ಅಭಿಪ್ರಾಯ. ಇಪ್ಪತ್ತು ಪಟ್ಟು ಕೊಡುವುದಕ್ಕೂ ಅಡ್ಡಿ ಇಲ್ಲ. ಬಿಲ್ಲಿನಲ್ಲಿ ಸೂಚಿಸಿಸುವಂತೆ ಹಣ ಒಮ್ಮೆಲೇ ಬರುವುದಿಲ್ಲ. 20ವರ್ಷಕ್ಕೆ ಬಡ್ಡಿಸಹಿತ ಬರುತ್ತದೆ. ತಮ್ಮ ಆಸ್ತಿಯನ್ನು ಕಳೆದುಕೊಳ್ಳುವವರಿಗೆ 20ವರ್ಷಗಳ ಕಂತುಗಳಲ್ಲಿ ಪಾವತಿಮಾಡುತ್ತೇವೆಂದರೆ ಹೆಚ್ಚು ಹಾನಿಯಾಗುತ್ತದೆ. ಒಮ್ಮೆಲೇ ಹಣ ಕೊಡಬೇಕೆಂದು ನನ್ನ ಅಭಿಪ್ರಾಯ.

ಕಾಫಿ ಪ್ಲಾಂಟೇಷನ್‌ಗಳು ಮುಂತಾದುವುಗಳಿಗೆ ಹೇಗೆ ವಿನಾಯಿತಿ ಕೊಟ್ಟಿದ್ದೀರೋ ಹಾಗೆಯೇ ಶಿಕ್ಷಣ ಸಂಸ್ಥೆಗಳಸಲುವಾಗಿ ವಿನಾಯಿತಿಕೊಡುವುದು ಅತ್ಯಂತ ಆವಶ್ಯಕವಿದೆ. ಒಂದು ಉದಾಹರಣೆ ಹೇಳಬೇಕಾದರೆ ಬೊಂಬಾಯಿ ಕರ್ಣಾಟಕದಲ್ಲಿ ಬೆಳಗಾವಿಯಲ್ಲಿ ಶಿರಸಂಗ ದೇಸಾಯರ ಉದಾರ ಸಹಾಯದಿಂದ ಬಹಳ ವರ್ಷಗಳ ಪೂರ್ವದಲ್ಲಿ ಯಾವ ಸರ್ಕಾರವೂ ಮಾಡಲಾರದಂಥ ಒಂದು ಶಿಕ್ಷಣ ಸಂಸ್ಥೆ ಪ್ರಾರಂಭವಾಯಿತು. ಇದಕ್ಕೆ ಸಾವಿರಾರು ರೂಪಾಯಿಗಳ ಉತ್ಪನ್ನ ಬರತಕ್ಕ ಆಸ್ತಿ ಎಂದರೆ landed property, ಭೂಮಿ. ಬೇರೆ ಆಸ್ತಿ ಏನೂ ಇಲ್ಲ. ಆ ಸಂಸ್ಥೆಯಿಂದ ಕೊಡಲ್ಪಡುವ ವಿದ್ಯಾರ್ಥಿವೇತನದ ಸಹಾಯದಿಂದ ಎಷ್ಟೋ ಮಂದಿ ಪದವೀಧರರಾಗಿ, ಪರದೇಶಗಳಿಗೂ ಹೋಗಿ ವ್ಯಾಸಂಗಮಾಡಿಕೊಂಡು ಬಂದಿದ್ದಾರೆ. ಅಂಥ ಶಿಕ್ಷಣ ಸಂಸ್ಥೆಗಳಿಗೆ ಈ ಕಾಯಿದೆಯನ್ನು ಅನ್ವಯಿಸಬಾರದು. ಇನಾಂರದ್ದಿಯಾತಿ ಕಾಯಿದೆಯ ಪ್ರಕಾರ ಈಗಾಗಲೇ 21ಸಾವಿರ ರೂಪಾಯಿಗಳವರೆಗೆ ಉತ್ಪನ್ನ ಕಡಮೆಯಾಗಿದೆ. ಈ ಕಾಯಿದೆಯ ಪ್ರಕಾರ ಇನ್ನೂ ಕಡಮೆಯಾಗುತ್ತದೆ. ಇದರಿಂದ ಯಾರಿಗೂ ವೈಯಕ್ತಿಕವಾಗಿ ಹಣ ಬರುವುದಿಲ್ಲ. ಅನೇಕ ವಿದ್ಯಾರ್ಥಿಗಳಿಗೆ ಈ ಶಿಕ್ಷಣ ಸಂಸ್ಥೆಯಿಂದ ಅನುಕೂಲವಾಗುತ್ತಿರುವುದು ಕೊರತೆಯಾಗತಕ್ಕ ಸಂಭವವಿದೆ. ಹೀಗೆ ಈ ಕಾಯಿದೆ ಕಾಫಿ ಪ್ಲಾಂಟೇಷನ್‌ಗಳಿಗೆ ಲಾಗು ಆಗುವುದಿಲ್ಲವೊ ಅದೇ ಪ್ರಕಾರವಾಗಿ ವಿದ್ಯಾರ್ಥಿಗಳಸಲುವಾಗಿ ಶಿಕ್ಷಣ ಸಂಸ್ಥೆಗಳಿಗೂ ಈ ಕಾಯಿದೆ ಲಾಗು ಆಗಬಾರದು. ಒಂದುವೇಳೆ ಲಾಗು ಆಗಬೇಕೆಂದು ನಿಮ್ಮ ಅಭಿಪ್ರಾಯ ಬಂದಲ್ಲ ಆಗ್ಗೆ......

ಶ್ರೀ ಕಡಿದಾಳ್ ಮಂಜಪ್ಪ.—ಕಾಫಿ ಪ್ಲಾಂಟೇಷನ್‌ಗಳಲ್ಲಿ ಗೇಣಿದಾರರಿಲ್ಲ.

ಶ್ರೀ ಎಸ್. ವೈ. ಪಾಟೀಲ್.—ಗೇಣಿದಾರರಿಲ್ಲದೆ ಹೋದರೆ ಬೇರೆ ವಿಷಯವಾಯಿತು. ನಾನು ಈಗ ಹೇಳುತ್ತಿರುವುದು ಭೂಮಿಯ ಪ್ರಶ್ನೆಯಲ್ಲ, ಶಿಕ್ಷಣದ ಪ್ರಶ್ನೆ. ಗೇಣಿದಾರರಿದ್ದರೂ ಸಹ ಶಿಕ್ಷಣ ಕಾರ್ಯಕ್ಕೆ ವಿನಾಯಿತಿಯನ್ನು ತೋರಿಸಬೇಕು. ಭೂಒಡೆಯರಿದ್ದರೆ ಆಗಮಾತ್ರ ಗೇಣಿದಾರರ ಪ್ರಶ್ನೆ ಬರುತ್ತದೆ. ಗೇಣಿದಾರರಿಗೆ ಭೂಮಿ ಎನ್ನುವ ಸಿದ್ಧಾಂತದ ಪ್ರಕಾರ ಸಣ್ಣ ರೈತ ಭೂಒಡೆಯನಾಗಲು ಅವಕಾಶ ಇದೆ ಆದರೆ ನಾನು ಆಗಲೇ ಹೇಳಿದಂತೆ ಶಿಕ್ಷಣ ಸಂಸ್ಥೆಗಳು ಮಾಡುವ ಉತ್ತಮಕಾರ್ಯದ ಸಲುವಾಗಿ ವಿನಾಯಿತಿ ಕೊಡಬೇಕು. ಈ ಕಾನೂನಿನ ಪ್ರಕಾರ ರೈತನು rent ಕೊಡಬೇಕಾದರೆ ಈಗ ಸಂಸ್ಥೆಗೆ ಬರುತ್ತಿರುವ ಉತ್ಪನ್ನಕ್ಕಿಂತಲೂ ಕಡಮೆಯಾಗುತ್ತದೆ. ಉತ್ಪನ್ನ ಕಡಮೆಯಾದಷ್ಟೂ ವಿದಾರ್ಥಿಗಳಿಗೆ ಸಿಕ್ಕತಕ್ಕ ಸಹಾಯ ಕಡಮೆಯಾಗುತ್ತದೆ. ಅದರ ಸಲುವಾಗಿ ಅಲ್ಪವಯಸ್ಕರು, ಮಿಲಿಟರಿ ಜನಗಳು, ವಿಧವೆಯರು, ಇಂಥವರಿಗೆ ಹೇಗೆ ಸ್ವಂತ ಸಾಗುವಳಿಮಾಡಬೇಕೆಂಬ ತತ್ವ ಅನ್ವಯಿಸುವುದಿಲ್ಲವೋ ಹಾಗೆಯೇ ಈ ಶಿಕ್ಷಣ ಸಂಸ್ಥೆಗಳಿಗೂ ಮಾಡಬೇಕು.

ಇಷ್ಟೆಂದಮೇಲೆ, ನಮ್ಮ ಮಾನ್ಯಸದಸ್ಯರಾದ ಡಾಕ್ಟರ್ ನಾಗೂರರವರು ಯಾವಾಗಲೂ ಇಂಗ್ಲೆಂಡಿನಿಂದ ಬಂದಂತೆ ಇಂಗ್ಲೆಂಡಿನ ಮತ್ತು ಅಲ್ಲಿನ ಪಾರ್ಲಿಮೆಂಟಿನ ಉದಾಹರಣೆಯನ್ನೇ ಹೇಳುತ್ತಿರುತ್ತಾರೆ. ನಮ್ಮ ಭಾರತದಲ್ಲೇ ಹಿಂದಿನ ಕಾಲದಲ್ಲೇ ಜನಕ ರಾಜರು ಉತ್ತಮವಾದ ಪಾರ್ಲಿಮೆಂಟನ್ನು ಸ್ಥಾಪನೆ ಮಾಡಿದ್ದರು. ಅಂತಹ ಲೋಕಸಭೆಯೇ ಪಾರ್ಲಿಮೆಂಟಿನಂತೆ ಇಲ್ಲಿಯೂ ಚೆನ್ನಾಗಿ ಕೆಲಸಮಾಡುತ್ತಿದೆ. ಇಂದಿನ ದಿವಸ ನಮ್ಮ ಭಾರತದಲ್ಲಿ ನೋಡಿದರೆ, ಜಗತ್ತಿನಲ್ಲಿ ವಿಜ್ಞಾನದ ಮುನ್ನಡೆ ಯಾವರೀತಿ ಮುಂದುವರಿಯುತ್ತಿದೆಯೋ ಅದೇರೀತಿಯಾಗಿ ನಮ್ಮ ಭಾರತದಲ್ಲೂ ಮುಂದುವರಿಯುತ್ತಿದೆ. ಜಪಾನು, ಅಮೇರಿಕ ಮತ್ತು ಇನ್ನಿತರ ದೇಶಗಳಂತೆ ನಮ್ಮ ಭಾರತವೂ ಮುಂದುವರಿಯುತ್ತಿದೆ. ಇಲ್ಲ ಯಾವ ಪ್ರದೇಶವೂ ಇಂದು ನಗ್ನಾವಸ್ಥೆಯಲ್ಲಿಲ್ಲ. ನಮ್ಮಲ್ಲೂ ಉತ್ತಮವಾಗಿ ಕೆಲಸಮಾಡುವಂತಹ ಐ.ಎ.ಎಸ್., ಐ.ಸಿ.ಎಸ್.

(ಶ್ರೀ ಎಸ್. ವೈ. ಪಾಟೀಲ್)

ಅಧಿಕಾರಿಗಳು ಇಲ್ಲವೇನು ? ಋಷಿಕುಲ ಎನ್ನುವುದು ಭಾರತೀಯ ಸಂಸ್ಕೃತಿ. ಇಂಗ್ಲೆಂಡು ಮತ್ತು ಅಲ್ಲಿರುವ ಪಾರ್ಲಿಮೆಂಟು ಉತ್ತಮವಾದುದು ಎಂದು ಹೇಳುವಮಾತಲ್ಲ. ಮಾನ್ಯ ರೆವಿನ್ಯೂ ಮಂತ್ರಿಗಳಾದ ಶ್ರೀ ಮಂಜಪ್ಪನವರು ಎಲ್ಲ ವಿಚಾರಗಳನ್ನೂ ಕೂಲಂಕಷವಾಗಿ ವಿಚಾರಮಾಡಿ ಮೈಸೂರು ರಾಜ್ಯಕ್ಕೆ ಮತ್ತು ಇಲ್ಲಿರುವ ಜನಕ್ಕೆ ಕಲ್ಯಾಣವಾಗಲೆಂದು ಮತ್ತು ಎಷ್ಟು ಕಲ್ಯಾಣಮಾಡಲಿಕ್ಕೆ ಶಕ್ಯವೋ ಅಷ್ಟನ್ನೂ ಮಾಡುವಸಲುವಾಗಿ ಈ ಮಸೂದೆಯನ್ನು ಇಲ್ಲಿ ತಂದಿದ್ದಾರೆ. ಈ ಭೂಮಿಯ ಸಮಸ್ಯೆ ಒಂದು ಜಟಿಲ ಸಮಸ್ಯೆ. ಕೆಲ ಜನರು ಭೂಮಿಯೇ ಪಂಚಪ್ರಾಣವೆಂದು ನಂಬಿ ಒಂದು ಎಕರೆಯಷ್ಟು ಭೂಮಿಯನ್ನೂ ಬಿಡಲು ಶಕ್ಯವಿಲ್ಲ ಎನ್ನುವ ಜನರೂ ಇದ್ದಾರೆ. ಆದರೆ ಭಾರತದಲ್ಲಿ ಇಂದು ದೇಶಕ್ಕೆಲ್ಲ ಕಲ್ಯಾಣವಾಗಬೇಕೆಂದು ಈ ಭೂಮಿಯನ್ನು ಬಡವರಸಲುವಾಗಿ ಬಿಡಬೇಕು ಇಲ್ಲದಿದ್ದರೆ ದೇಶಕ್ಕೆ ಕಲ್ಯಾಣವಾಗಲು ಸಾಧ್ಯವಿಲ್ಲ ಎಂದು ನಮ್ಮ ಮಾನ್ಯನಾಯಕರಾದ ನೆಹರೂರವರೇ ಹೇಳಿದ್ದಾರೆ. ಸೀಲಿಂಗನ್ನು 5,000 ಎಂದಿಡಬೇಕು. ಕೋ-ಆಪರೇಟಿವ್ ಫಾರ್ಮಿಂಗಿಗಾಗಿ ಮೂರನೆಯ ಎರಡುಭಾಗ ಜನರು ಒಪ್ಪಿದ್ದರೆ ಅಡ್ಡಿ ಇಲ್ಲ. ಉಳಿದ ಮೂರನೆಯ ಒಂದುಭಾಗ ಜನರನ್ನೂ ಬಲವಂತವಾಗಿ ಈ ಕೋ-ಆಪರೇಟಿವ್ ಫಾರ್ಮಿಂಗಿಗಾಗಿ ಸೇರಿಸಿದರೆ ಸರಿಯಲ್ಲ. ಇನ್ನು ಮಿಲಿಟರಿಯವರಿಗೆ ಒಂದು ಬೇಸಿಕ್ಕು ಹೋಲ್ಡಿಂಗೆಂದು ಇರುವುದು ಒಳ್ಳೆಯದು. ಕೆಲವು ಜನರು ಭೂಮಿಗೋಸ್ಕರ ಕೊಲೆ ನಡೆಯುತ್ತಿದೆ ಎಂದು ಹೇಳಿದರು. ಭೂಮಿಗೋಸ್ಕರ ಯಾವ ಕೊಲೆಯೂ ನಡೆಯುವುದಿಲ್ಲ. ತಮ್ಮ ಅಜ್ಞಾನದಿಂದ ಕೊಲೆ ನಡೆಯುವುದೇ ವಿನಾ ಭೂಮಿಗಾಗಿ ಅಲ್ಲ.

ನಾವು ಬದಲಾವಣೆಯಾಗುತ್ತಿರುವ ಕಾಲಧರ್ಮಕ್ಕೆ ಅನುಗುಣವಾಗಿ ಅನುಸರಿಸಿಕೊಂಡು ಹೋಗಬೇಕು. ಭೂಮಿ ಹೋಗುತ್ತದೆ ಎಂದರೆ ಅದೇನೂ ಅನ್ಯದೇಶಗಳಿಗೆ ಹೋಗುವುದಿಲ್ಲ. ಆದರಿಂದ ಇಂದು ನಮ್ಮ ಗೌಡಿಕೆ ಹೋಯಿತು, ವತನುದಾರಿಹೋಯಿತು ಎಂದೇನೂ ಹೋಗುವುದಿಲ್ಲ. ಭೂಮಿಯು ನಮ್ಮಲ್ಲೇ ಇರುವ ಮತ್ತೊಬ್ಬರಿಗೆ ಹೋಗುತ್ತದೆ. ಆದುದರಿಂದ ನಾವು ಸ್ವಾರ್ಥಿಗಳಾಗಿರಬಾರದು. ಹಿಂದಿನಿಂದಲೂ ಬಂದಿರುವ ಆಸ್ತಿ ಭೂಮಿ. ಅಂತಹ ಭೂಮಿಯನ್ನು ನಮ್ಮ ಮಕ್ಕಳು ಮರಿಗಳಿಗಾಗಿ ಇಡಬೇಕೆಂದು ಕೆಲವರು ಹೇಳಬಹುದು. ರೈತನ ಸಮಸ್ಯೆ ರೈತನಾಗಿಯೇ ಉಳುವವನೊಡನೆ ಕೆಲಸಮಾಡಿದರೇನೇ ಗೊತ್ತಾಗುತ್ತದೆ. ಹಾಗೇ ಈಗ ಹರಿಜನರ ಗಿರಿ ಜನರ ಸಮಸ್ಯೆ ಎಂದು ಹೇಳುತ್ತಾರೆ. ಈ ಹರಿಜನರ ಸಮಸ್ಯೆ ತಿಳಿಯಬೇಕಾಗಿದ್ದರೆ ಹರಿಜನವಾಗಿ ಹುಟ್ಟಿದ್ದರೇನೇ ಎಂದರೆ ಡಾಕ್ಟರು ಅಂಬೇಡಕರರು, ಗಾಂಧಿಯಂತಹವರಿಗೆ ಗೊತ್ತಾಗುತ್ತದೆಯೇ ವಿನಾ ಇತರರಿಗೆ ತಿಳಿಯುವುದಿಲ್ಲ.

ಒಟ್ಟಿನಲ್ಲಿ ಈ ಕಾಯಿದೆ ಮಾಡಿರುವುದು ಬಹಳ ಒಳ್ಳೆಯದಾದ ಸೂಕ್ತವಾದ ಕಾಯಿದೆ. ಎಷ್ಟು ಮಾಡಲಿಕ್ಕೆ ಶಕ್ಯವೋ ಅಷ್ಟನ್ನೂ ಮಾಡಲಿಕ್ಕೆ ಶಕ್ಯವಿದೆ. ಅಂತಹ ಈ ಕಾಯಿದೆಯನ್ನು ನಾನು ಸಂಪೂರ್ಣವಾಗಿ ಅನುಮೋದಿಸುತ್ತ ಇಷ್ಟು ಹೇಳಿ, ಈ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎ. ಎಂ. ಬಸವೇಗೌಡ (ಚಿಕ್ಕಮಗಳೂರು).—ಮಾನ್ಯ ಅಧ್ಯಕ್ಷರೇ, ನಾನು ಹೆಚ್ಚಾಗಿ ಹೇಳುವುದಕ್ಕೆ ಹೋಗುವುದಿಲ್ಲ. ಸುಮಾರು ಒಂದು ವಾರದಿಂದ ಇಲ್ಲಿ ಚರ್ಚೆಯಾಗುತ್ತಿರುವ ಮಸೂದೆಯ ಬಗ್ಗೆ ನಾನೇನಾದರೂ ಹೇಳುವುದಕ್ಕೆ ಹೋದರೆ ಅದು repetition ಆಗಬಹುದು ಎಂದು ತಿಳಿದುಕೊಂಡಿದ್ದೇನೆ. ಆದರೆ ಇಲ್ಲಿ ನಾನು ನನ್ನ ಅಭಿಪ್ರಾಯಗಳನ್ನು ಒಂದೆರಡು ಮಾತುಗಳಲ್ಲಿ ಹೇಳಬೇಕೆಂದಿದ್ದೇನೆ.

ಮೊದಲನೆಯದಾಗಿ ಸೀಲಿಂಗಿನ ವಿಷಯದಲ್ಲಿ ನಾನು ಹೇಳುವುದಾದರೆ, ಯಾರು personal cultivation ಮಾಡುತ್ತಾರೋ ಅವರಿಗೆ ಖಂಡಿತ ಇರಕೂಡದು. ಏತಕ್ಕೆ ದರೆ ಭೂಮಿಯನ್ನು ಯಾರು ನೋಡಿಕೊಂಡು ಜೀವನಮಾಡುತ್ತಿದ್ದಾರೋ ಅವರಿಗೇಕೆ ಸೀಲಿಂಗಿರಬೇಕು ? Tiller is the owner of the soil ಎಂದರೆ ಭೂಮಿಯನ್ನು ಉಳುವವನಿಗೇ ಭೂಮಿ ಹೋಗಬೇಕೆಂದು ಮಾಡಲಾಗಿದೆ. ಭೂಮಿಯನ್ನು ಇಟ್ಟುಕೊಂಡು ಬೇರೆ ಕಡೆಗಳಲ್ಲಿರುವವರಿಗೆ ಸೀಲಿಂಗ್ ಇರಲಿ. ಆದರೆ ಭೂಮಿಯನ್ನೇ ನಂಬಿಕೊಂಡು personal cultivation ಮಾಡುವವನಿಗೆ ಸೀಲಿಂಗು ಖಂಡಿತವಾಗಿ ಇರಕೂಡದು.

ಈ ಬಿಲ್ಲಿನ ಪ್ರಕಾರ ಸೀಲಿಂಗುಕೊಟ್ಟರೂ ಭೂಮಿ ಮೂರು-ನಾಲ್ಕುಸಾವಿರ ಎಕರೆಗಳಷ್ಟು ಬರಬಹುದು. Surplus land ಇಲ್ಲದಿರುವಾಗ ಎಲ್ಲರಿಗೂ ಭೂಮಿಯನ್ನು ಕೊಟ್ಟಹಾಗೆ ಆಗುವುದಿಲ್ಲ.

ಇನ್ನು ಬೇಸಿಕ್ಕು ಹೋಲ್ಡಿಂಗು ನಾನೂರು ರೂಪಾಯಿಗಳೆಂದಿದೆ. ನೂರು ರೂಪಾಯಿಗಳಷ್ಟು ಬರುವ ಜನರಲ್ಲಿ ಶೇಕಡ ನಾಲ್ಕರಷ್ಟು ಜನಗಳಿಗೂ ಜಮೀನು ಒದಗಿಸುವುದಕ್ಕೆ ಆಗುವುದಿಲ್ಲ. ಈಗ ಜನಸಂಖ್ಯೆ ದಿನೇದಿನೇ ಜಾಸ್ತಿಯಾಗುತ್ತಿದೆ. ಇದನ್ನು ಕಡಮೆ ಮಾಡಬೇಕು. ಜಮೀನನ್ನು ಉಳಿಸುವುದಕ್ಕೇ ಆಗದಿರುವಾಗ ಬೇರೆ ಜಮೀನನ್ನು ಎಲ್ಲಿಂದ ತರಬೇಕು? ಜಮೀನನ್ನು ಉಳದೇ ಜಾಸ್ತಿ ಆಹಾರವನ್ನು ಜಮೀನುಗಳಿಂದ ಹೇಗೆ ಉತ್ಪತ್ತಿಮಾಡುವುದಕ್ಕಾಗುತ್ತದೆ? ಜಮೀನನ್ನು ಹಂಚಬೇಕೆಂದು ಹೊರಟರೆ cultivable land ಸೀಲಿಂಗಿನಂತೆ ಎರಡು ಎಕರೆಕೂಡ ಬರುವುದಿಲ್ಲ. ಇದನ್ನು ಯೋಚನೆಮಾಡಿದರೆ ಇದುಕೂಡ ಒಂದು ಕ್ರಾಂತಿಗೆ ಮಾರ್ಗವಾಗುತ್ತದೆ. ಆದುದರಿಂದ ಈಗ ಸರಕಾರದವರು ಬಹಳ ದೊಡ್ಡ ತಪ್ಪುಮಾಡಿದ್ದಾರೆ. ಈ ಲ್ಯಾಂಡು ರಿಫಾರ್ಮ್ಸನ್ನು ತರುವುದಕ್ಕೆ ಮುಂಚೆ ಯಾರು ಸಾಗುವಳಿದಾರರು, ಯಾರು ಹಿಡುವಳಿದಾರರು, ಯಾರು ಪರ್ಸನಲ್ ಕಟ್ಟಿವೇಷನ್ನು ಮಾಡುವವರು, ಎನ್ನುವುದರ ವಿವರಗಳನ್ನು ಪ್ರತಿಯೊಂದು ಡಿಸ್ಟ್ರಿಕ್ಟಿಗೂ ಒಂದು ಲಿಸ್ಟುಮಾಡಿ, ರಿಜಿಸ್ಟರು ಮಾಡಿ ಈ ಬಿಲ್ಲನ್ನು ತರಬೇಕಾಗಿತ್ತು. ಈಗ ಅನೇಕಜನ ಸಾಗುವಳಿದಾರರನ್ನು ಭೂಮಿಯಿಂದ ಉಚ್ಚಾಟನೆಮಾಡುವುದಕ್ಕೆ ಹೊರಟಿದ್ದಾರೆ. ಮತ್ತು ಇದರಿಂದ ಅನೇಕ ಜನರು ಹೊರಗೆ ಹೋಗುವ ಪರಿಸ್ಥಿತಿ ಬರುತ್ತಿದೆ. ಆದುದರಿಂದ ನಾವು district-wise statisticsನ್ನು ಕಲೆಕ್ಟುಮಾಡಬೇಕು. ನಿನ್ನೆಯದಿವಸ ನಾನು "Hindu" ಪೇಪರಿನಲ್ಲಿ ಬೊಂಬಾಯಿ ಸರಕಾರ ಈ ಜಮೀನಿನಿಂದ ಹೊರಗೆ ಹೋಗುವುದನ್ನು ತಪ್ಪಿಸಲು ಜನವರಿ 16ನೇ ತಾರೀಖಿನಿಂದ ಯಾರ ಭೂಮಿಯೇ ಇರಲಿ ಅದನ್ನು ಕಾನೂನು ಪ್ರಕಾರ ಸರಕಾರ ತೆಗೆದುಕೊಳ್ಳುತ್ತದೆ ಎಂದರೆ ಒಂದು Appointed dayಅನ್ನು ಗೊತ್ತುಮಾಡಲಾಗಿದೆ ಎಂದು ಹೇಳಿದೆ. ಅದರಂತೆ ಇಲ್ಲಿಯೂ ಕೂಡ ಒಂದು ಹಿಂದಿನ ತಾರೀಖನ್ನು ಗೊತ್ತುಮಾಡಿದರೆ ಬಹಳ ಸೂಕ್ತವಾಗಿ ಕಾಣುತ್ತದೆ. ಈಗ ಅನೇಕ ಗೇಣಿದಾರರಿಗೆ ಬಹಳ ಅನ್ಯಾಯವಾಗುತ್ತಿದೆ.

ಎರಡನೆಯದು compensationನನ್ನು ಕೊಡಬೇಕಾದರೆ ಮಾರ್ಕೆಟ್ಟಿನ ದರದಂತೆಯೇ ಕೊಡಬೇಕು. ಅನೇಕರು ದುಡ್ಡು ಕೊಟ್ಟು ಜಮೀನನ್ನು ತೆಗೆದುಕೊಂಡಿದ್ದಾರೆ. ಸರಕಾರಿ ನೌಕರರು ಸರಕಾರದಿಂದ ರಿಟೈರ್ ಆದಮೇಲೆ ಜಮೀನನ್ನು ಸಾಗುವಳಿ ಮಾಡಬಹುದು ಎಂದು ಇಟ್ಟುಕೊಂಡಿದ್ದಾರೆ ಅಂತಹವರಿಗೆ 15 timesನಷ್ಟು rent ಎಂದರೆ ಬಹಳ ಕಡಮೆ. ಇದಕ್ಕೆ market value ಕೊಡಬೇಕು. 5,000 ರೂಪಾಯಿಗಳವರೆಗೂ cash payment ಇರಬೇಕು. 25 ಸಾವಿರದಿಂದ 30 ಸಾವಿರದವರಿಗೆ ಬಾಂಡುಗಳಂತೆ ಕೊಡಬಹುದು ಎಂದು ನಾನು ಇಲ್ಲಿ ಸೂಚನೆಮಾಡುತ್ತೇನೆ. ಅನೇಕರು ಪ್ಲಾಂಟೇಷನ್ನುಗಳ ವಿಷಯದಲ್ಲಿ ಸೀಲಿಂಗನ್ನು ತರಬೇಕೆಂದು ಹೇಳಿದರು. ನಾನು ಈ ವಿಷಯದಲ್ಲಿ ಮಾತನಾಡಬಾರದು ಎಂದಿದ್ದೆ. ನಾನು ಈಗ ಏಕೆ ಮಾತನಾಡಬೇಕೆಂದರೆ, ಇನ್ನು ಬೇರೆಕಡೆಗಳಲ್ಲಿ ಸೀಲಿಂಗು ಇರುವಾಗ ಇದರಬಗ್ಗೆ ಸೀಲಿಂಗು ಏಕೆ ಹಾಕಕೂಡದು ಎಂದು ಹೇಳಿರುವುದರಲ್ಲಿ ಯಾವ ರೀತಿಯಾದ ವಾದವೂ ಇಲ್ಲ. ಪ್ಲಾಂಟೇಷನ್ನಿಗಾಗಿ ಒಂದು ಕ್ಯಾಪಿಟಲ್ ಇನ್‌ವೆಸ್ಟ್‌ಮೆಂಟು ಮಾಡಲು ಎಲ್ಲರಿಗೂ ಅವಕಾಶವಿರುವುದಿಲ್ಲ. ಮೊದಲು ಮೂರುಲಕ್ಷ ಎಕರೆಯಷ್ಟು ಕಾಫಿತೋಟವಿತ್ತು. ಈಗ 1,44,730 ಎಕರೆಗೆ ಇಳಿದಿದೆ. ಇನ್ನೂ ಸುಮಾರು ಎರಡುಲಕ್ಷ ಎಕರೆ ಕಾಫೀ ತೋಟದ ಜಮೀನಿದೆ.

5-30 P.M.

ಇವೊತ್ತು ನಮ್ಮ ಸುತ್ತ ಮುತ್ತಲೂ ನೋಡಿದರೆ ಗೊತ್ತಾಗುತ್ತದೆ. ಚಿಕ್ಕಮಗಳೂರಿನಲ್ಲಿ ಏನಿಲ್ಲ ಎಂದರೂ 75 ಸಾವಿರ ಎಕರೆ, ಮಂಜರಾಬಾದಿನಲ್ಲಿ ಒಂದು ಲಕ್ಷ ಎಕರೆ ಜಮೀನು ಇರಬಹುದು. 80 ವರ್ಷಗಳ ಕೆಳಗೆ ತೀರ್ಥಹಳ್ಳಿಯಲ್ಲಿ ಕಾಫಿ ಎಸ್ಟೇಟ್ಸ್ ಇದ್ದವು. ಈಗ ಅಲ್ಲಿ ಕಾಫಿ ಎಸ್ಟೇಟ್ಸ್ ನಿರ್ಮೂಲವಾಗಿವೆ. ಆದ್ದರಿಂದ ಜಮೀನಿನಮೇಲೆ ಫ್ಯೂಚರ್ ಸೀಲಿಂಗ್ ಹಾಕಬೇಕು ಎನ್ನುವ ತತ್ವ ಸರಿಯಾಗಿಲ್ಲ. ಕಾಫಿಯಿಂದ ಏಳು ಕೋಟಿ ರೂಪಾಯಿಗಳಷ್ಟು ಫಾರಿನ್ ಎಕ್ಸ್‌ಚೇಂಜ್ ಬರುತ್ತದೆ. ಸೆಂಟ್ರಲ್ ಗೌರ್ನಮೆಂಟಿಗೆ ಎರಡು ಕೋಟಿ ರೂಪಾಯಿ ಎಕ್ಸೈಜ್ ಡ್ಯೂಟಿ ಹೋಗುತ್ತದೆ. ಸ್ಟೇಟ್ ಗೌರ್ನಮೆಂಟಿಗೆ ಸೇಲ್ಸ್ ಟ್ಯಾಕ್ಸ್ ಬರುತ್ತದೆ. ಕಾಫಿ ಎಸ್ಟೇಟುಗಳಲ್ಲಿ ಕೂಲಿಗಾರರು, ಮ್ಯಾನೇಜರ್ಸ್ ಮತ್ತು ಸೂಪರ್‌ವೈಜರ್‌ಗಳನ್ನು ಬಿಟ್ಟು ಎರಡೂವರೆ ಲಕ್ಷ ಕೂಲಿಗಾರರು ಕೆಲಸ ಮಾಡುತ್ತಿದ್ದಾರೆ. ಪ್ಲಾಂಟೇಷನ್ ಲೇಬರ್ ಕಾನೂನು ಅಲ್ಲಿಗೆ ಅನ್ವಯಿಸುತ್ತದೆ. ಮ್ಯಾಟರ್ನಿಟಿ ಬೆನಿಫಿಟ್ಸ್ ಮುಫತ್ತು ಔಷಧೋಪಚಾರ ಮುಫತ್ತು ವಸತಿ ಸೌಕರ್ಯ ಮುಂತಾದುವುಗಳನ್ನು ಕಲ್ಪಿಸಿಕೊಡುತ್ತಾರೆ. ಇನ್ನೂ ಬೇಸಿಕ್ ಹೋಲ್ಡಿಂಗಿನಿಂದ 400 ರೂಪಾಯಿ ಉತ್ಪತ್ತಿ ಬರತಕ್ಕ ರೈತನ ಜೀವನಕ್ಕಿಂತ ಅವನ ಜೀವನ ಮಟ್ಟ ನಿಜವಾಗಿಯೂ, ಜಾಸ್ತಿಯಾಗಿವೆ. ಲೈಫ್‌ನಲ್ಲಿ ಸೆಕ್ಯೂರಿಟಿ ಇದೆ. ಆದರೆ ರೈತ 400 ರೂಪಾಯಿಗಳನ್ನು ಸಂಪಾದನೆ ಮಾಡಬೇಕಾದರೆ ಕಷ್ಟ ಇದೆ. ಅವನು ವ್ಯಾಗರೀಸ್ ಆಫ್ ನೇಚರ್ ಅವಲಂಬಿಸಿರಬೇಕಾಗುತ್ತದೆ. ಅದರಲ್ಲೂ ಮಲೆನಾಡಿನಲ್ಲಿ 400 ರೂಪಾಯಿ ಸಂಪಾದನೆ ಬರುವಷ್ಟು ದುಡಿಯಬೇಕಾದರೂ ಕಷ್ಟ ಇದೆ. ಜಮೀನು ಇಲ್ಲ ಎನ್ನುವುದು ಅಸಮ್‌ಷನ್. ಮಲೆನಾಡಿಗೆ ಬನ್ನಿ. ಅಲ್ಲಿ ಸಾವಿರ ಎಕರೆ ತರೀ ಜಮೀನು ಇದೆ. ನೀವು ಬೆಂಗಳೂರಿನಲ್ಲಿ ಕುಳಿತುಕೊಂಡು ಹೇಳುತ್ತಿದ್ದೀರಿ. ಕಲ್ಟಿವಬಲ್ ಲ್ಯಾಂಡ್ ಇಲ್ಲ ಎಂದು ಇತರರಿಂದ ತೆಗೆದುಕೊಂಡು ಹಂಚಬೇಕು ಎನ್ನುವ ವಾದ ಸರಿಯಲ್ಲ. ಲಕ್ಷಾಂತರ ಎಕರೆ ಜಮೀನು ಚಿಕ್ಕಮಗಳೂರು ಡಿಸ್ಟ್ರಿಕ್ಟಿನಲ್ಲಿದೆ. ಅದು ಸಾಗು ಆಗುತ್ತಾ ಇಲ್ಲ. ಯಾರು ಬೇಕಾದರೂ ಬರಬಹುದು. ಅದು ಕಾಫಿ ಕರಾಬು ಅಲ್ಲ. ತರೀ ಜಮೀನು. ಪಾಳು ಬಿದ್ದಿದೆ. ಪ್ಲಾಂಟೇಷನ್ ಪಕ್ಕದಲ್ಲಿದೆ. ಜಮೀನು ಇಲ್ಲ ಎಂದು ಹೇಳುವುದು ಬರೀ ಅಸಂಪ್ಷನ್. ಪ್ಲಾಂಟೇಷನ್ ವಿಷಯದಲ್ಲಿ ಕೂಡ ಫ್ಯೂಚರ್ ಸೀಲಿಂಗ್ 100 ಎಕರೆ ಮಾಡಿರುವುದು ಬಹಳ ಅನಾಹುತಕ್ಕೆ ಕಾರಣವಾಗುತ್ತದೆ. ಬಾಂಬೇ ಬಿಲ್ಲಿನಲ್ಲಿ ಕಾಫಿಗೆ ಎಗಮ್ಟ್ ಮಾಡಿದ್ದಾರೆ. 200 ಎಕರೆ ಮಾರಬೇಕು ಎಂದು ಇಟ್ಟುಕೊಳ್ಳಿ. ಅದನ್ನು ಮಾರುವುದೇ ದೊಡ್ಡ ಸಮಸ್ಯೆ. 100 ಎಕರೆಗೆ ಕಡಮೆ ಕೊಂಡುಕೊಳ್ಳುವುದಿಲ್ಲ. ಅಗ್ರಿಕಲ್‌ಚರಲ್ ಪ್ಲಾಂಟೇಷನ್ ಎಂದು ತೆಗೆದುಕೊಂಡರೂ ಪ್ಲಾಂಟೇಷನ್ ಒಂದು ಕೈಗಾರಿಕೆ ಎಂದು ಕರೆಯಬೇಕಾಗುತ್ತದೆ. ಪ್ಲಾನ್‌ಟೇಷನ್‌ನಲ್ಲಿ ಕ್ಯಾಪಿಟಲ್ ಲೇಬರ್ ರಿಲೇಷನ್‌ಷಿಪ್ ಇರುತ್ತದೆ. ಲ್ಯಾಂಡ್ ಲಾರ್ಡ್ ಟೆನೆಂಟ್ ರಿಲೇಷನ್ ಷಿಪ್ ಇರುವುದಿಲ್ಲ. ಏನಾದರೂ ಮಾರಬೇಕಾದರೆ, ಹಣ ತೆಗೆದುಕೊಳ್ಳಬೇಕಾದರೆ 200 ಎಕರೆ ಇರುವ ಪ್ಲಾಂಟೇಷನಿಗೆ 100 ಎಕರೆ ಫ್ಯೂಚರ್ ಸೀಲಿಂಗ್ ಮಾಡಿದರೆ ಮುಂದೆ ಯಾರು ಕೊಂಡುಕೊಳ್ಳುತ್ತಾರೆ? ಮಾರಬೇಕಾದರೆ 100 ಎಕರೆ ಮಾರಬೇಕಾಗುತ್ತದೆ. ಅದರಿಂದ ತೊಂದರೆಯಾಗುತ್ತದೆ. ಅದನ್ನು ಸೆಲೆಕ್ಟ್ ಕಮಿಟಿಯವರು ಪರಿಶೀಲಿಸಬೇಕು. ಪ್ಲಾಂಟೇಷನ್ನಿಗೆ ಸೀಲಿಂಗ್ ಇರುವುದು ಅನ್ಯಾಯ. ದೇಶದ ಹಿತದೃಷ್ಟಿಯಿಂದ, ಲೇಬರ್ ಎಂಪ್ಲಾಯ್‌ಮೆಂಟ್ ಹಿತದೃಷ್ಟಿಯಿಂದ, ಸೀಲಿಂಗ್ ಬೇಕಾಗಿಲ್ಲ ಎಂದು ಕಡಾಖಂಡಿತವಾಗಿ ಹೇಳುತ್ತೇನೆ. ಪ್ಲಾಂಟೇಷನ್ ಜೊತೆಗೆ ಕಾಷ್ಯೂ ಮತ್ತು ಸಿಂಕೋನ ಕೂಡ ಸೇರಿಸಬೇಕು ಎಂದು ನಾನು ಸೂಚನೆ ಮಾಡುತ್ತೇನೆ. ಆಮೇಲೆ ನಮ್ಮ ದೇಶದ ಎಕರೇಜ್ ಲೆಕ್ಕ ಹಾಕಿಕೊಂಡರೆ, ಪ್ರಪಂಚದ ಎಕರೇಜಿನ ಎರಡು ಪರ್ಸೆಂಟ್ ಆಗುತ್ತದೆ. ಪ್ರೊಡಕ್ಷನ್ ಲೆಕ್ಕ ಹಾಕಿಕೊಂಡರೆ one per cent of the coffee of the world ಆಗುತ್ತದೆ. ಆದರೂ ಕೂಡ ಪ್ರಪಂಚದ ಮಾರ್ಕೆಟ್ಟಿನಲ್ಲಿ ಗಿರಾಕಿ ಏತಕ್ಕೆ ಇದೆ ಎಂದರೆ ಕ್ವಾಲಿಟಿಗೋಸ್ಕರ. ಕ್ವಾಲಿಟಿ ಇಂಪ್ರೂವ್ ಮಾಡುವುದಕ್ಕೋಸ್ಕರ, ಕಾಫೀ ಬೋರ್ಡಿನವರು ಅನೇಕ ಸಾಹಸ ಮಾಡುತ್ತಿದ್ದಾರೆ. ಸ್ಮಾಲ್ ಗ್ರೋಯರ್ಸ್ ಕೋ-ಆಪರೇಟೀವ್ ಸಿಸ್ಟಂನಿಂದ ಪಲ್ಪಿಂಗ್ ಮಾಡುತ್ತಿದ್ದಾರೆ. ಅದೂ ಕೂಡ ಜಯಪ್ರದವಾಗಿದೆ ಎಂದು ಹೇಳುವುದಕ್ಕೆ ಸಾಧ್ಯವಿಲ್ಲ. ನಮ್ಮ ಪಕ್ಕದ ತೋಟದಲ್ಲಿ ಕೋ-ಆಪರೇಟೀವ್ ಪಲ್ಪಿಂಗ್ ಮಾಡಿದರು. ಆದರೆ ಪಲ್ಪಿಂಗ್ ಮೆಷೀನ್ ಇವೊತ್ತೂ ಕೂಡ ಅಲ್ಲಿ ಮಳೆಯಲ್ಲಿ ಬಿದ್ದಿದೆ. ಕೋ-ಆಪರೇಟೀವ್ ಫಾರ್ಮಿಂಗ್ ಇದೆ. 20 ಜನ ಕೋ-ಆಪರೇಟೀವ್ ಫಾರ್ಮಿಂಗ್ ನಡೆಸುವುದಕ್ಕೆ ಆಗದೆ ಇದ್ದಮೇಲೆ ಎಲ್ಲಾ ರೈತರು ಹಳ್ಳಿಯಲ್ಲಿ ಸೇರಿಕೊಂಡು ಸ್ಕೀಮ್ ಮಾಡುವುದಕ್ಕೆ ಸಾಧ್ಯವೇ ಎಂಬುದನ್ನು ನೋಡಿ ಇದನ್ನು ಇಂಟರ್‌ಡ್ಯೂಸ್ ಮಾಡಬೇಕು. ಡೆವಲಪ್‌ಮೆಂಟ್ ಸ್ಕೀಮಿಗೋಸ್ಕರ ಎರಡು ಕೋಟಿ ರೂಪಾಯಿಗಳನ್ನು ಕಾಫೀ ಬೋರ್ಡಿನವರು ಕೊಟ್ಟಿದ್ದಾರೆ. ಯಾರು ಯಾರು ಹೊಸದಾಗಿ ಕಾಫಿ ಕಲ್ಟಿವೇಟ್ ಮಾಡುತ್ತಾರೋ ಅವರಿಗೆ ಸಾಲ ಕೊಡುತ್ತಾರೆ. ಆ ಹಣವನ್ನು 30 ಕಂತುಗಳಲ್ಲಿ ವಾಪಸ್ಸು ಕೊಡಬೇಕು. ಕಾಫಿ ಡೆವಲಪ್ ಆಗ ಬೇಕು ಎಂದು ಸರ್ಕಾರದವರು ಪ್ರಯತ್ನ ಮಾಡುತ್ತಿರುವಾಗ, ಕಾಫಿ ಮೇಲೆ

(ಶ್ರೀ ಎ. ಎಂ. ಬಸವೇಗೌಡ)

ಸೀಲಿಂಗ್ ಇಡುವುದು ನ್ಯಾಯವಲ್ಲ. ಪ್ಲಾಂಟೇಷನ್ ಎನ್‌ಕ್ವೈರಿ ಕಮಿಷನ್‌ನವರು ಕಾಫಿ, ಟೀ, ಸಿಂಕೋನ, ರಬ್ಬರ್, ಇವುಗಳ ವಿಷಯವಾಗಿ ಕೂಲಂಕಷವಾಗಿ ಪರಿಶೀಲನೆ ಮಾಡಿ ಒಂದು ರಿಪೋರ್ಟ್ ಕೊಟ್ಟರು. ಅವರು ಕೊನೆಯ ಪ್ಯಾರಾದಲ್ಲಿ Any attempt to change the structure, by breaking them up into numerous small units will result in the break down of production and the best policy is not to fix any ceiling under land reform in plantation industry,'' ಎಂದು ಹೇಳಿದ್ದಾರೆ. ಅವರ ರೆಕಮೆಂಡೇಷನ್‌ಮೇಲೆ ಪ್ಲಾನಿಂಗ್ ಕಮಿಷನ್‌ನವರು ಕಾಫಿ ಪ್ಲಾಂಟೇಷನ್‌ಗಳಿಗೆ ಅನೇಕ ತೊಂದರೆಗಳಿರುವುದರಿಂದ ಇಂಡಸ್ಟ್ರಿ ಡೆವಲಪ್ ಆಗಬೇಕಾಗಿರುವುದರಿಂದ ಅದಕ್ಕೆ ಎಗ್ಜಮ್ಷನ್ ಕೊಡಬೇಕು ಎಂದು ಹೇಳಿದ್ದಾರೆ. ಅದ್ದರಿಂದ ಸೆಲೆಕ್ಟ್ ಕಮಿಟಿಯಲ್ಲಿ ಇದನ್ನು ಪರಿಶೀಲಿಸಿ ಫ್ಯೂಚರ್ ಸೀಲಿಂಗ್ ಎಗ್ಜಮ್ಷನ್ ಕೊಡಬೇಕು ಮತ್ತು ಪರ್ಸನಲ್ ಕಲ್ಟಿವೇಷನ್ನಿಗೆ ಇದು ಅಪ್ಲೈ ಆಗಕೂಡದು ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀಮತಿ ಬಸವರಾಜೇಶ್ವರಿ (ಮಾನ್ವಿ).—ಮಾನ್ಯ ಅಧ್ಯಕ್ಷರೇ, ಈಗ ನಮ್ಮ ಮುಂದೆ ಇರತಕ್ಕ ಭೂಸುಧಾರಣೆ ಮಸೂದೆಯನ್ನು ಸಂಪೂರ್ಣವಾಗಿ ಅನುಮೋದಿಸುತ್ತಾ ಕೆಲವು ಸೂಚನೆಗಳನ್ನು ಹೇಳಲು ನಿಂತಿದ್ದೇನೆ. ಈ ಭೂಸುಧಾರಣಾ ಮಸೂದೆಯನ್ನು ಜಾರಿಗೆ ತರಬೇಕಾದ ಉದ್ದೇಶವಾದರೂ ಇಷ್ಟೆ: Tiller of the soil should be owner of the soil. ಈ ಗುರಿಯನ್ನು ನಾವು ಸಾಧಿಸಬೇಕಾಗಿದೆ. ಇದೂ ಅಲ್ಲದೆ ಭೂಮಿಯಿಂದ ನಿಗದಿಯಾದ ಉತ್ಪತ್ತಿಯನ್ನು ತೆಗೆದು ಆಹಾರದ ಕೊರತೆಯನ್ನು ನೀಗಬೇಕು. ಮತ್ತು ಗೇಣೀದಾರನಿಗೆ ಒಂದು ಖಚಿತವಾದ ಹಕ್ಕು ಬಾಧ್ಯತೆಗಳು ಆಗಬೇಕೆಂಬುದೇ ಈ ಬಿಲ್ಲಿನ ಒಂದು ಮುಖ್ಯ ಉದ್ದೇಶ. ಈ ಉದ್ದೇಶಗಳನ್ನು ಒಳಗೊಂಡ ಈ ಮಹತ್ತರವಾದ ಬಿಲ್ಲು ಈಗ ಎಂಟು ದಿವಸಗಳಿಂದ ಚರ್ಚೆಯಾಗುತ್ತಿದೆ. ಮಾನ್ಯ ಸದಸ್ಯರುಗಳು ತಮ್ಮ ಅಭಿಪ್ರಾಯವನ್ನು ಕೊಟ್ಟಿದ್ದಾರೆ. ಈ ಅಭಿಪ್ರಾಯಗಳು ಬಿಲ್ಲಿನಲ್ಲಿ ಒಳಗೊಂಡಿದ್ದರೂ ಕೂಡ ಇದರಿಂದ ಸ್ವಲ್ಪ ಮಟ್ಟಿಗೆ ಧಕ್ಕೆ ಬರಬಹುದು ಎಂದು ನನಗೆ ಸಂಶಯ ಬರುತ್ತದೆ. ಇದರ ಮುಖ್ಯ ಉದ್ದೇಶ ಆಹಾರೋತ್ಪತ್ತಿ ಜಾಸ್ತಿ ಆಗಬೇಕು ಎಂಬುದು. ಇದನ್ನು ನಾವೆಲ್ಲರೂ ಒಪ್ಪಿದ್ದೇವೆ. ಇದರಿಂದ ಆಹಾರೋತ್ಪತ್ತಿಗೆ ಧಕ್ಕೆ ಬರಬಹುದು ಎಂದು ನನಗೆ ಕಾಣಿಸುತ್ತದೆ. ಹೇಗೆ ಧಕ್ಕೆ ಬರುತ್ತದೆ ಎಂದರೆ ಈಗ ಸರ್‌ಪ್ಲಸ್ ಲ್ಯಾಂಡ್ಸ್ ಫ್ರಾಗ್ಮೆಂಟೇಷನ್ ಮಾಡಿ ಹಂಚಿದ ನಂತರ ಅದರಿಂದ ಆಹಾರೋತ್ಪತ್ತಿ ಜಾಸ್ತಿಯಾಗುತ್ತದೆಯೇ, ಅವರಿಗೆ ಭೂಮಿಯನ್ನು ಕೊಟ್ಟರೆ ಅವರು ಅದನ್ನು ಸರಿಯಾಗಿ ಉಳುಮೆ ಮಾಡಿ ಹೆಚ್ಚು ಆಹಾರವನ್ನು ಬೆಳೆಯುತ್ತಾರೆಯೇ ಎನ್ನುವ ಸಂಶಯ ಇದೆ. ಇನ್ನೊಂದು ಕಡೆ ಅಬ್ಸೆಂಟೀಲ್ಯಾಂಡ್ ಲಾರ್ಡ್ಸ್ ಸಾವಿರಗಟ್ಟಲೆ ಎಕರೆ ಇಟ್ಟುಕೊಂಡು ಎಲ್ಲಿಯೋ ಕೂಳಿತು ಕೊಂಡು ಒಕ್ಕಲುತನ ಮಾಡಿ ಬೆಳೆಯತಕ್ಕ ಆಹಾರವನ್ನು ಬೆಳೆಯದೆ ದೇಶಕ್ಕೆ ದ್ರೋಹ ಮಾಡುತ್ತಿದ್ದಾರೆ. ಇದನ್ನೂ ಕೂಡ ಸ್ವಲ್ಪಮಟ್ಟಿಗೆ ಸುಧಾರಿಸಿ ಆಹಾರ ಉತ್ಪತ್ತಿ ಜಾಸ್ತಿ ಮಾಡುವುದಕ್ಕೆ ಅವಕಾಶವನ್ನು ಕಲ್ಪಿಸಬೇಕಾಗುತ್ತದೆ. ಅದನ್ನು ನಾವೆಲ್ಲರೂ ಆಲೋಚನೆ ಮಾಡಬೇಕು. ಈ ವಿಷಯದಲ್ಲಿ ಶ್ರೀ ನಾರಾಯಣಸ್ವಾಮಿಯವರು ವೈಯಕ್ತಿಕವಾದ ಅಭಿಪ್ರಾಯಗಳನ್ನು ಸ್ಪಷ್ಟಪಡಿಸಿದ್ದಾರೆ. ನಾನಾದರೂ ಹೇಳುವುದು ಎರಡು ಮೂರು ಎಕರೆ ಹಂಚುವುದು ಸುಖವಿಲ್ಲ. ಆಹಾರೋತ್ಪತ್ತಿ ಕಡಮೆ ಆಗಬಾರದು ಎಂದು ನನಗೆ ಅನ್ನಿಸುತ್ತದೆ. ಈಗ ಎರಡು ವರ್ಷಗಳ ಹಿಂದೆ ಬಿಜಾಪುರದಲ್ಲಿದ್ದ ಅಗ್ರಿಕಲ್‌ಚರಲ್ ಲೇಬರರ್ಸ್ ಆಗಿದ್ದ 70 ಲಂಬಾಣಿ ಫ್ಯಾಮಿಲಿಗಳನ್ನು ಕರೆದುಕೊಂಡು ಬಂದು ಲಕ್ಷಾಂತರ ರೂಪಾಯಿಗಳನ್ನು ಖರ್ಚುಮಾಡಿ ತುಂಗ ಭದ್ರಾ ಪ್ರಾಜೆಕ್ಟಿನಲ್ಲಿ ಎರಡು ಎಕರೆ ಖುಷ್ಕಿ ಒಂದು ಎಕರೆ ತರೀ ಭೂಮಿಯನ್ನು ಒಂದೊಂದು ಫ್ಯಾಮಿಲಿಗೆ ಕೊಟ್ಟು ಎಲ್ಲಾ ಸೌಲಭ್ಯಗಳನ್ನೂ ಕೊಟ್ಟು ವ್ಯವಸಾಯ ಮಾಡಿಕೊಂಡು ಜೀವನ ಮಾಡಿಕೊಂಡು ಹೋಗಿ ಎಂದು ಹೇಳಿದರೆ ಅವರು ಸ್ವಲ್ಪ ದಿವಸ ಇದ್ದು ಅಲ್ಲಿಂದ ಹೊರಟುಹೋದರು.

ಆದಕಾರಣ ನಾರಾಯಣಸ್ವಾಮಿಯವರು ಹೇಳಿದ ಪ್ರಕಾರ, ಕನಿಷ್ಠಪಕ್ಷ ಎಂದರೆ, ಒಬ್ಬ ವ್ಯಕ್ತಿಗೆ ನೀವು ಕೊಡತಕ್ಕಂಥ ಜಮೀನು ಖುಷ್ಕಿಯಾದರೆ 20 ಎಕರೆ, ತರಿಯಾದರೆ ಐದು ಎಕರೆ ಇರಬೇಕು. ಎಷ್ಟೋ ಜನಕ್ಕೆ ಜಮೀನು ಬರಲಿ, ಈ ರೀತಿ ಅನುಕೂಲ ಮಾಡಿಕೊಟ್ಟರೆ, ಸ್ವಲ್ಪ ಸಹಾಯವಾಗುತ್ತದೆ ಮತ್ತು ಭೂಮಿದಾಹ ತೃಪ್ತಿಯಾಗುತ್ತದೆ. ಈ ಸಲಹೆಯನ್ನು ಮುಂದೆ ಸೆಲೆಕ್ಟ್ ಕಮಿಟಿಯವರು ಆಲೋಚನೆ ಮಾಡಬೇಕೆಂದು ನಾನು ಅಭಿಪ್ರಾಯಪಡುತ್ತೇನೆ.

ಒಬ್ಬ ಸದಸ್ಯರು.—ಅನೇಕ ಜಿಲ್ಲೆಗಳಲ್ಲಿ ಜಮೀನುದಾರರು ಜಮೀನಗಳು ಪಟಾಲು (ಪಾಳು) ಬಿದ್ದಿವೆ ಎಂಬುದು ತಮಗೆ ಗೊತ್ತಿದೆಯೇ ?

ಶ್ರೀಮತಿ ಬಸವರಾಜೇಶ್ವರಿ.—ಜಮೀನ್ ದಾರಿ ಸಿಸ್ಟಮ್ ಅಬಾಲಿಷ್ ಆಗಿದೆ. ಮನುಷ್ಯ ಎಷ್ಟು ಜಮೀನನ್ನು ಮಾಡಲಿಕ್ಕೆ ಸಾಧ್ಯವೋ ಅಷ್ಟು ಜಮೀನನ್ನು ಇಟ್ಟುಕೊಂಡಿರುತ್ತಾನೆಯೇ ಹೊರತು, ಮಾಡಲು ಶಕ್ಯವಿಲ್ಲದ ಹೆಚ್ಚಿಗೆ ಜಮೀನನನ್ನಿಟ್ಟುಕೊಂಡು ಕೈಯಿಂದ, ಕಂದಾಯ, ಅಗ್ರಿಕಲ್‌ಚರ್ ಟ್ಯಾಕ್ಸ್ ಕೊಡಲಿಕ್ಕೆ ಸಿದ್ಧವಿಲ್ಲ. ದಯವಿಟ್ಟು ಮಾನ್ಯ ಸದಸ್ಯರು ಈ ವಿಷಯವನ್ನು ತಿಳಿದುಕೊಳ್ಳಬೇಕು.

ಸೆಕ್ಷನ್ 10ರಲ್ಲಿ ಲಿಟಿಗೇಷನ್ನಿಗೆ ಬಹಳ ಆಸ್ಪದವಿದೆ. ಸೆಲೆಕ್ಟ್ ಕಮಿಟಿಯಲ್ಲಿ ಮಾನ್ಯ ರೆವಿನ್ಯೂ ಮಂತ್ರಿಗಳು ಇದನ್ನು ಸ್ವಲ್ಪ ವಿಚಾರ ಮಾಡಿನೋಡಬೇಕು.

ಗೇಣಿ ವಿಚಾರ ಹೇಳಬೇಕೆಂದರೆ, ಗೇಣಿದಾರ ಒಟ್ಟು ಹುಟ್ಟುವಳಿಯ ನಾಲ್ಕರಲ್ಲಿ ಒಂದಂಶ ಅಥವಾ ಐದರಲ್ಲಿ ಒಂದಂಶ ಕೊಡಬೇಕೆಂದು ಬಿಲ್ಲಿನಲ್ಲಿ ಹೇಳಿದ್ದೀರಿ. ಇದು ಎರಡು ಕಡೆಗೂ ಅಪ್ಲೈ ಆಗಬೇಕು. ಲ್ಯಾಂಡ್ ಲಾರ್ಡ್ಸ್ ಕಂದಾಯ ಕೊಡುವುದಾದರೆ ಅವರಿಗೆ ನಾಲ್ಕನೆಯ ಒಂದು ಭಾಗ ಗೇಣಿ ಕೊಡುವುದರಲ್ಲಿ ಅರ್ಥವಿದೆ. ರೈತರೇ ಕಂದಾಯ ಕೊಡುವುದಾದರೆ, ಭೂ ಮಾಲಕನಿಗೆ ಐದನೆಯ ಒಂದು ಭಾಗ ಗೇಣಿ ಇರಬೇಕೆಂದು ನಾನು ನಿರ್ದಿಷ್ಟವಾಗಿ ಹೇಳಬಯುಸುತ್ತೇನೆ. ಮತ್ತು ಅದನ್ನು ಪ್ರತಿವರ್ಷ ತಪ್ಪದೆ ಕೊಡುವುದಕ್ಕೆ ಅವಕಾಶವಿರಬೇಕು. ಮೂರು ವರ್ಷ ಕೊಡದಿದ್ದರೆ, ಸರ್ಕಾರದವರು ಭೂ ಮಾಲಕರಿಗೆ ಗೇಣಿದಾರರನ್ನು ಬಿಡಿಸುವುದಕ್ಕೆ ಹಕ್ಕಿರಬೇಕು.

ಸೆಕ್ಷನ್ 17ನ್ನು (Suspensions, remissions, reduction or enhancement of rent) ಸರ್ಕಾರ ಆಲೋಚನೆ ಮಾಡಬೇಕು. ಅದರಲ್ಲಿ ಕ್ಲಾಜ್ 6 (a) ಮತ್ತು (b) ಯನ್ನು ಅನಾವಶ್ಯಕವಾಗಿ ಇನ್‌ಕ್ಲೂಡ್ ಮಾಡಿದೆ. ಈ ಕ್ಲಾಜಿನಂತೆ ಯಾವಾಗಲಾದರೂ ದುಷ್ಕಾಲ ಬಂದರೆ, ರೆಂಟನ್ನು ರೆಡ್ಯೂಸ್

ಮಾಡಬಹುದು ಮತ್ತು ಭೂಮಾಲೀಕನು ಭೂಮಿಯನ್ನು ಇಂಪ್ರೂವ್ ಮಾಡುವುದಕ್ಕೆ ಹಣ ಖರ್ಚು ಮಾಡಿದರೆ, ರೆಂಟ್ ಜಾಸ್ತಿ ಮಾಡಬಹುದು. ಈ ಅಂಶಗಳನ್ನು ಪ್ರೂವ್ ಮಾಡಬೇಕಾದರೆ ಕಷ್ಟ, ಇವು ವಕೀಲರಿಗೆ ಆಸ್ಪದ ಮಾಡುವುದಕ್ಕೆ ಮಾತ್ರ ಅನುಕೂಲವಾಗುತ್ತದೆ.

ಸೀಲಿಂಗ್ ವಿಷಯದ ಮೇಲೆ ಮಾತನಾಡುತ್ತಾ, ಮಾನ್ಯ ಸದಸ್ಯರನೇಕರು, ಒಂದು ಸೆಕ್ಟಾರ್ ಮೇಲೆ ಸೀಲಿಂಗ್ ಹಾಕಿದರೆ, ದೇಶದಲ್ಲಿ ಅತೃಪ್ತಿ ಉಂಟಾಗುವುದೆಂದು ಹೇಳಿದ್ದಾರೆ. ನಾವು ಯಾವಾಗ ಸೋಷಿಯಲ್ ಜಸ್ಟೀಸ್ ಮಾಡುತ್ತೇವೆಂದು ಹೊರಟಿದ್ದೇವೆಯೋ, ಆವಾಗ ಎಲ್ಲರಿಗೂ ಸೋಷಿಯಲ್ ಜಸ್ಟೀಸ್ ಮಾಡೋಣ. ಎಲ್ಲಾ ಸೆಕ್ಟಾರುಗಳಲ್ಲಿಯೂ ಸೋಷಿಯಲ್ ಜಸ್ಟೀಸ್ ಮಾಡೋಣ ಒಂದು ಕ್ಷೇತ್ರದವರು ಚೆನ್ನಾಗಿದ್ದಾರೆ, ನಾವು ಕೆಡುತ್ತಿದ್ದೇವೆ ಎಂಬ ಭಾವನೆ ಬರುವುದು ಮನುಷ್ಯನಿಗೆ ಸ್ವಾಭಾವಿಕ. ಇತರ ಸೆಕ್ಟಾರುಗಳಲ್ಲಿ ಕೂಡ ಸೀಲಿಂಗ್ ಹಾಕಲಿಕ್ಕೆ ಪ್ಲಾನಿಂಗ್ ಕಮಿಷನ್ನಿನವರು ಅಭಿಪ್ರಾಯಪಟ್ಟಿದ್ದಾರೆಂದು ಮಾನ್ಯ ಸದಸ್ಯರಾದ ಹೆಗ್ಗಡೆಯವರು ತಮ್ಮ ಭಾಷಣದಲ್ಲಿ ತಿಳಿಸಿದ್ದಾರೆ. ಹೀಗಿದ್ದ ಪಕ್ಷದಲ್ಲಿ, ಈ ಸೀಲಿಂಗನ್ನು ಇತರ ಕ್ಷೇತ್ರಗಳಲ್ಲಿಯೂ ಹಾಕಬೇಕು, ಮತ್ತು ಜತ್ತಿ ಕಮಿಟಿಯವರು ಶಿಫಾರಸು ಮಾಡಿರುವ ಪ್ರಕಾರ ಹಿಡುವಳಿ ಪರಮಾವಧಿ ಮಿತಿ 5,400 ರೂಪಾಯಿ ಇರಬೇಕೆಂದು ಅಭಿಪ್ರಾಯ ಪಡುತ್ತೇನೆ. ಸೀಲಿಂಗ್ ಫಿಕ್ಸ್ ಮಾಡುವ ಕಾಲಕ್ಕೆ, ಅದನ್ನು ಏಕರೇಜ್ ಮಾಡುವ ವಿಷಯದಲ್ಲಿ ಮಾನ್ಯ ಸದಸ್ಯರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಲ್ಯಾಂಡ್ ಕಮಿಷನ್ನಿನವರು ಫರ್ಟಿಲಿಟಿ ಬೆಳೆ, ಮುಂತಾದುವನ್ನು ನೋಡಿ ಪರಿಮಿತಿಯನ್ನು ನಿರ್ಧಾರ ಮಾಡಬೇಕೆಂದು ಹೇಳಿದರೂ, ಇದನ್ನು ಜಮೀನಿನಿಂದ ಬರತಕ್ಕಂಥ ಇನ್‌ಕಂ ಕ್ಯಾಲುಕುಲೇಟ್ ಮಾಡಿ ಫಿಕ್ಸ್ ಮಾಡಬೇಕೆಂದು ನನ್ನ ಅಭಿಪ್ರಾಯ.

ಕಾಂಪೆನ್ಸೇಷನ್ ವಿಷಯದಲ್ಲಿ ಮಾತನಾಡುತ್ತಾ ಮಾನ ಸದಸ್ಯರೊಬ್ಬರು, ಜಮೀನ್‌ದಾರರು ಭೂಮಿಯನ್ನು ಹೇಗೆ ಹೇಗೋ ಸಂಪಾದಿಸಿದ್ದಾರೆ, ಆದ್ದರಿಂದ ಗೇಣಿಯ ಐದು ಪಟ್ಟು ಕೊಟ್ಟರೆ ಸಾಕೆಂದು ಹೇಳಿದರು. ಸಮಾಜದಲ್ಲಿ ಪ್ರತಿಯೊಬ್ಬರೂ ಸಂಪತ್ತನ್ನು ಒಂದೊಂದು ನಮೂನೆಯಲ್ಲಿ ಸಂಪಾದಿಸುತ್ತಾರೆ. ಕೆಲವರು ತಮ್ಮ ಸಂಪಾದನೆಯನ್ನು ಇಂಡಸ್ಟ್ರೀಸ್ ಮೇಲೆ ಹಾಕುತ್ತಾರೆ. ಇನ್ನು ಕೆಲವರು ಬೇರೆ ವಿಧವಾದ ಸೆಕ್ಟಾರುಗಳ ಮೇಲೆ ಹಾಕುತ್ತಾರೆ. ರೈತರು ತಮ್ಮ ಸಂಪಾದನೆಯನ್ನು ಕ್ರೋಡೀಕರಿಸಿ ಭೂಮಿಯ ಮೇಲೆ ಇನ್‌ವೆಸ್ಟ್ ಮಾಡಿರುತ್ತಾರೆ. ತಾವು ಯಾರೊಬ್ಬರಿಗೆ ಸೋಷಿಯಲ್ ಜಸ್ಟೀಸ್ ಮಾಡುವುದಕ್ಕೆ ಹೊರಟಿದ್ದೀರೋ, ಅದೇ ಪ್ರಕಾರ ಯಾರ ಭೂಮಿಯನ್ನು ತೆಗೆದುಕೊಳ್ಳುತ್ತೀರೋ, ಆತನಿಗೆ ಸರಿಯಾದ ಪರಿಹಾರ ದ್ರವ್ಯ ಕೊಡುವುದು ಸರ್ಕಾರದ ಜವಾಬ್ದಾರಿ. ನಿಮ್ಮ ಬಿಲ್ಲಿನಲ್ಲಿ, compensation is so many timesthe annual rent ಎಂದು ಹೇಳಿದ್ದೀರಿ ಜಹಗಿರಿ ಅಬಾಲಿಷನ್ ಆಕ್ಟಿನಲ್ಲಿ ನಮೂದಿಸಿರುವಂತೆ, ಇಲ್ಲಿಯೂ ಗ್ರೇಡೆಡ್ ಕಾಂಪೆನ್ಸೇಷನ್ ಕೊಡಬೇಕು. ಕಮ್ಮಿ ಉತ್ಪನ್ನ ಬರತಕ್ಕಂಥವರಿಗೆ ಜಾಸ್ತಿ ಕಾಂಪೆನ್ಸೇಷನ್ ಕೊಟ್ಟಿದ್ದಾರೆ. ಜಾಸ್ತಿ ಇನ್‌ಕಂ ಬರತಕ್ಕಂಥವರಿಗೆ ಕಮ್ಮಿ ಕಾಂಪೆನ್ಸೇಷನ್ ಕೊಟ್ಟಿದ್ದಾರೆ. ಕಮ್ಮಿ ಇನ್‌ಕಂ ಬರತಕ್ಕಂಥವರಿಗೆ ಎಂಟು ಹತ್ತು ಇನ್‌ಸ್ಟಾಲ್‌ಮೆಂಟುಗಳಲ್ಲಿ ಕೊಟ್ಟು, ಜಾಸ್ತಿ ಇನ್‌ಕಂ ಇದ್ದವರಿಗೆ 25 ಇನ್‌ಸ್ಟಾಲ್‌ಮೆಂಟುಗಳಲ್ಲಿ ಕೊಡುತ್ತಾ ಇದ್ದಾರೆ. ಗ್ರೇಡೆಡ್ ಕಾಂಪೆನ್ಸೇಷನ್ ಕ್ಯಾಲುಕುಲೇಟ್ ಮಾಡಿ, ಜಹಗಿರಿ ಅಬಾಲಿಷನ್ ಆಕ್ಟಿನಲ್ಲಿರುವಂತೆ, ಈ ಬಿಲ್ಲಿನಲ್ಲಿಯೂ ಮಾಡಿದರೆ ಭೂಮಾಲಕರಿಗೆ ಅನುಕೂಲವಾಗುತ್ತದೆಂದು ನನಗೆ ಅನ್ನಿಸುತ್ತದೆ.

ಕಾಂಪೆನ್ಸೇಷನ್ ಕೊಡುವ ಕಾಲಕ್ಕೆ ಹತ್ತು ಸಾವಿರ ರೂಪಾಯಿವರೆಗೆ ಕಾಂಪೆನ್ಸೇಷನ್ನನ್ನು ಲಂಪ್‌ಸಮ್ಮಾಗಿ ಕೊಟ್ಟರೆ ಒಳ್ಳೆಯದು. ಈ ರೀತಿ ಮಾಡಿದರೆ ಕಾಂಪೆನ್ಸೇಷನ್ ತೆಗೆದುಕೊಳ್ಳುವವರು ಮುಂದಿನ ಜೀವನವನ್ನು ಕಲ್ಪಿಸಿಕೊಂಡು ಜೀವನ ಮಾಡುವುದಕ್ಕೆ ಅನುಕೂಲವಾಗುತ್ತದೆ. ಹತ್ತು ಸಾವಿರ ರೂಪಾಯಿನ ಮೇಲೆ ಕಾಂಪನ್ಸೇಷನ್ ಕೊಡುವವರಿಗೆ, ಇನ್‌ಸ್ಟಾಲ್‌ಮೆಂಟ್ ಮೇಲೆ ಕೊಡಬಹುದೆಂದು ಅಭಿಪ್ರಾಯ ಪಡುತ್ತೇನೆ

ಲ್ಯಾಂಡ್ ಕಮಿಷನ್ನಿಗೆ ಅನೇಕ ತರಹ ಜವಾಬ್ದಾರಿಗಳನ್ನು ಕೊಟ್ಟಿದ್ದಾರೆ. ಲ್ಯಾಂಡ್ ಕಮಿಷನ್ನಿಗೆ ವಹಿಸಿರುವ ವಿಷಯಗಳು ಬಹಳ ಮಹತ್ವದ ವಿಷಯಗಳು. ಹೈದರಾಬಾದ್ ಕರ್ಣಾಟಕದಲ್ಲಿ ನಿರ್ಮಿತವಾಗಿದ್ದ ಲ್ಯಾಂಡ್ ಕಮಿಷನ್ನು ಕೇವಲ ನಾಲ್ಕು, ಐದು ತಿಂಗಳಿನಲ್ಲಿ ದೇಶಾದ್ಯಂತ ತಿರುಗಿ, ಇಷ್ಟೇ ಭೂಮಿಯಲ್ಲಿ ಇಷ್ಟೇ ತರಹ ಬೆಳೆಯಾಗುತ್ತದೆಂಬುದನ್ನು ಕೂಲಂಕಶವಾಗಿ ಪರಶೀಲನೆ ಮಾಡಿ, ತಮ್ಮ ವರದಿಯನ್ನು ಸ್ವಲ್ಪ ವೇಳೆಯಲ್ಲಿಯೇ ಮುಗಿಸಿಕೊಟ್ಟಿದ್ದಾರೆ. ಈ ಲ್ಯಾಂಡ್ ಕಮಿಷನ್ನು ಬಹಳ ಅತ್ಯಗತ್ಯವಾದುದು. ಅದನ್ನು ಮಾಡಲೇಬೇಕು. ಲ್ಯಾಂಡ್ ಕಮಿಷನ್ನು ಹುಟ್ಟುವಳಿಯನ್ನೂ ಮತ್ತು ಗೇಣಿಯನ್ನೂ ಫಿಕ್ಸ್ ಮಾಡುವುದರಿಂದ ಎರಡು ತರಹದಲ್ಲಿ ಅನುಕೂಲವಾಗುತ್ತದೆಂದು ಅಭಿಪ್ರಾಯ ಪಡುತ್ತೇನೆ. ಹೈದರಾಬಾದ್ ಕಾನೂನಿನಲ್ಲಿ ರೈತನಾಗಲಿ, ಭೂಮಾಲಕನಾಗಲಿ, ಯಾರಾದರೂ ಕೂಡ, ಭೂಮಿಯಲ್ಲಿ ಇಷ್ಟೇ ಪ್ರಮಾಣ ಬೆಳೆಯಬೇಕು, ಮಿನಿಮಮ್ ಪ್ರೊಡಕ್ಷನ್ ಇಷ್ಟೇ ಇರಬೇಕೆಂದಿದೆ. ಆ ಪ್ರಾವಿಷನ್ನನ್ನು ನಮ್ಮ ಬಿಲ್ಲಿನಲ್ಲಿ ಸೇರಿಸಿದರೆ ಬಹಳ ಒಳ್ಳೆಯದು. ಹೀಗೆ ಮಾಡುವುದರಿಂದ ಹೆಚ್ಚು ಆಹಾರ ಬೆಳೆಯಲು ಉಪಯೋಗವಾಗುತ್ತದೆಂದು ನನಗನಿಸುತ್ತದೆ.

ಕೋ-ಆಪರೇಟೀವ್ ಫಾರ್ಮಿಂಗ್ ಬಗ್ಗೆ ನನ್ನ ಅಭಿಪ್ರಾಯವೇನೆಂದರೆ, ಮೊದಲು ಸ್ವಲ್ಪ ಗವರ್ನ್‌ಮೆಂಟ್ ಲ್ಯಾಂಡಿನಲ್ಲಿ ಎಕ್ಸ್‌ಪೆರಿಮೆಂಟಲ್ ಮೇಷರಾಗಿ ಈ ಪದ್ಧತಿಯನ್ನು ನಡೆಸಿ. ಖಾಸಗಿಯವರು ಈ ಪದ್ಧತಿಯನ್ನು ಉಪಯೋಗಿಸಲು ಮುಂದಕ್ಕೆ ಬಂದರೆ ಅವರಿಗೂ ಅನುಕೂಲ ಮಾಡಿಕೊಡಿ. ಆದರೆ ಮೊದಲು ಸರ್ಕಾರ ಪ್ರತಿಯೊಂದು ಜಿಲ್ಲೆಯಲ್ಲಿಯೂ ಕೋ-ಆಪರೇಟೀವ್ ಫಾರ್ಮಿಂಗ್ ಟ್ರೈ ಮಾಡಿ, ಅದು ಯಶಸ್ವಿಯಾದರೆ, ಇತರ ಎಲ್ಲಾ ಭಾಗಗಳಿಗೂ ಜಾರಿಗೆ ಕೊಡುವುದು ಒಳ್ಳೆಯದು ಎಂದು ನನ್ನ ಅಭಿಪ್ರಾಯ.

ನನಗೆ ಇಷ್ಟು ಹೇಳುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ಅಧ್ಯಕ್ಷರಿಗೆ ವಂದನೆಗಳನ್ನು ಕೊಟ್ಟು ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಗಜಾನನ ಪಂಡಿತ್ (ಮಂಗಳೂರು II).—ಗ್ರೇಡೆಡ್ ಕಾಂಪೆನ್ಸೇಷನ್ ಹೆಚ್ಚಿಗೆ ಜಮೀನನ್ನು ತೆಗೆದುಕೊಂಡಿರುವವರಿಗೆ ಕೊಡಬೇಕೆಂದು ಹೇಳುತ್ತೀರಿ ಹಾಗಾದರೆ ಅವರಿಗೆ ಕರವನ್ನು ಕಡಮೆ ಮಾಡಬೇಕೆಂಬುದಾಗಿ ತಮ್ಮ ಅಭಿಪ್ರಾಯವೋ?

ಶ್ರೀಮತಿ ಬಸವರಾಜೇಶ್ವರಿ.—ನ್ವ ಬೇಕೆಂದು ನನ್ನ ಅಭಿಪ್ರಾಯ.

[MR. SPEAKER in the Chair]

†Sri F. X. DENIS PINTO.—Mr. Speaker, Sir, this Bill has been before us for several days. Though the Revenue Minister has come in for certain criticism, we have to admit that many a time garlands and boques have been showered on him and so naturally if some brick-bats are thrown at him he will take them sportingly and try to do justice to all classes of people who are affected by this Bill. I would like to refer to the elaborate note which he has prepared and circulated to us, and make my observations.

At the very outset the Hon'ble Minister says, "The Bill has been introduced with a view to enact a uniform law relating to tenancy and agricultural lands throughout the new State of Mysore." We all know from the several speeches made in this House that there are different opinions expressed by different members coming from different areas integrated in the new State of Mysore. That shows the fertility of the soil is different from region to region and that the relationship between tenants and landlords in the various regions differs from place to place. That being so, I do not know how a uniform tenancy law could be made throughout the State of Mysore. In fact, my friend Sri Kothavale from Belgaum when he was supporting the Bill said that certain provision should be made specially for North Karnatak as the yield in that area is very low. This only shows that the nature of the lands and also the tenancy system prevailing in the different parts of the State differ from each other.

Then, the Hon'ble Minister says that the "Acts that are in force in the old Mysore area, South Kanara and Coorg are too conservative in affording protection to the tenants." I do not quite agree with this observation. In fact, in the former Madras State we had two very progressive Acts. They provide for security of tenure to the tenants and also fair rent. The tenants in our area who have taken lands on lease are very happy and they have no grievance as fixity of tenure and fair rent are assured to them.

Coming to the third point, the Minister says, "Among other things, these recommendations provide for giving certain rights and privileges including conferment of occupancy rights in favour of the tenants. They also provide for security of tenure, determination of fair rent and imposition of ceiling." As far as these things are concerned, in South Kanara, as my friends have already said, there are peculiar circumstances. As will be seen from the Report of the Jatti Committee, in South Kanara about 70 per cent of the lands are held by tenants who are not having one basic holding. Naturally when the question of resumption arises, no landholder will be able to resume even one per cent of the land. So if this clause is brought into force either the landholders will be thrown in the streets or the tenants will be evicted if the landholders are given an option to resume even one family holding. So what I suggest is that since in South Kanara we have given security of tenure to the tenants and also provided for fair rent, that will satisfy the needs of the cultivating public of South Kanara.

The Minister has said that "In a measure like this, we cannot give satisfaction to all the people concerned, but we can try to do justice to all." Having said this, I do not know why he has chosen a particular class of people and a particular area for discrimination. It is further said in the speech of the Minister that "the bitter criticism that we have heard against land reforms is mostly from absentee landlords most of whom enjoy a comfortable living in the urban areas and who have also other sources of income." I say that this statement is most incorrect. There are several persons owning plantations, but they do not have any other source of income even though they reside in urban areas. To describe them as absentee landlords having other sources of income is most unjust to them. They are not very big landlords. In the olden days everyone tried to conserve his resources either in

land or gold. Later on when banks came in, they began to deposit money in banks instead of investing in lands. In the olden days the idea of investing in lands was that the man would have some creditworthiness and that he could raise a loan easily in case of emergency. Is it his fault that he invested his money on lands? Many landlords have paid very high prices for their lands. Now you want to eliminate this class of landlords. Even if they want to cultivate personally, they cannot get back their lands because 90 per cent of the tenants are having only basic holdings.

Then, Sir, the compensation that you propose to pay is also not just. When the Imperial Bank was nationalised, when the Reserve Bank was nationalised, when the Life Insurance Companies were nationalised the Government came forward to pay the market value of the shares to the shareholders of these institutions. I do not know why in this particular case Government wants to discriminate against landlords and give them not even 40 per cent of the market value. When it was announced that the Mysore Bank would be nationalised it was announced that the shareholders would be paid at the market value of the shares. It is not the fault of the landlords to have invested their money on land. They are not like the big zamindars and jahagirdars who got lands from Tippu Sultan and other Maharajas for their services, but these are persons who have paid hard cash and purchased their lands to have a supplementary income for them. Even industrialists invest on lands so that when depression comes they may fall back on the income from lands and tide over the difficulty. So I submit that if at all you decide to pay compensation it should be 20 times the fair rent. It is said in the speech of the Minister that roughly speaking only three per cent of the landlords are going to be affected by this measure. I can say that out of the three per cent, about 2·5 per cent are from South Kanara itself. This is a matter for serious consideration. It looks to me that not only you are discriminating against a particular class of people, but you are discriminating against a particular area also. About 70 per cent of the people going to be affected by this measure are in South Kanara. The member from Belgaum said that they would have been better off if they were in Bombay. I am not going to say that about our area, though the Madras Act in force in our area is very progressive; I have got full confidence in the Minister that he will do justice and I am sure we will be well off under Mysore.

There is also another point where you have shown discrimination. In the case of surplus lands taken over from landlords or cultivating owners, you have mentioned that the compensation will be paid at 15 times the land revenue or 20 per cent of the gross produce, but in the case of other landowners the compensation is 15 times the land revenue or 50 per cent of the gross produce. I do not know why this discrimination is made. There should be a uniform rate of compensation.

6 P.M.

Secondly, as far as South Kanara is concerned, though there is no assured irrigation, there is rain fed area divided into three classes. For first class and second class nanja, fair rent may be fixed as 25 per cent of the gross produce; for *petu* land as 20 per cent.

Sri C. J. MUCKANNAPPA.—What about bagayet?

Sri F. X. DENIS PINTO.—For bagayet it will be fixed as 20 per cent of the gross produce.

Regarding ceiling on income, whatever the House decides, we are agreeable. The main point is, who is the tiller of the soil. But as I said earlier, to-day tenants are well off. Those whose voice is never heard are the labourers who toil from morning eight till six in the evening. It passes my comprehension as to why they are not considered to be tillers of the soil. It is by their labour that produce is got. There is nothing in the Bill to protect their rights. Of course it is said that the Minimum Wages Act is there. Why those people are excluded

(SRI F. X. DENIS PINTO)

and are not given lands is what I cannot understand. How you define 'self cultivation' is itself a thing which I cannot understand. In Madras self cultivation means cultivation by a family member—husband, wife or their children. My suggestion is, if tenants are taken as tillers of the soil and they share the lands, it should apply to other sectors as well. There should not be a particular kind of discrimination for a particular class of people.

The Planning Commission on the Land Reforms also speaks of increase of food production. By fragmentation of land do you really increase food production? It is admitted on all hands that food production can be increased by mechanisation, by means of new implements, by applying intensive fertilisers and so on. Here we are having fragmentation. It is the duty of the Government to see that pressure on land is reduced, more and more industries are set up and people are absorbed in industrial labour so that there may be no fragmentation of land and there may be intensive cultivation and increase of food. In Japan production is much higher than in our country. Secondly they have kept a flooring price; they don't allow the prices to go down. By giving incentives, bonuses and all sorts of help in getting fertilisers, implements, etc., they are trying to increase production. But here we are trying to fragment every bit of land and to see that tenant is the owner? With the income that he derives how can a tenant maintain his family and educate his children. The question for consideration is whether we could try co-operative farming where owners of lands join the tenants, where the tenants and labourers will have equal share in the produce of the land.

They say that 61·4 lakhs of acres are under agriculture; 25 lakhs are under tenants; 46·4 lakhs are under owner cultivators of which they say only 2 lakhs are available as surplus land for distribution. Again, out of 44·4 lakhs, 2 lakhs may be under plantation. So 42 lakhs are owend by those so called self-cultivators-owners. This Bill seeks to protect the interests of the owners of those 42 lakhs and try to discriminate against certain other class of people.

Now coming to exemption regarding the lands held by charitable trusts and temples, some one said that we are not divorced from God and Religion. For the purpose of carrying on certain duties, property is bequeathed to temples and trusts subject to certain conditions and under the provisions of this Bill interest and compensation are to be paid. I do not think they will be able to carry on the duties enjoined by the trusts. So I would request that these lands may be exempted from being given over to tenants. The tenants may have tenancy and fair rent may be fixed and with that income the temples and trusts may carry on the duties.

On page 11 of the Bill, it is said:

> "Delimitation of local areas.—The State may by notification specify and delimit areas each of which shall constitute a local area for the purposes of this Act ......"

I would like South Kanara may be classified as a separate local area and the conditions looked into.

SRI C. J. MUCKANNAPPA.—Why should it be separate?

SRI F. X. DENIS PINTO.—The Bill itself states that.

With regard to land ceiling also I suggest that it may be fixed in terms of acres—so many acres in the case of wet land and so many acres in the case of dry land.

With regard to the resumption of land by the landholder, I feel there should not be any condition in regard to income. Whether he has income or not, if he is a descendant of the farmer, he will have incentive and will be much better than an outsider and so he must be allowed to resume the land.

With these few remarks I support the Bill.

MR. SPEAKER.—Before we rise, I would like to state the position today. The total number of participants in the debate is 45 out of which 23 are

Congress Party members and 22 are Opposition Party members out of which nine belong to P.S.P. and 13 are Independents. The total time taken is 40 hours. The Congress Party members have taken 18 hours 40 minutes; the Opposition Party members 21 hours 20 minutes out of which P.S.P. members have taken nine hours and Independents 12 hours 20 minutes. This session has be n more or less of Independents.

As all Hon'ble Members know there is a function at nine in the morning tomorrow and I am expected to speak. I do not know what I have to speak because all that I wanted to speak has been printed and distributed. There is also one small item and that is Tea. I hope all the members will attend and if any of you have not received the invitation please treat this as an invitation.

Sri C. J. MUCKANNAPPA.—Is there no further discussion on the Bil tomorrow ?

Mr. SPEAKER.—We shall see what happens tomorrow. If at all, I will try to accommodate one or two members. I have seen them for the last four days trying to speak. Out of consideration for them I shall give them a chance.

The House now rises and meets tomorrow at 11-15 A.M.

———

The House adjourned at Fifteen Minutes past Six of the Clock to meet again at Fifteen Minutes past Eleven of the Clock on Sunday, the 9th August 1959.